# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಡಿಸೆಂಬರ್, ೨೦೨೧** **ಸಂಪಾದಕ : ಡಿ. ಎಸ್. ನಾಗಭೂಷಣ** **ಸಂಪುಟ: ೧೦ ಸಂಚಿಕೆ: ೧೧**

**ಚಂದಾ ರೂ. ೧೫೦/- (೨೦೨೧ರ ಅಕ್ಟೋ.ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ** ರೂ. ೨೦೦/- ಪುಟ: ೨೦ ಬೆಲೆ: ರೂ. ೨೫/-


**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೯೫೩೧೨ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕೊನೆಗೂ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ಹಿಂದೆಗೆದುಕೊಳ್ಳುವ ನಿರ್ಧಾರ ಪ್ರಕಟಿಸಿದೆ. ಪತ್ರಿಕೆ ನಿಮ್ಮನ್ನು ತಲುಪುವ ವೇಳೆಗೆ ಇದು ಸಂಸತ್ತಿನಲ್ಲಿ ವಿಧ್ಯುಕ್ತ ಪ್ರಕ್ರಿಯೆಯಾಗಿ ಪೂರ್ಣಗೊಂಡಿರಲೂಬಹುದು. ಸ್ವತಃ ಪ್ರಧಾನಮಂತ್ರಿ ನರೇದ್ರ ಮೋದಿಯವರೇ ಗುರುನಾನಕ್ ಜಯಂತಿಯಂದು ರಾಷ್ಟ್ರೀಯ ಪ್ರಸಾರ ಭಾಷಣದ ಮೂಲಕ ಇದನ್ನು ತಿಳಿಸಿದ್ದಾರೆ. ಒಂದು ವರ್ಷದ ಕಾಲ ನಿರಂತರವಾಗಿ, ಬಹು ವ್ಯವಸ್ಥಿತವಾಗಿ ಮತ್ತು ಮುಖ್ಯವಾಗಿ ಸಂಪೂರ್ಣ ಅಹಿಂಸಾತ್ಮವಾಗಿ ನಡೆದ ರೈತ ಹೋರಾಟ ಅಂತಿಮವಾಗಿ ಜಯ ಗಳಿಸಿದೆ. ಇದಕ್ಕಾಗಿ ಅದು ಸುಮಾರು ಏಳು ನೂರು ಜನ ರೈತರ ಪ್ರಾಣವನ್ನು ಬಲಿಕೊಡಬೇಕಾಯಿತು ಎಂಬುದನ್ನೂ ಇಲ್ಲಿ ಹೇಳಬೇಕು. ಇದಕ್ಕೆ ಕಾರಣ ಸರ್ಕಾರದ ಹಠಮಾರಿತನ ಮತ್ತು ಅದರ ನಿರ್ದಯಿ ಪ್ರತಿರೋಧದ ಮತ್ತು ದಮನಕಾರಿ ಕ್ರಮಗಳು.

ಈ ದೃಷ್ಟಿಯಿಂದ ನೋಡಿದಾಗ ಪ್ರಧಾನಿಯವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ರೈತ ಸಮುದಾಯ ಕುರಿತ ತಮ್ಮ ಸರ್ಕಾರದ ಸೌಹಾರ್ದ-ಸಹಾನುಭೂತಿಯ ಮತ್ತು ಈ ಸಮುದಾಯಕ್ಕೆ ಸರ್ಕಾರದ ಕೃಷಿ ಕಾಯ್ದೆಗಳ ಪ್ರಯೋಜನ ಕುರಿತು ಮನದಟ್ಟು ಮಾಡುವಲ್ಲಿ ಎದುರಿಸಿದ ವೈಫಲ್ಯದ ಬಗ್ಗೆ ಆಡಿದ ರಾಷ್ಟ್ರದ ಕ್ಷಮೆಯಾಚನೆಯ ಮಾತುಗಳು ಅಮಾಯಕವೂ ನಾಟಕೀಯವಾಗಿಯೂ ಕೇಳಿಸುತ್ತವೆ. ವಿಶೇಷವಾಗಿ, ಈ ಸಂಬಂಧದ ತಮ್ಮ 'ತಪಸ್ಯಾ'ದಲ್ಲಿ ಏನೋ ಕೊರತೆ ಇರಬಹುದು ಎಂಬ ಅವರ ಭವ್ಯ ಶೈಲಿಯ ಮಾತು. ಇದು ಏಕಾಗ್ರತೆಯಿಂದ ಮತ್ತು ಶಾಂತಿಯುತವಾಗಿ ಚಳಿ-ಮಳೆ-ಗಾಳಿ-ಬಿಸಿಲು-ಸಾಂಕ್ರಾಮಿಕಗಳನ್ನು ಲೆಕ್ಕಿಸದೆ ತಮ್ಮ ಪ್ರಾಣಗಳ ಪಣವೊಡ್ಡಿ ನಿಜವಾದ 'ತಪಸ್ಯಾ'ದಂತೆ ನಡೆಸಿದ ಹೋರಾಟದ ವಿರುದ್ಧ ಪ್ರತ್ಯೇಕವಾದ, ದೇಶದ್ರೋಹ, ಸಾರ್ವಜನಿಕ ಅಶಾಂತಿ ಇತ್ಯಾದಿ ಆಪಾದನೆಗಳ ಅಪಪ್ರಚಾರ ಕೈಗೊಂಡಿದ್ದಲ್ಲದೆ ಜಲಫಿರಂಗಿ, ಮುಳ್ಳು ಬೇಲಿ, ಲೋಹದ ಮುಳ್ಳು ಇತ್ಯಾದಿಗಳ ಮೂಲಕ ಹಿಂಸೆ ನೀಡಿ, ಕೊನೆಗೆ ಒಂದು ರಾಜ್ಯದ ಮುಖ್ಯಮಂತ್ರಿಯಿಂದಲೇ ದೊಣ್ಣೆ ದಾಳಿಯ ಮಾತಾಡಲು ಅವಕಾಶ ನೀಡಿದ ಸರ್ಕಾರದ ನಾಚಿಕೆಗೇಡಿನ ಮಾತಿನಂತೆ ಯಾರಿಗಾದರೂ ಕೇಳಿಸಿದರೆ ಆಶ್ಚರ್ಯವಿಲ್ಲ.

ಸರ್ಕಾರ ತನ್ನ ನಿರ್ಧಾರವನ್ನು ಪ್ರಕಟಿಸಲು ಗುರುನಾನಕರ ಜಯಂತಿಯ ದಿನವನ್ನು ಆರಿಸಿಕೊಂಡದ್ದೂ ಅದರ ಕ್ಷಮಾಯಾಚನೆಯ ಹಿಂದಿನ ವಿಷಾದದ ಅಪ್ರಾಮಾಣಿಕತೆಯನ್ನೂ ಸೂಚಿಸುವಂತಿದೆ. ನಿಜವಾದ ವಿಷಾದವಿದ್ದರೆ ಅದು ಪ್ರಕಟವಾಗಲು ಈ ಪವಿತ್ರ ದಿನದ ಆಯ್ಕೆಯಾದರೂ ಏಕೆ? ಇದು ಈ ನಿರ್ಧಾರದ ಹಿಂದಿನ ಪಶ್ಚಾತ್ತಾಪದ ಅಲ್ಲ, ರಾಜಕೀಯ ಲೆಕ್ಕಾಚಾರ ಮತ್ತು ಉದ್ದೇಶಗಳನ್ನು ಬಯಲುಗೊಳಿಸುವಂತಿದೆ. ಬರಲಿರುವ ಪಂಜಾಬ್, ಉತ್ತರ ಪ್ರದೇಶ ಮತ್ತು ಉತ್ತರಾಖಂಡಗಳ ವಿಧಾನಸಭಾ ಚುನಾವಣೆಗಳಲ್ಲಿ ಗಣನೀಯ ಪಾತ್ರ ವಹಿಸಬಲ್ಲ, ಸದರಿ ರೈತ ಚಳುವಳಿಯ ಬೆನ್ನೆಲುಬಾಗಿದ್ದ ಸಿಖ್ (ಮತ್ತು ಜಾಟ್)ರೈತರ ಮನ ಗೆಲ್ಲುವ ಪ್ರಯತ್ನ ಇದಾಗಿರುವಂತಿದೆ. ವಿಶೇಷವಾಗಿ ಪಂಜಾಬ್‌ನಲ್ಲಿ ಇವೇ ಕೃಷಿ ಕಾಯಿದೆಗಳ ಕಾರಣದಿಂದಾಗಿ ಅಕಾಲಿ ದಳ ಮೈತ್ರಿ ಮುರಿದುಕೊಂಡ ನಂತರ, ಮೊದಲೇ ತನ್ನ ಸ್ವಂತ ಪ್ರಭಾವ ಅಷ್ಟೇನೂ ಇಲ್ಲದ ಬಿಜೆಪಿ ಒಂಟಿಯಾಗಿ ಹೋಗಿದ್ದಾಗ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ ಸಿಟ್ಟಿನಲ್ಲಿ ಕಾಂಗ್ರೆಸ್ ಮೇಲೆ ಸೇಡು ತೀರಿಸಿಕೊಳ್ಳಬಯಸಿರುವ ಅಮರೀಂದರ್ ಸಿಂಗ್ ಈ ಕೃಷಿ ಕಾಯಿದೆಗಳನ್ನು ರದ್ದು ಮಾಡಿದರೆ ತಾನು ಮೈತ್ರಿಗೆ ಸಿದ್ಧ ಎಂದು ಪ್ರಕಟಿಸಿದ್ದಲ್ಲದೆ ಈ ಸಂಬಂಧ ಪ್ರಧಾನಿ ಮತ್ತು ಗೃಹ ಸಚಿವರನ್ನು ಭೇಟಿ ಮಾಡಿದ್ದೂ ಇಲ್ಲಿ ಕೆಲಸ ಮಾಡಿದಂತಿದೆ. ಹಾಗಾಗಿ ಕೆಲವು ಮಾಧ್ಯಮಗಳು ಸೂಚಿಸುತ್ತಿರುವಂತೆ ಇದು ಮೋದಿ ರಾಜಕಾರಣದ ವಿಶಿಷ್ಟತೆ ಎಂದು ಹೇಳಲಾಗುವ 'ಅನಿರೀಕ್ಷಿತ' ಅಥವಾ 'ಆಶ್ಚರ್ಯ' ಉಂಟು ಮಾಡುವ ನಿರ್ಧಾರವೇನೂ ಆಗಿರಲಾರದು. ಆದರೆ ರಾಜಕೀಯ ಉದ್ದೇಶದ ಜೊತೆಗೇ ಸಿಖ್ ರೈತರ ಅಸಮಾಧಾನ ಗಡಿ ರಾಜ್ಯವಾದ ಪಂಜಾಬ್‌ನಲ್ಲಿ ಸಾಮೂಹಿಕ ಅಶಾಂತಿಯಾಗಿ ಪರಿವರ್ತಿತವಾಗಿ ಅಲ್ಲಿನ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಹೊರಗಿನಿಂದ ಕುಮ್ಮಕ್ಕು ದೊರೆಯಬಹುದಾದ ಸಾಧ್ಯತೆಗಳ ಬಗ್ಗೆ ಸರ್ಕಾರದ ಗುಪ್ತಚರ ಸಂಸ್ಥೆಗಳು ನೀಡಿರಬಹುದಾದ ವರದಿಗಳೂ ಇಲ್ಲಿ ಕೆಲಸ ಮಾಡಿರುವ ಸಾಧ್ಯತೆಗಳನ್ನು ಅಲ್ಲಗೆಳೆಯಲಾಗುವುದಿಲ್ಲ.

ಅದೇನೇ ಇರಲಿ, ನಮ್ಮ ಪ್ರಜಾಪ್ರಭುತ್ವ ಇತ್ತೀಚಿನ ವರ್ಷಗಳಲ್ಲಿ ಅದೆಷ್ಟೇ ಕಸುವು ಕಳೆದುಕೊಂಡಂತೆ ಕಂಡಿದ್ದರೂ, ಅದು ಕಾಲಕ್ರಮೇಣ ಚೇತರಿಸಿಕೊಳ್ಳುವ ಆಶಯ ಹುಟ್ಟಿಸುವಷ್ಟು ಇನ್ನೂ ಜೀವಂತವಿದೆ ಎಂಬುದನ್ನು ಈ ರೈತ ಚಳುವಳಿ ಸಾಬೀತುಪಡಿಸಿದೆ. ಈ ಚಳುವಳಿ ಯಾವ ಕಾಯ್ದೆಗಳನ್ನು ವಿರೋಧಿಸಿ ಸದ್ಯಕ್ಕಾದರೂ ಯಶಸ್ವಿಯಾಗಿದೆಯೋ ಆ ಕಾಯ್ದೆಗಳ ಬಗ್ಗೆ ಇರುವ ವ್ಯಾಪಕ ಭಿನ್ನಾಭಿಪ್ರಾಯಗಳ ನಡುವೆಯೂ ಇದು ಸಾಧ್ಯವಾಗಿದೆ ಎಂಬುದು ಪ್ರಜಾಪ್ರಭುತ್ವದ ಯಶಸ್ಸಿನ ವಿಶೇಷವಾಗಿದೆ. ರೈತರೇನೋ ತಮ್ಮ ಎಲ್ಲ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗಳ ವ್ಯವಸ್ಥೆಯನ್ನು ಆಗ್ರಹಿಸಿ ತಮ್ಮ ಚಳುವಳಿಯನ್ನು ಮುಂದುವರೆಸಿದ್ದಾರೆ. ಆದರೆ ಮಾರುಕಟ್ಟೆ ಆರ್ಥಿಕತೆ ನಮ್ಮನ್ನು ನಿಧಾನವಾಗಿ ಸುತ್ತುವರೆದು ಜನರ ಮೂಲ ಮನೋಭಾವವನ್ನೇ ಬುಡಮೇಲುಗೊಳಿಸಿ ಅವರನ್ನು ಪೂರ್ಣ ಮಾರುಕಟ್ಟೆ ಜೀವಿಗಳನ್ನಾಗಿ ಮಾಡುತ್ತಿರುವಾಗ ಇಂತಹ ಚಳುವಳಿಗಳ ಯಶಸ್ಸು ಎಷ್ಟು ಕಾಲ ತಾಳಿಕೆ ಬಂದೀತು? ಎಂಬ ಪ್ರಶ್ನೆ ನಮ್ಮೆದುರಿಗೆ ಇರುವುದಾದರೂ, ಮಾನವ ಬದುಕನ್ನೇ ಒಂದು ಮಾರುಕಟ್ಟೆ ವ್ಯವಹಾರವನ್ನಾಗಿ ಮಾಡುತ್ತಿರುವ ಜಾಗತೀಕರಣದ ಶಕ್ತಿಗಳ ವಿರುದ್ಧ ಕೃಷಿ ಆರ್ಥಿಕತೆಯನ್ನಾಧರಿಸಿದ ಗ್ರಾಮ ಸಮಾಜದ ಮೂಲ ಮಾತೃಕೆಯ ಪರವಾಗಿ ಕೇಳಿಸುತ್ತಿರುವ ಏಕೈಕ ಸಂಘಟಿತ ದನಿ ಈ ರೈತ ಚಳುವಳಿ ಎಂಬ ಕಾರಣಕ್ಕಾದರೂ ಉಳಿದು ಬೆಳೆಯಬೇಕಿದೆ.

ಈ ರೈತ ಚಳುವಳಿ ಪ್ರದರ್ಶಿಸಿದ ಸ್ವಯಂನಂಬಿಕೆ, ಆತ್ಮವಿಶ್ವಾಸ ಮತ್ತು ಆ ಮೂಲಕ ಕಂಡುಕೊಂಡ ಯಶಸ್ಸಿನ ಹಾದಿ ರಾಷ್ಟ್ರಜೀವನದ ಹಲವು ವಲಯಗಳನ್ನು ಪ್ರಭಾವಿಸಿದಂತಿದೆ. ಎದ್ದು ಕಾಣುವ ಇಂತಹ ಒಂದು ಪ್ರಭಾವವೆಂದರೆ ನಮ್ಮ ನ್ಯಾಯಾಂಗ ತೋರತೊಡಗಿರುವ ಆತ್ಮವಿಶ್ವಾಸ. ಕೆಲವೇ ಕೆಲ ಹಿಂದಿನ ದಿನಗಳವರೆಗೆ ಇದೂ ವ್ಯವಸ್ಥೆಯ ಭಾಗವಾಗಿ ಹೋಯಿತೇನೋ ಎಂಬ ಆತಂಕ ಹುಟ್ಟಿಸಿದ ನಮ್ಮ ಉನ್ನತ ನ್ಯಾಯಾಂಗ ಇತ್ತೀಚಿನ ಕೆಲವು ಪ್ರಕರಣಗಳಲ್ಲಿ ಸರ್ಕಾರವನ್ನು ಕೇಳುತ್ತಿರುವ ಹಲವು ಕಠಿಣ ಪ್ರಶ್ನೆಗಳು ಮತ್ತು ಪ್ರಕಟಿಸುತ್ತಿರುವ ಹಲವು ನಿರ್ಧಾರಗಳು ನಮ್ಮ ಪ್ರಜಾಪ್ರಭುತ್ವದ ಜೀವಂತಿಕೆಯ ಬಗ್ಗೆ ಆಸೆ ಹುಟ್ಟಿಸುವಂತಿವೆ. ಇಂತಹ ಒಂದು ಪ್ರಕರಣದ ಸಂದರ್ಭದಲ್ಲಿ ಸರ್ವೋನ್ನತ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ತಾವೂ ಒಬ್ಬ ರೈತರೆಂದು ಹೇಳಿಕೊಂಡ ಬಗೆ ಇಡೀ ನ್ಯಾಯಾಂಗ ವಲಯಕ್ಕೆ ಹೊಸ ಘನತೆಯೊಂದನ್ನು ತಂದಂತಿತ್ತು. ಈ ಘನತೆಯೇ ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ಪ್ರಜಾಪ್ರಭುತ್ವದ ಉಸಿರನ್ನೇ ಅಡಗಿಸುವ ಪ್ರಯತ್ನದಂತೆ ಕಾಣುತ್ತಿರುವ ಪೆಗಾಸಿಸ್ ಪ್ರಕರಣದ ನ್ಯಾಯಬದ್ಧ ವಿಚಾರಣೆಗೆ ಅಡ್ಡಿ ಉಂಟು ಮಾಡಲು ಸರ್ಕಾರ ನಡೆಸಿದ ಪ್ರಯತ್ನಗಳನ್ನು ಲೆಕ್ಕಿಸದೆ ಪ್ರಕರಣದ ಆಳಕ್ಕಿಳಿದು ಅದನ್ನು ಎಲ್ಲ ಆಯಾಮಗಳಿಂದಲೂ ಪರಿಶೀಲಿಸುವಂತಹ ಒಂದು ದಿಟ್ಟ ಅತ್ಯುತ್ತಮ ಮಾದರಿಯ ವಿಚಾರಣೆಗೆ ಆಜ್ಞಾಪಿಸುವಂತೆ ಮಾಡಿರುವುದು. ಹಾಗೇ ಲಖೀಂಪುರ-ಖೇರಿಯಲ್ಲಿ ರೈತರ ಮೇಲೆ ಆಳುವ ಪಕ್ಷದ ರಾಜಕಾರಣಿಯ ಮಗನೊಬ್ಬ ವಾಹನ ಹರಿಸಿದ ಪ್ರಕರಣದಲ್ಲೂ, ಪಕ್ಷಪಾತಿ ವಿಚಾರಣೆಯ ದಾರಿ ಹಿಡಿದಿದ್ದ ಉತ್ತರ ಪ್ರದೇಶ ಸರ್ಕಾರಕ್ಕೆ ಛೀಮಾರಿ ಹಾಕಿ ನಿಷ್ಪಕ್ಷಪಾತ ವಿಚಾರಣೆಯನ್ನು ದೃಢಗೊಳಿಸುವಂತಹ ಸೂಚನೆಗಳನ್ನು ನೀಡಿದೆ. ಆದರೂ ಈ ಪ್ರಕರಣದ ಕೇಂದ್ರದಲ್ಲಿರುವ ಕೇಂದ್ರದ ಗೃಹ ರಾಜ್ಯ ಮಂತ್ರಿ ಅಜಯ ಮಿಶ್ರಾನಿಂದ ರಾಜೀನಾಮೆ ಪಡೆಯಲು ನಿರಾಕರಿಸುತ್ತಿರುವ ಮೋದಿ ಸರ್ಕಾರದ ಭಂಡತನ ಆಶ್ಚರ್ಯವನ್ನು ಹುಟ್ಟಿಸುತ್ತಿದೆ.

ರಾಷ್ಟ್ರ ಮಟ್ಟದ ರಾಜಕಾರಣ ಹೀಗೆ ಆಸೆ ಹುಟ್ಟಿಸುವಂತಹ ಹೊಸ ತಿರುವುಗಳನ್ನು ಪಡೆಯುತ್ತಿದ್ದರೆ ನಮ್ಮ ರಾಜ್ಯದ ರಾಜಕಾರಣ ಎಲ್ಲ ವಿಶ್ವಾಸಾರ್ಹತೆ ಕಳೆದುಕೊಂಡಂತಿದೆ. ಹಾಗಾಗಿಯೇ ಅದು 'ಬಿಟ್ ಕಾಯಿನ್' ಹಗರಣವಿರಬಹುದು ಅಥವಾ ನಮ್ಮ ಜನಪ್ರತಿನಿಧಿಗಳಿಗೆ ಗುತ್ತಿಗೆದಾರರು ಕೊಡಬೇಕಾಗಿರುವ ಶೇ. ೪೦ರ ಕಮೀಶನ್‌ನ ಭ್ರಷ್ಟಾಚಾರದ ವಿಷಯವಿರಬಹುದು, ಎಲ್ಲರೂ ಪ್ರಧಾನಿ ಮೋದಿಯವರಿಗೆ ಪತ್ರ ಬರೆಯುತ್ತಿದ್ದಾರೆ! ಹಾಗಾದರೆ ಇಲ್ಲಿ ಬಸವರಾಜ ಬೊಮ್ಮಾಯಿ ಎಂಬುವವರು ಏಕಿದ್ದಾರೋ ತಿಳಿಯದು! ಇನ್ನು 'ಹಿರಿಯರ ಸದನ'ವೆನ್ನಲಾಗುವ ವಿಧಾನ ಪರಿಷತ್ತಿನ ಚುನಾವಣೆಗಳಿಗೆ ಇಲ್ಲಿನ ಮೂರೂ ಪ್ರಮುಖ ಪಕ್ಷಗಳು ಅಭ್ಯರ್ಥಿಗಳನ್ನು ಆಯುವಲ್ಲಿ ಪ್ರದರ್ಶಿಸುತ್ತಿರುವ ನಿರ್ಲಜ್ಜ ಕುಟುಂಬ ಮತ್ತು ಕುಬೇರ ರಾಜಕಾರಣವು ರಾಜ್ಯದಲ್ಲಿ ಸಂಭವಿಸುತ್ತಿರುವ ಜಲಪ್ರಳಯದಿಂದ ಕಿಂಚಿತ್ತೂ ವಿಚಲಿತವಾಗದೆ ನಮ್ಮ ಸಾರ್ವಜನಿಕ ಜೀವನವನ್ನು ಎಲ್ಲ ಮೌಲ್ಯಗಳ ಪ್ರಪಾತದ ಅಂಚಿಗೆ ಒಯ್ದಂತಿದೆ.

**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ತಾವು ಈಗಾಗಲೇ ಗಮನಿಸಿರುವ ಸಂಗತಿಯನ್ನೇ ಬರೆಯುತ್ತಿದ್ದೇನೆ. ಕ್ಷಮಿಸಿ. ಫಿಲಿಪ್ಪೀನ್ಸ್‌ನ ಮರಿಯಾ ರೆಸ್ಸಾ ಮತ್ತು ರಷ್ಯಾದ ಡಿಮಿತ್ರಿ ಮುರಾಟೋವ್ ಅವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗಾಗಿ ಅವರು ನಡೆಸಿಕೊಂಡು ಬರುತ್ತಿರುವ ಹೋರಾಟವನ್ನು ಗುರುತಿಸಿ ಈ ವರ್ಷದ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಜಾಪ್ರಭುತ್ವ ಮತ್ತು ಮಾಧ್ಯಮ ಸ್ವಾತಂತ್ರ್ಯ ಈ ದಿನಗಳಲ್ಲಿ ಎದುರಿಸುತ್ತಿರುವ ಪ್ರತಿಕೂಲ ಸನ್ನಿವೇಶದಲ್ಲಿ ರೆಸ್ಸಾ ಮತ್ತು ಮುರಾಟೋವ್ ಈ ಆದರ್ಶಗಳಿಗಾಗಿ ವಿಶ್ವದಾದ್ಯಂತ ಹೋರಾಡುತ್ತಿರುವ ಪತ್ರಿಕೋದ್ಯಮಿಗಳ ಪ್ರತಿನಿಧಿಗಳಾಗಿದ್ದಾರೆ ಎಂದು ನೊಬೆಲ್ ಪ್ರತಿಷ್ಠಾನ ಅಭಿಪ್ರಾಯಪಟ್ಟಿದೆ.

ಈ ಮಾತನ್ನು ಓದಿದಾಗ, "ಹೊಸ ಮನುಷ್ಯ" ಪತ್ರಿಕೆಯನ್ನು ಸಹ ಈ ಬಾರಿಯ ನೊಬೆಲ್ ಪಾರಿತೋಷಕ ವಿಜೇತರು ಪ್ರತಿನಿಧಿಸುತ್ತಿದ್ದಾರೆ ಎಂದು ನನಗೆ ಅನ್ನಿಸುತ್ತದೆ.

**–ಹೆಚ್.ಎಸ್, ಈಶ್ವರ,** ಬೆಂಗಳೂರು

'ಹೊಸ ಮನುಷ್ಯ' ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಸಂಗ್ರಹಿಸಿಟ್ಟುಕೊಂಡಿರುವ ನಾನು, ಅವನ್ನು ಅಮೂಲ್ಯ ಪುಸ್ತಕಗಳ ಪಠ್ಯಗಳಂತೆ ಆಗಾಗ್ಗೆ ಓದುತ್ತಿರುತ್ತೇನೆ. ನೋಟ, ವಾಸ್ತವಿಕತೆಯ ದರ್ಶನ ಮತ್ತು ನಮ್ಮ ನೈಜ ಮನೋಭಾವವನ್ನು ರೂಪಿಸಿಕೊಳ್ಳಲು 'ಹೊಸ ಮನುಷ್ಯ' ಒತ್ತಾಸೆ ನೀಡುತ್ತದೆ. ಅಡಗಿಸಿಟ್ಟುಕೊಂಡ ಹಿತಾಸಕ್ತಿಗಳ ಭಾಗವಾಗಿ ಪತ್ರಿಕೆಯ ಯಾವ ಬರಹವೂ ಇರುವುದಿಲ್ಲ. ಬೆಂಬಲ ಮತ್ತು ನಿರಾಕರಣೆ ಎರಡಕ್ಕೂ ಮೌಲ್ಯಾತ್ಮಕ ನೆಲೆಗಟ್ಟು ಇರುತ್ತದೆ. ನವೆಂಬರ್ ಸಂಚಿಕೆಯ ಸಂಪಾದಕರ ಟಿಪ್ಪಣಿಯಲ್ಲಿ ಕೇಂದ್ರ ಸರಕಾರ ಮತ್ತು ಅದರ ಪೋಷಕ ಸಂಸ್ಥೆಯಾದ ಆರ್‌ಎಸ್‌ಎಸ್ ವಿಚಾರಗಳ ಸಂಯೋಜಿತ ರೂಪ–ವಿರೂಪಗಳು ಅನಾವರಣಗೊಳ್ಳುತ್ತವೆ. ಕಾಂಗ್ರೆಸ್ ಎಂಬುದು ಬ್ರಿಟಿಷರ ನೊಗ ಇಳಿಸಿ, ನವಭಾರತದ ಕನಸು ಮತ್ತು ನಕ್ಷೆ ನಿರ್ಮಿಸಿಕೊಟ್ಟ ಒಂದು ದೊಡ್ಡ ಜನಜಾಗೃತಿಯ ವಿವೇಕದ ಪ್ರತೀಕ ಎಂದು ಸರಿಯಾಗಿ ಗುರುತಿಸಲಾಗಿದೆ. ಕಾಂಗ್ರೆಸ್ ತನ್ನ ಕನಸನ್ನು ನಿಜ ಮಾಡಿತೇ ಎಂಬುದರ ವಿವೇಚನೆ ಇದ್ದೇ ಇದೆ. ಜನತೆ ಕೊಟ್ಟ ಅಧಿಕಾರದ ಅಪಬಳಕೆ ಮಾಡುತ್ತಲೇ ಅವರನ್ನು ಯಾಮಾರಿಸಲು ಧರ್ಮ, ಜನಾಂಗ, ದೈವದ ವಿವಾದಗಳನ್ನು ಉಂಟುಮಾಡುವ ಮತ್ತು ಅದನ್ನು ನಿವಾರಿಸುವ ನಾಟಕವನ್ನು ಬಿಜೆಪಿ ಮಾಡುತ್ತಿದೆ. ಇದರ ಅಸಲಿ ಮುಖ ಏಕೆ ತಿಳಿಯುವುದಿಲ್ಲ ಎಂದರೆ ಮೋದಿಯ ವಾಗ್‌ವಿಜೃಂಭಣೆ ಸುಳ್ಳನ್ನು ಬಣ್ಣ ಕಟ್ಟಿ ಹೇಳಿ ನಂಬಿಸುತ್ತದೆ. ಈ ಮಾಯಾಜಾಲದಿಂದ ಬಿಡಿಸಿಕೊಳ್ಳುವ ಅಗತ್ಯವನ್ನು ಸಂಪಾದಕರ ಟಿಪ್ಪಣಿಗಳು ಗಮನ ಸೆಳೆಯುತ್ತವೆ.

**–ಕೆ. ವೆಂಕಟೇಶ,** ದೊಡ್ಡಬಳ್ಳಾಪುರ

ನನ್ನ ಪ್ರಿಯ 'ಹೊಸಮನುಷ್ಯ' ಕೈ ಸೇರುತ್ತಿದ್ದಂತೆ ನಾನು ಮೊದಲಿಗೆ ಓದುವುದು ಸಂಪಾದಕೀಯ. ಎಂದಿನಂತೆ ಈ ಬಾರಿಯೂ ಕೂಡ ಅದು ಸಮತೋಲನದಿಂದ ಕೂಡಿದ್ದು, ಪ್ರಸಕ್ತ ವಿದ್ಯಮಾನಗಳು ಹೇಗೆ ದೇಶದ ದಿಕ್ಕನ್ನು ವ್ಯವಸ್ಥಿತವಾಗಿ ಬದಲಾಯಿಸುತ್ತಿವೆ ಎಂಬುದನ್ನು ತುಂಬಾ ಪರಿಣಾಮಕಾರಿಯಾಗಿ ವಿಶ್ಲೇಷಿಸಲಾಗಿದೆ. ಆದರೆ ಅದೇ ಹೇಳಿರುವಂತೆ 'ರಾಷ್ಟ್ರ ಮತ್ತು ರಾಜ್ಯ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುವವರಿಗೆ' ಮಾತ್ರ 'ಈ ಟಿಪ್ಪಣಿಗಳು ಬೇಗ ಅರ್ಥವಾಗುತ್ತವೆ'. ಏಕೆಂದರೆ ಇಂದು ಎಂತಹ ವಿಧ್ವಂಸಕಾರಿ ಬೆಳವಣಿಗೆಗಳನ್ನು ಗಮನಿಸಿಯೂ ಗಮನಿಸದಂತಿರುವವರೇ ಹೆಚ್ಚಾಗಿರುವಾಗ, ಸೂಕ್ಷ್ಮವಾಗಿ ಗಮನಿಸುವವರನ್ನು ಎಲ್ಲಿಂದ ತರುವುದು? ಇದ್ದರೂ ಈ ರೀತಿಯ ವಿಶ್ಲೇಷಣೆ ಗ್ರಹಿಸಿ ಸೂಕ್ತ ವೇದಿಕೆಗಳ ಮೂಲಕ ಜನಸಾಮಾನ್ಯರನ್ನು ಎಚ್ಚರಿಸಬಲ್ಲವರು ಯಾರು ?

ಜಿ.ಕೆ. ಗೋವಿಂದರಾವ್ ಅವರಿಗೆ ವಿದಾಯ ಓದಿ ಮನಸ್ಸಿಗೆ ತುಂಬಾ ನೋವಾಯಿತು. ಅವರ ಬಹುಮುಖ ವ್ಯಕ್ತಿತ್ವದ ಬಗ್ಗೆ ಹೆಚ್ಚು ಅಭಿಮಾನವಿರುವವರಲ್ಲಿ ನಾನೂ ಒಬ್ಬ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಅಫೇರ್ಸ್‌ನಲ್ಲಿ ನಡೆದ ಡಿಎಸ್ಸೆನ್ ಅವರ ಪುಸ್ತಕಗಳ ಬಿಡುಗಡೆ ಸಮಾರಂಭದ ಅತಿಥಿಯಾಗಿ ಮಾಡಿದ ಕಂಚಿನ ಕಂಠದ ಭಾಷಣ ಇನ್ನೂ ನನ್ನ ಕಿವಿಗಳಲ್ಲಿ ಮೊರೆಯುತ್ತಿದೆ. ಹಾಗೇ ಅಂದಿನ ಇನ್ನೊಂದು ನೆನಪೆಂದರೆ, ಆಹ್ವಾನವಿಲ್ಲದಿದ್ದರೂ ಪತ್ರಿಕೆ ನೋಡಿ ಡಿಎಸ್ಸೆನ್ ಮೇಲಿನ ಅಭಿಮಾನದಿಂದ ಈ ಸಮಾರಂಭಕ್ಕೆ ಬಂದಿದ್ದ ಕವಿ ಸಿದ್ಧಲಿಂಗಯ್ಯ ಸಂಘಟಕರ ಕೋರಿಕೆಯ ಮೇರೆಗೆ ವೇದಿಕೆ ಏರಿ ಮಾಡಿದ ಪ್ರೀತಿಪೂರ್ವಕ ಭಾಷಣ. ಇಂದು ಅವರಿಬ್ಬರೂ ನಮ್ಮ ಜೊತೆಯಲ್ಲಿಲ್ಲದ ದುಃಖ ನಮ್ಮನ್ನು ಬಾಧಿಸುತ್ತದೆ.

**–ಬಾಲು,** ಕಾರೈಕುಡಿ(ತಮಿಳ್ನಾಡು)

ನವೆಂಬರ್ ಸಂಚಿಕೆಯಲ್ಲಿನ ಪ್ರೊ. ಪುರುಷೋತ್ತಮ ಅಗರ್‌ವಾಲ್ ಅವರ 'ಹಿಂದೂ ರಾಷ್ಟ್ರವೊಂದರಲ್ಲಿ ಹಿಂದೂವಾಗಿರುವುದು ಎಂದರೆ' ಲೇಖನ ನಾನು ಇತ್ತೀಚೆಗೆ ಓದಿದ ಒಂದು ಅದ್ಭುತ ಲೇಖನ. ಇದನ್ನು ನಿಜವಾಗಿ ಓದಬೇಕಾದವರು ಹಿಂದುತ್ವವಾದಿಗಳು. ಹಿಂದುತ್ವ ಹೇಗೆ ಭವ್ಯ, ಸಮೃದ್ಧ ಮತ್ತು ಸೃಜನಶೀಲವಾಗಿರುವ ಹಿಂದೂ ಧರ್ಮವನ್ನು ಹೇಗೆ ಭಂಡ ಮತ್ತು ಬರಡು ಮಾಡಹೊರಟಿದೆ ಎಂಬುದನ್ನೂ, ಇದು ಬೆಳೆಯಲು ನಮ್ಮ ಎಡಪಂಥೀಯ ಉದಾರವಾದಿಗಳೂ ಹೇಗೆ ತಮ್ಮ ಕೊಡುಗೆಯನ್ನು ಸಲ್ಲಿಸಿದ್ದಾರೆ ಎಂಬುದನ್ನೂ ಬಹು ಸೊಗಸಾಗಿ ನಿರೂಪಿಸಿದ್ದಾರೆ. ಎಂ. ರಾಜು ಅವರು ಇದನ್ನು ಅಷ್ಟೇ ಸೊಗಸಾಗಿ ಅನುವಾದಿಸಿದ್ದಾರೆ.

ಮಾತೃಭಾಷಾ ಶಿಕ್ಷಣ ಕುರಿತ ಮೂರೂ ಅನುಭವ ಕಥನಗಳು ಕನ್ನಡ ಮಕ್ಕಳ ಪೋಷಕರ ಕಣ್ಣು ತೆರೆಸುವಂತಿವೆ. ಆದರೆ ಜಾಗತೀಕರಣದ ಶಕ್ತಿಗಳಿಂದ ಗಟ್ಟಿಯಾಗಿ ಕಣ್ಣುಗಳಿಗೆ ಬಟ್ಟೆ ಕಟ್ಟಿಸಿಕೊಂಡಿರುವ ಇವರ ಕಣ್ಣು ತೆರೆಸುವವರಾರು? 'ನೀನಾಸಂ'ನ ಕ್ಷೇತ್ರವಾದ ಹೆಗ್ಗೋಡಿನಲ್ಲೂ ಕನ್ನಡ ಶಾಲೆ ಮುಚ್ಚಿತೆಂದರೆ ಕನ್ನಡಕ್ಕೆ ಇನ್ನೇನು ಉಳಿದಿದೆ? ಆದರೆ ಗ್ರಾಮಾಂತರದ ಸರ್ಕಾರಿ ಕನ್ನಡ ಶಾಲೆಯೊಂದರ ಶಿಕ್ಷಕರೊಬ್ಬರ ಸ್ಫೂರ್ತಿಯಲ್ಲಿ ಅಲ್ಲಿ ಪ್ಲಾಸ್ಟಿಕ್ ಹಾವಳಿ ವಿರುದ್ಧ ಅಭಿಯಾನ ನಡೆಸಿರುವ ವರದಿ ಈ ಎಲ್ಲ ಕೆಟ್ಟ ಸುದ್ದಿಗಳ ನಡುವೆ ಕಿವಿಗಳಿಗೆ ಹಿತವಾಗಿರುವ ಸುದ್ದಿ.

ಮಹಾಂತೇಶ ಓಶಿಮಠ ಅವರ 'ಬಳಿ ಬಂದರು' ಕಥೆ ಅದು ನಿರೂಪಿತವಾಗಿರುವ ಆವರಣವಾದ ರೈಲು ಮತ್ತು ರೈಲು ಪ್ರಯಾಣದಷ್ಟೇ ಬಹು ದೀರ್ಘವಾಗಿದ್ದರೂ, ಸಾಂಸ್ಕೃತಿಕ ಮತ್ತು ಪ್ರಾಕೃತಿಕ ವಿವರಗಳೊಡಗೂಡಿ ಪ್ರಯಾಣ ಸಾವಧಾನವಾಗಿ ನಡೆಯುವುದರಿಂದ ಎಲ್ಲೂ ದಣಿವಾಗುವುದಿಲ್ಲ. ಅಂತ್ಯ ದಿಢೀರ್ ಎನಿಸಿದರೂ, ಮಂಗಳಕರವಾಗಿದ್ದು ಕಥೆ ಒಟ್ಟಾರೆ ಮುದ ಕೊಡುತ್ತದೆ.

ಈ ಬಾರಿ 'ನವಿಲುಗರಿ'ಯ ಕವಿತೆಗಳಂತೂ ವೈವಿಧ್ಯಮಯ ಭಕ್ತಿ ರಸ ವಿಶೇಷಗಳಿಂದ ತುಂಬಿ ನನ್ನನ್ನು ಪರವಶಗೊಳಿಸಿದವು. ಎಲ್ಲಿಯ ಆಂಡಾಳ್, ಎಲ್ಲಿಯ ಕಬೀರ, ಎಲ್ಲಿಯ ಸೂಫಿಗಳು! ಎಲ್ಲರದ್ದೂ ಒಂದೇ ಆರ್ತತೆ ಮತ್ತು ಆರ್ದ್ರತೆ!

**–ಎಂ. ಆರ್. ಪ್ರಮೋದ್,** ದಾವಣಗೆರೆ

ನವೆಂಬರ್ ಸಂಚಿಕೆ ಎಂದಿನಂತೆ ಸಮಕಾಲೀನ ವಿಷಯಗಳ ಬಗ್ಗೆ ಅರ್ಥಪೂರ್ಣ ಚರ್ಚೆ–ಬರಹಗಳಿಂದ ಕೂಡಿತ್ತು. ಪ್ರಚಲಿತ ಸಮಸ್ಯೆಗಳನ್ನು ವಿಶ್ಲೇಷಿಸುವ ಹರಿತ ಸಂಪಾದಕೀಯ ನಮ್ಮೊಳಗೆ ವಿಚಾರತರಂಗಗಳನ್ನು ಹುಟ್ಟು ಹಾಕಿತು.

ಮೇಲ್ನೋಟಕ್ಕೆ ಸರಳ ಕಥೆ ಎನ್ನಿಸಿದರೂ ಯುವ ಮನಸ್ಸುಗಳು ಪ್ರೀತಿಗಾಗಿ

(ಮುಂದಿನ ಪುಟಕ್ಕೆ

## ಕುಪ್ಪಳಿಯಲ್ಲಿ 'ಪರ್ಯಾಯ ಜೀವನ ಪದ್ಧತಿ' ಕುರಿತ ಅಧ್ಯಯನ ಶಿಬಿರ: ಒಂದು ವರದಿ




**ಭೂ**ಮಿಗೆ 'ಭಾರ'ವಾಗದಂತಹ ಜೀವನಶೈಲಿಯನ್ನು ಇಂದಿನ ಯುವಜನರು ಅನುಸರಿಸುವ ತುರ್ತು ಅಗತ್ಯವಿದೆ. ಮುಂದಿನ ಪೀಳಿಗೆಗೆ ಒಳ್ಳೆಯ ಬದುಕಿನ ವಾರಸುದಾರಿ ಬಿಟ್ಟು ಹೋಗುವ ಜವಾಬ್ದಾರಿಯೂ ಅವರದಾಗಿದೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿಯ ಸದಸ್ಯ ಪ್ರೊ. ಜಿ.ಬಿ. ಶಿವರಾಜು ಹೇಳಿದ್ದಾರೆ. ಅವರು ಕಳೆದ ಅಕ್ಟೋಬರ್ ೩೦ ಹಾಗೂ ೩೧ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ, ಕುಪ್ಪಳಿಯಲ್ಲಿ ಆಯೋಜಿಸಿದ್ದ 'ಪರ್ಯಾಯ ಜೀವನ ಪದ್ಧತಿ' ಕುರಿತ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಜಾಗತೀಕರಣದ ಪರಿಣಾಮವಾಗಿ ಯುವಜನರು ಉದ್ಯೋಗ ಅರಸಿ ಪಟ್ಟಣಗಳಿಗೆ ವಲಸೆ ಬಂದು ನಮ್ಮ ಗ್ರಾಮ ಬದುಕಿನ ಮೌಲ್ಯಗಳೇ ಕಾಣೆಯಾಗಿರುವ ಈ ದಿನಗಳಲ್ಲಿ ಪರ್ಯಾಯ ಜೀವನ ಪದ್ಧತಿಯೊಂದನ್ನು ರೂಪಿಸಿಕೊಳ್ಳುವುದು ತುಂಬ ಅಗತ್ಯವಾಗಿದೆ ಎಂದು ಅವರು ಹೇಳಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಎಂ. ಚಂದ್ರಶೇಖರ ಪ್ರತಿಷ್ಠಾನದ ಸಂಚಾಲಕರಾದ ಎಂ.ಸಿ. ನರೇಂದ್ರ ಅವರು ಮಾತನಾಡುತ್ತಾ, ದೇಶದ ಸಣ್ಣಪುಟ್ಟ ಉದ್ಯಮಗಳು ನೆಲ ಕಚ್ಚಿವೆ; ಪಟ್ಟಣಗಳಲ್ಲಿ ಉದ್ಯೋಗಾವಕಾಶಗಳು ಬತ್ತಿಹೋಗಿವೆ. ಆದರೂ ಹಳ್ಳಿಗಳಲ್ಲಿ ದುಡಿಯುವ ಕೈಗಳ ಕೊರತೆ ಎದ್ದು ಕಾಣುತ್ತಿದೆ. ಈ ವಿಪರ್ಯಾಸಕ್ಕೆ ನಾವು ಬದಲಿ ಜೀವನ ಕ್ರಮದ ಬಗ್ಗೆ ಯೋಚಿಸುವುದೇ ಉತ್ತರವಾಗಬಲ್ಲುದು ಎಂದರು.

ಟಿ.ಎಲ್. ರೇಖಾಂಬ ಅವರು ಹಾಡಿದ ಒಂದು ಕುವೆಂಪು ಗೀತೆಯೊಂದಿಗೆ ಆರಂಭವಾದ ಈ ಉದ್ಘಾಟನಾ ಸಮಾರಂಭಕ್ಕೆ ಎಲ್ಲರನ್ನೂ ಸ್ವಾಗತಿಸಿದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ಪ್ರತಿಷ್ಠಾನವು ದಶಮಾನೋತ್ಸವ ಆಚರಿಸುತ್ತಿರುವ ಈ ವರ್ಷದ ಈ ಅಧ್ಯಯನ ಶಿಬಿರ, ಕುಪ್ಪಳಿಯಲ್ಲಿ ನಡೆಸುತ್ತಿರುವ ಹತ್ತನೇ ಶಿಬಿರವಾಗಿದ್ದು, ಇವುಗಳಲ್ಲದೆ ಪ್ರತಿಷ್ಠಾನವು ರಾಜ್ಯದ ವಿವಿಧೆಡೆ

(೪ನೇ ಪುಟಕ್ಕೆ

ಪ್ರಚಲಿತ-೧



# ಗ್ಲಾಸ್ಗೋ ಸಮ್ಮೇಳನ: ಮತ್ತೊಂದು ಪರಿಸರ ನಾಟಕ?

## ಭೂಮಿಗೂ ತಂಪಿಲ್ಲ; ಭೂಮಿಪುತ್ರರಿಗೂ ಸಂಕಟ ತಪ್ಪಲಿಲ್ಲ.

-ನಾಗೇಶ ಹೆಗಡೆ

**ಕ**ಳೆದ ೧೫೦ ವರ್ಷಗಳಿಂದ ಕಲ್ಲಿದ್ದಲು ಮತ್ತು ಪೆಟ್ರೋಲನ್ನು ಉರಿಸಿದ್ದಕ್ಕೇ ಭೂಮಿ ಬಿಸಿಯಾಗುತ್ತಿದೆ; ಋತುಮಾನಗಳೆಲ್ಲ ಏರುಪೇರಾಗಿ ದುರಂತಗಳು ಎಲ್ಲೆಡೆ ಹೆಚ್ಚುತ್ತಿವೆ. ಎಲ್ಲ ಬಗೆಯ ಪಳೆಯುಳಿಕೆ(ಫಾಸಿಲ್) ಇಂಧನಗಳ ಬಳಕೆಯನ್ನು ಕಡಿಮೆ ಮಾಡುತ್ತ ಇನ್ನು ೩೦ ವರ್ಷಗಳಲ್ಲಿ ಶೂನ್ಯಕ್ಕೆ ತರಬೇಕೆಂದು ವಿಶ್ವಸಂಸ್ಥೆಯ ವಿಜ್ಞಾನಿಗಳು ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಭೂಮಿಯ ಸರಾಸರಿ ತಾಪಮಾನ ೧.೫ ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಬಾರದು; ಹೆಚ್ಚೆಂದರೆ ಇನ್ನು ೪೦೦ ಗಿಗಾಟನ್ ಹೊಗೆಯನ್ನು ವಾಯುಮಂಡಲಕ್ಕೆ ಸೂಸಬಹುದು. ಅದಕ್ಕಿಂತ ಹೆಚ್ಚಾದರೆ ಯಾರಿಗೂ ಉಳಿವಿಲ್ಲ ಎಂದಿದ್ದಾರೆ.

ಪಳೆಯುಳಿಕೆ ಇಂಧನಗಳ ಬಳಕೆಯನ್ನು ಯಾರು ಎಷ್ಟೆಷ್ಟು ಕೈಬಿಡಬೇಕು? ಇದು ತುಂಬ ಜಟಿಲವಾದ ಪ್ರಶ್ನೆ. ಆ ಬಗ್ಗೆ ಒಮ್ಮತಕ್ಕೆ ಬರಬೇಕೆಂದು ಕಳೆದ ೨೫ ವರ್ಷಗಳಿಂದ ಪ್ರತಿ ವರ್ಷವೂ ಜಾಗತಿಕ ಸಭೆ ನಡೆಯುತ್ತಿದೆ. ಶ್ರೀಮಂತ ೩೦ ರಾಷ್ಟ್ರಗಳು ಒಂದು ಕಡೆ; ಮತ್ತು ಶ್ರೀಮಂತರಾಗಲು ಬಯಸುವ ೧೫೦ ಚಿಕ್ಕ-ದೊಡ್ಡ ರಾಷ್ಟ್ರಗಳು ಇನ್ನೊಂದು ಕಡೆ. ಈ ಎರಡು ಬಣಗಳ ಮಧ್ಯೆ ಜಟಾಪಟಿ ನಡೆಯುತ್ತಿದೆ. ಧನಿಕ ರಾಷ್ಟ್ರಗಳು ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್, ಸೀಮೆಣ್ಣೆ, ನೈಸರ್ಗಿಕ ಅನಿಲಗಳಂಥ ಫಾಸಿಲ್ ಇಂಧನಗಳನ್ನು ಬಳಸಿಯೇ ಶ್ರೀಮಂತವಾಗಿವೆ. ಅವುಗಳ ಅತಿ ಬಳಕೆಯೇ ಎಲ್ಲರ ಸಂಕಷ್ಟಗಳಿಗೆ ಕಾರಣವಾಗಿವೆ. ಆದ್ದರಿಂದ ಶ್ರೀಮಂತ ರಾಷ್ಟ್ರಗಳು ಮೊದಲು ಈ ಕೊಳಕು ಇಂಧನಗಳ ಕೈಬಿಡಬೇಕು. ಅಷ್ಟೇ ಅಲ್ಲ, ಬಿಸಿಲು, ಗಾಳಿ, ಜಲಜನಕದಂಥ ಬದಲೀ ಶಕ್ತಿಮೂಲಗಳನ್ನು ಬಳಸುವ ಹೊಸ ತಂತ್ರಜ್ಞಾನವನ್ನು ಕಡಿಮೆ ಬೆಲೆಯಲ್ಲಿ ಹಿಂದುಳಿದ ದೇಶಗಳಿಗೆ ಕೊಡಬೇಕು. ಜೊತೆಗೆ ಪ್ರತಿವರ್ಷ ೧೦೦ ಶತಕೋಟಿ ಡಾಲರ್‌ಗಳಷ್ಟು ಹಣವನ್ನೂ ಕೊಡಬೇಕು ಎಂದು ಬಡ ದೇಶಗಳು ಪ್ರತಿ ವರ್ಷ ಒತ್ತಾಯಿಸುತ್ತಿವೆ. ಬದಲೀ ಶಕ್ತಿಗೆ ಬೇಕಾದ ತಾಂತ್ರಿಕ ನೆರವನ್ನು ಬಡದೇಶಗಳಿಗೆ ಕೊಡುತ್ತೇವೆಂದು ೧೯೯೭ರ ಕ್ಯೋಟೋ ಒಪ್ಪಂದದಲ್ಲಿ ಧನಿಕ ರಾಷ್ಟ್ರಗಳು ಒಪ್ಪಿದ್ದವು. ಧನಸಹಾಯವನ್ನೂ ನೀಡುತ್ತೇವೆಂದು ೨೦೦೯ರ ಕೊಪೆನ್‌ಹೇಗನ್ ಸಮಾವೇಶದಲ್ಲಿ ಒಪ್ಪಿದ್ದವು. ೨೦೧೫ರ ಪ್ಯಾರಿಸ್ ಒಪ್ಪಂದದಲ್ಲಿ ಪ್ರತಿ ರಾಷ್ಟ್ರವೂ ತಾನು ಇಂತಿಷ್ಟು ಇಂಗಾಲ ವಿಸರ್ಜನೆಯನ್ನು ಕಮ್ಮಿ ಮಾಡುತ್ತೇನೆ ಎಂದು ವಾಗ್ದಾನ ನೀಡಿತು. ಆದರೆ ಇದಾವುದೂ ಈವರೆಗೆ ಕಟ್ಟುನಿಟ್ಟಾಗಿ ಜಾರಿಗೊಂಡಿಲ್ಲ. ಈ ಮಧ್ಯೆ ಭೂಮಿಯ ಆಟಾಟೋಪ ಮತ್ತು ದುರ್ಬಲ ಸಮುದಾಯದವರ ಆಕ್ರಂದನ, ಹಕ್ಕೊತ್ತಾಯ ಹೆಚ್ಚುತ್ತಲೇ ಇದೆ.

'ನಮ್ಮ ಭವಿಷ್ಯಕ್ಕೆ ಬೆಂಕಿ ಇಡಬೇಡಿ' ಎಂದು ಎಳೆಯರು ಒತ್ತಾಯಿಸುತ್ತಿದ್ದಾರೆ.

'ನಮ್ಮನ್ನು ಉಳಿಸಿ, ನಾವು ಮುಳುಗುತ್ತಿದ್ದೇವೆ ಎಂದು ದ್ವೀಪರಾಷ್ಟ್ರಗಳು ಕೂಗುತ್ತಿವೆ.

'ಪಳಯುಳಿಕೆ ಇಂಧನಗಳಿಗೆ ಈಗಲೇ ನಿಷೇಧ ಹಾಕಬೇಡಿ, ನಾವು ಆರ್ಥಿಕವಾಗಿ ಮುಳುಗಿ ಹೋಗುತ್ತೇವೆ' ಎಂದು (ಕಚ್ಚಾತೈಲ ಮತ್ತು ಕಲ್ಲಿದ್ದಲನ್ನು ಮಾರಿಯೇ) ಹೇಗೋ ಬದುಕುತ್ತಿರುವ ದೇಶಗಳು ಹೇಳುತ್ತಿವೆ.

'ಪಳೆಯುಳಿಕೆ ಇಂಧನಗಳನ್ನು ನಾವು ಇನ್ನಷ್ಟು ವರ್ಷ ಉರಿಸುತ್ತಲೇ ಇರುತ್ತೇವೆ; ಏಕೆಂದರೆ ಕೋಟಿಗಟ್ಟಲೆ ಪ್ರಜೆಗಳನ್ನು ಬಡತನದ ಕೂಪದಿಂದ ಮೇಲೆತ್ತುವ ಕೆಲಸ ಇನ್ನೂ ಬಾಕಿ ಇದೆ' ಎಂದು ಭಾರತದಂಥ ಅಭಿವೃದ್ಧಿಶೀಲ ದೇಶಗಳು ಹೇಳುತ್ತಿವೆ.

'ನೀವೆಲ್ಲ ಹೀಗೇ ಮೀನಮೇಷ ಎಣಿಸುತ್ತಿದ್ದರೆ ೪೦೦ ಗಿಗಾಟನ್ ಸಮ್ಮತ ಇಂಗಾಲ ವಿಸರ್ಜನೆಯ ಪಾಲುಗಳನ್ನೆಲ್ಲ ಧನಿಕ ದೇಶಗಳೇ ಗುಳುಂ ಮಾಡುತ್ತವೆ; ಅವೆಲ್ಲ ಬಡದೇಶಗಳಿಗೇ ಮೀಸಲಿರಬೇಕು' ಎಂದು ಸರ್ಕಾರೇತರ ಸಂಘಟನೆಗಳು ಒತ್ತಾಯ ಮಾಡುತ್ತಿವೆ.


'ಇನ್ನು ೩೦ ವರ್ಷಗಳಲ್ಲಿ ಪಳೆಯುಳಿಕೆ ಇಂಧನಗಳ ಬಳಕೆಯನ್ನು ಶೂನ್ಯಕ್ಕೆ ಇಳಿಸುತ್ತೇವೆಂದು ನಾವು ಘೋಷಿಸಿದ್ದೇವೆ; ಹಾಗೇ ಎಲ್ಲರೂ ಘೋಷಣೆ ಮಾಡಬೇಕು' ಎಂದು ಶ್ರೀಮಂತ ದೇಶಗಳು ಒತ್ತಾಯಿಸುತ್ತಿವೆ. ಎಲ್ಲ ದೇಶಗಳಿಗಿಂತ ಜಾಸ್ತಿ (ವರ್ಷಕ್ಕೆ ೧೦ ಶತಕೋಟಿ ಟನ್) ಇಂಗಾಲವನ್ನು ಕಕ್ಕುತ್ತಿರುವ ಚೀನಾ ತಾನು ೨೦೬೦ರ ವೇಳೆಗೆ ನಿವ್ವಳ ಶೂನ್ಯ(ನೆಟ್ ಝೀರೊ')ಕ್ಕೆ ತರುತ್ತೇನೆ ಎಂದು ಹೇಳಿದೆ.

ಈ ಹಿನ್ನೆಲೆಯಲ್ಲಿ ಈಚೆಗೆ ಗ್ಲಾಸ್ಗೊದಲ್ಲಿ ೨೬ನೇ ಸಮ್ಮೇಳನ ನಡೆಯಿತು. ಇದೂ ಭಾರೀ ಆಸೆ-ಭರವಸೆಗಳೊಂದಿಗೆ ಆರಂಭವಾಯಿತು. ಆದರೆ ಚೀನಾದ ಅಧ್ಯಕ್ಷರು ಮಾತುಕತೆಗೆ ಬರಲೇ ಇಲ್ಲ. ದೊಡ್ಡ ಪ್ರಮಾಣದ ಕಚ್ಚಾತೈಲದ ನಿಧಿಯ ಮೇಲೆ ಕೂತಿರುವ ರಷ್ಯಾದ ಅಧ್ಯಕ್ಷರೂ ಬರಲಿಲ್ಲ. ಹಾಗಾಗಿ ಇದೂ ವಿಫಲವಾಗುವ ಸೂಚನೆಗಳು ಆರಂಭದಲ್ಲೇ ಕಾಣತೊಡಗಿದ್ದವು. ಸತತ ಹತ್ತು ದಿನಗಳ ಕಾಲ ಅದೇ ಹಳೇ ತಿಕ್ಕಾಟ, ಇತರರ ಮೇಲೆ ಗೂಬೆ ಕೂರಿಸುವ ಯತ್ನಗಳು ನಡೆದವು. ಜಗತ್ತಿನ ವಿವಿಧ ಭಾಗಗಳಿಂದ ಬಂದ ಸರ್ಕಾರೇತರ ಸಂಘ-ಸಂಸ್ಥೆಗಳು ಮತ್ತು ಮಕ್ಕಳ ಸಂಘಟನೆಗಳು (ಇಡೀ ಭೂಮಿಯ ಪ್ರತಿನಿಧಿಗಳಂತೆ) ಸಭಾಂಗಣದ ಹೊರಗಡೆ ದಿನವೂ ಪ್ರತಿಭಟನೆ ಮಾಡುತ್ತ, ಭವಿಷ್ಯದ ಕರಾಳ ಅಪಾಯಗಳ ಕುರಿತು ಅಂಕಿ ಸಂಖ್ಯೆಗಳ ಪ್ರದರ್ಶನ, ಬದಲೀ ಬದುಕಿನ ವಿಧಾನಗಳ ಪ್ರದರ್ಶನ ನಡೆಸುತ್ತ ಮಾಧ್ಯಮಗಳಿಗೆ ಗ್ರಾಸ ನೀಡುತ್ತಿದ್ದವು. ಆಗಿದ್ದೇನು?

ಭಾರತ ಆರಂಭದಲ್ಲೇ ದೊಡ್ಡ ಗುರಿಯನ್ನು ಘೋಷಿಸಿ ಅಚ್ಚರಿ ಮೂಡಿಸಿತು. ಇನ್ನು ಹತ್ತು ವರ್ಷಗಳಲ್ಲಿ ತನಗೆ ಅಗತ್ಯವಿದ್ದ ಶಕ್ತಿಯ ಶೇ. ೫೦ರಷ್ಟನ್ನು ಬಿಸಿಲು, ಗಾಳಿ, ಜೀವದ್ರವ್ಯಗಳಂಥ ನವ ಇಂಧನಗಳಿಂದಲೇ ಪಡೆಯುತ್ತೇವೆ ಎಂದಿತು. ಇದೇ ೨೦೩೦ರ ಮುಂಚೆ ಇಂಗಾಲದ ಇಂಧನಗಳ ಬಳಕೆಯಲ್ಲಿ ನೂರು ಕೋಟಿ ಟನ್‌ಗಳಷ್ಟನ್ನು ಕಡಿಮೆ ಮಾಡುತ್ತೇನೆಂದೂ ಹೇಳಿ ಚಪ್ಪಾಳೆ ಗಿಟ್ಟಿಸಿತು. ೨೦೭೦ರ ವೇಳೆಗೆ ನಿವ್ವಳ ಶೂನ್ಯ ಸಾಧಿಸುತ್ತೇನೆಂದು ಘೋಷಿಸಿತು. ಧನಿಕ ದೇಶಗಳು ಸಾವಿರ ಶತಕೋಟಿ ಡಾಲರ್‌ಗಳನ್ನು ಹಿಂದುಳಿದ ದೇಶಗಳಿಗೆ ನೀಡಬೇಕೆಂದು ಒತ್ತಾಯಿಸಿತು.

ನೂರು ಶತಕೋಟಿಯನ್ನೇ ಕೊಡಲೊಪ್ಪದ ಶ್ರೀಮಂತ ರಾಷ್ಟ್ರಗಳು ಸಾವಿರ ಕೊಟ್ಟಾವೆಯೆ? ನಿಜ ಹೇಳಬೇಕೆಂದರೆ ಧನಿಕ ದೇಶಗಳು ಇನ್ನು ೧೦ ವರ್ಷಗಳಲ್ಲಿ ತಮ್ಮ ಇಂಗಾಲವಿಸರ್ಜನೆಯನ್ನು ನಿವ್ವಳ ಶೂನ್ಯಕ್ಕೆ ತರಬೇಕು. ಚೀನಾ ೨೦ ವರ್ಷಗಳಲ್ಲಿ, ಭಾರತ ೩೦ ವರ್ಷಗಳಲ್ಲಿ ನಿವ್ವಳ ಶೂನ್ಯಕ್ಕೆ ಬರಬೇಕು. ಇತರ ಬಡ ದೇಶಗಳು ೫೦ ವರ್ಷಗಳವರೆಗೂ ಪಳೆಯುಳಿಕೆ ಇಂಧನಗಳನ್ನು ಬಳಸಲು ಅವಕಾಶ ಕೊಡಬೇಕಿತ್ತು. ಅಲ್ಲಿಗೆ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸಿದಂತೆಯೂ ಆಗುತ್ತಿತ್ತು. ಭವಿಷ್ಯದಲ್ಲೂ ಭೂಮಿ ಸುಭದ್ರವಾಗಿರುತ್ತಿತ್ತು. ಆದರೆ ಹಠಮಾರಿ ಧನಿಕ ದೇಶಗಳು ಹಾಗಾಗಲು ಬಿಡಲಿಲ್ಲ. ಅವು ನಿವ್ವಳ ಶೂನ್ಯಕ್ಕೆ ಬರಲು ೨೦೫೦ರ ಗುರಿಯನ್ನೇ ಇಟ್ಟುಕೊಂಡವು. ಆಫ್ರಿಕ, ಏಷ್ಯಾದ ಬಡರಾಷ್ಟ್ರಗಳಲ್ಲಿ ಹೊಸ ಶಕ್ತಿಮೂಲಗಳ ಅಭಿವೃದ್ಧಿಗೆ ಹಣಕಾಸು ನೆರವಿನ ಹಳೇ ವಾಗ್ದಾನವನ್ನು ಇನ್ನು ಐದು ವರ್ಷಗಳಲ್ಲಿ ಪೂರೈಸುವುದಾಗಿ ಹೇಳಿ ಕೈ ತೊಳೆದುಕೊಂಡವು. ತಾಪಮಾನ ಏರಿಕೆಯನ್ನು ೧.೫ಕ್ಕೆ ನಿಯಂತ್ರಿಸಬೇಕೆಂಬ ಗುರಿ ಮತ್ತೆ ಮುಂದಕ್ಕೆ ಹೋಯಿತು. ನಾಳೆ ಏನೂ ಆಗಬಹುದು.

ಭಾರತ ದೇಶ ಇನ್ನು ಹತ್ತೇ ವರ್ಷಗಳಲ್ಲಿ ಹೊಸ ಶಕ್ತಿಮೂಲಗಳ ಸಾಮರ್ಥ್ಯವನ್ನು ದುಪ್ಪಟ್ಟು ಮಾಡುತ್ತೇನೆಂದು ಹೇಳಿದ್ದೇನೊ ಸರಿ. ಆದರೆ ಜಾಗತಿಕವಾಗಿ ಕಾಣುತ್ತಿರುವ ಅಸಮತೋಲಗಳು ಇಲ್ಲೂ ಇವೆ. ಕಲ್ಲಿದ್ದಲು ಪೆಟ್ರೋಲಿಯಂ ಶಕ್ತಿಮೂಲಗಳಂತೂ ಕೋಟ್ಯಧೀಶರ ಮುಷ್ಟಿಯಲ್ಲೇ ಇವೆ. ಇನ್ನು ಈ ಹೊಸ ಶಕ್ತಿಮೂಲಗಳ ಸೋಲಾರ್ ಪವರ್ ಗುತ್ತಿಗೆಯೂ ಅದಾನಿ, ಅಂಬಾನಿಗಳಿಗೇ ಸಿಗುತ್ತವೆ. ಗ್ರಾಮೀಣ ಮಟ್ಟದಲ್ಲಿ ಸೌರಶಕ್ತಿ, ಗಾಳಿಶಕ್ತಿ, ಕೃಷಿತ್ಯಾಜ್ಯ, ಗೋಬರ್ ಅನಿಲ ಹಾಗೂ ಶಕ್ತಿವನಗಳ ಅಭಿವೃದ್ಧಿಗೆ ಆದ್ಯತೆ ಸಿಕ್ಕೀತೆ? ನಗರಗಳಿಗೆ ಆಹಾರವನ್ನು ಒದಗಿಸುವ ಕೃಷಿಭೂಮಿಯೇ ವಿದ್ಯುತ್ ಶಕ್ತಿಯನ್ನೂ ಫಸಲಿನಂತೆ ಉತ್ಪಾದನೆ ಮಾಡುವ ಅವಕಾಶ ಬಂದೀತೆ? ಅಥವಾ ಕೃಷಿನೆಲದ, ಬಿಸಿಭೂಮಿಯ ಸಂಕಟಗಳಿಂದ ಪಾರಾಗಲೆಂದು ನಗರಗಳಿಗೆ ಧಾವಿಸುವವರ ಸಂಖ್ಯೆ ಇಮ್ಮಡಿಯಾದೀತೆ? ಕಾದು ನೋಡಬೇಕು!



**(ಲೇಖಕರು ಖ್ಯಾತ ವಿಜ್ಞಾನ ಬರಹಗಾರರು ಮತ್ತು ಅಂಕಣಕಾರರು)**

---

**ಹಿಂದಿನ ಪುಟದಿಂದ)**

ಪರಿತಪಿಸುವ ಹಾಗೂ ಬಹುಕಾಲದ ನಿರೀಕ್ಷೆಯ ನಂತರ ಅದನ್ನು ಪಡೆದು ಸಾರ್ಥಕತೆ ಹೊಂದುವ ವಿವಿಧ ಮಜಲುಗಳ ಸುಲಲಿತ ನಿರೂಪಣೆಯಿಂದಾಗಿ ಮಹಾಂತೇಶ ಓಶಿಮಠ ಅವರ ಕಥೆ 'ಬಳಿ ಬಂದರು' ರಂಜಿಸಿತು.

ಮಾತೃಭಾಷಾ ಶಿಕ್ಷಣ: ಮೂರು ಅನುಭವ ಕಥನಗಳು ಹಾಗೂ ಡಿಎಸ್ಸೆನ್ ಅವರ ಬಿಡಿ ಟಿಪ್ಪಣಿಗಳು ಕನ್ನಡ ಕಲಿಕೆಯ ದಿಸೆಯಲ್ಲಿ ಉಂಟಾಗಿರುವ ತೊಡಕುಗಳನ್ನು ಮತ್ತು ಅಂಥ ಆಶಯಕ್ಕೆ ಮಾರಕವಾಗಿರುವ ಅಂಶಗಳನ್ನು ವಿಸ್ತೃತವಾಗಿ ಚರ್ಚಿಸಿವೆ.

'ಕನ್ನಡ ಭಾಷೆಯನ್ನು ಕಬ್ಬಿಣದ ಕಡಲೆ' ಎಂಬಂತೆ ಬಿಂಬಿಸುತ್ತಾ ಭಾಷೆಯನ್ನು ಸರಳೀಕರಣಗೊಳಿಸುವುದು ಅಪಾಯಕಾರಿ ಹುನ್ನಾರ. ತನ್ಮೂಲಕ ಕನ್ನಡತನ ದೂರವಾಗಿ, ಕಠಿಣ ಇಂಗ್ಲಿಷ್ ಭಾಷೆಯೂ ದಕ್ಕದೆ, ಆಳರಸರಿಂದ ಹಿಂದಿ ಹೇರಿಕೆಯೂ ಸೇರಿ ತ್ರಿಶಂಕು ಸ್ಥಿತಿ ಉದ್ಭವವಾಗಲಿದೆ. ಇದು ಸಾಲದೆಂಬಂತೆ ನ್ಯಾಯಾಲಯದಲ್ಲಿ ಮಾತೃಭಾಷಾ ಕಲಿಕೆಗೆ ವಿರುದ್ಧ ಅರ್ಜಿಗಳು 'ಸಂಸ್ಕೃತಿ ರಕ್ಷಕ' ಸಂಸ್ಥೆಗಳಿಂದಲೇ ದಾಖಲಿಸಲ್ಪಡುತ್ತಿರುವುದು ವಿಷಾದನೀಯ ಮಾತ್ರವಲ್ಲ ಖಂಡನೀಯ ಕೂಡ.

**-ಸೋಮು,** ಹುಬ್ಬಳ್ಳಿ

ಸಂಕರ ಬಟ್ರ ಸುದ್ದ ಕನ್ನಡದ ತುಪ್ಪ ಬೋ ಪಸಂದಾಗಿದೆ ಬುಡಿ ಸಾ.

**-ಎಚ್. ಪಟ್ಟಾಭಿರಾಮ ಸೋಮಯಾಜಿ,** ಮಂಗಳೂರು

೨ನೇ ಪುಟದಿಂದ)



ವಿವಿಧ ಕಾಲೇಜುಗಳಲ್ಲಿ ಸಾಹಿತ್ಯ–ಸಂಸ್ಕೃತಿಯೂ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ವಿಷಯಗಳನ್ನು ಕುರಿತು ಸುಮಾರು ಐವತ್ತು ಅಧ್ಯಯನ ಶಿಬಿರಗಳನ್ನು ನಡೆಸಿದೆ ಎಂದರು. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಖಜಾಂಚಿ ಮನುದೇವ ಅವರು ವೇದಿಕೆಯಲ್ಲಿದ್ದರು.

ಉದ್ಘಾಟನಾ ಸಮಾರಂಭದ ನಂತರ ಶಿಬಿರಾರ್ಥಿಗಳ ಪರಿಚಯ ಕಾರ್ಯಕ್ರಮ ನಡೆಯಿತು. ನಂತರ ಶಿಬಿರದ ಪ್ರಾಸ್ತಾವಿಕ ಭಾಷಣ ಮಾಡಿದ ಶಿಬಿರದ ನಿರ್ದೇಶಕ ಡಿ.ಎಸ್. ನಾಗಭೂಷಣ, ಹವಾಮಾನ ವೈಪರೀತ್ಯಗಳು ಸೃಷ್ಟಿಯ ಋತುಚಕ್ರವನ್ನು ಅಸ್ತವ್ಯಸ್ತಗೊಳಿಸುತ್ತಿರುವ ಈ ದಿನಗಳು ಭೂಮಿ ಒಂದು ಜೀವ ನೆಲೆಯಾಗಿ ಉಳಿಯುವ ದೃಷ್ಟಿಯಿಂದ ನಿರ್ಣಾಯಕವಾಗಿದ್ದು, ಭೂಮಿಯ ಅವನತಿಗೆ ಕಾರಣವಾಗುತ್ತಿರುವ ನಮ್ಮ ಮಿತಿಯಿಲ್ಲದ ಭೋಗ ಜೀವನ ಶೈಲಿಯನ್ನು ನಿಯಂತ್ರಿಸಿ ಈಗ ಅಲ್ಲಲ್ಲಿ ಪ್ರಯೋಗದ ಹಂತದಲ್ಲಿರುವ ಒಂದು ಪರ್ಯಾಯ ಜೀವನ ಪದ್ಧತಿಯನ್ನು ಕುರಿತು ಚಿಂತಿಸುವುದೇ ಈ ಶಿಬಿರದ ಉದ್ದೇಶವಾಗಿದೆ ಎಂದರು.

ಶಿಬಿರದ ಮೊದಲಗೋಷ್ಠಿ 'ಪರ್ಯಾಯ ಆಹಾರ ಮತ್ತು ಆರೋಗ್ಯ ಪದ್ಧತಿ' ಕುರಿತಾಗಿದ್ದು, ಈ ವಿಷಯದ ಬಗ್ಗೆ ಮಾತನಾಡಿದ ಧಾರವಾಡದ ಹಿರಿಯ ವೈದ್ಯ ಹಾಗೂ ಚಿಂತಕ ಡಾ. ಸಂಜೀವ ಕುಲಕರ್ಣಿಯವರು, ಇಂದಿನ ಎಲ್ಲ ರೋಗಗಳ ತಾಯಿಯಂತಿರುವ ಸಕ್ಕರೆ ಕಾಯಿಲೆ ಇಂದು ದೇಶದ ಐದನೇ ಒಂದು ಭಾಗದಷ್ಟು ಜನರನ್ನು ಬಾಧಿಸುತ್ತಿದ್ದು ದೇಶ ಬಹುಬೇಗ ಜಗತ್ತಿನ ಸಕ್ಕರೆ ಕಾಯಿಲೆಯ ರಾಜಧಾನಿಯಾಗಲಿದೆ ಎಂದು ಎಚ್ಚರಿಸುತ್ತಾ, ಇದರ ಮೂಲ ನಾವು ದೇಶಿ ಕೃಷಿ ಪದ್ಧತಿಯನ್ನು ಆಧರಿಸಿದ ಆಹಾರ ಪದ್ಧತಿಯನ್ನು ತ್ಯಜಿಸಿ ಆಧುನಿಕ ಜೀವನ ಪದ್ಧತಿಯ ಭಾಗವಾಗಿ ಆಧುನಿಕ ಆಹಾರ ಪದ್ಧತಿಯನ್ನು ಅನುಸರಿಸತೊಡಗಿದ್ದೇ ಕಾರಣವೆಂದರು. ಆಧುನಿಕ ರೋಗಗಳ ಚಿಕಿತ್ಸೆಗೆ ಆಧುನಿಕ ವೈದ್ಯ ಪದ್ಧತಿಗೆ ಶರಣಾಗಿರುವುದು ಸಹಜವೆಂದ ಅವರು ಸ್ಥಳ ಮತ್ತು ಋತುಮಾನಕ್ಕೆ ತಕ್ಕ ಆಹಾರ ಪದ್ಧತಿಗೆ ವಾಪಸಾಗುವುದೇ ಇದಕ್ಕೆ ಪರಿಹಾರವೆಂದರು.

ಊಟದ ನಂತರದ ಎರಡನೆಯ ಗೋಷ್ಠಿಯಲ್ಲಿ 'ಸಹಕಾರ ತತ್ವ ಮತ್ತು ಸಹಬಾಳ್ವೆ' ಎಂಬ ವಿಷಯದ ಬಗ್ಗೆ ಮಾತನಾಡಿದ ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್‌ನ ಸಂತೋಷ ಕೌಲಗಿಯವರು, ಮಿಲ್ ಅಥವಾ ಗಾರ್ಮೆಂಟ್ಸ್ ಬಟ್ಟೆ ತಯಾರಿಕೆಯ ಹಿಂದಿನ ಕಾರ್ಮಿಕರ ಶೋಷಣೆಯ ಚರಿತ್ರೆ ಇಲ್ಲದ ಖಾದಿ ಒಂದು ನೈತಿಕ ವಸ್ತ್ರವಾಗಿದೆ ಎನ್ನುತ್ತಾ ತಮ್ಮ ಟ್ರಸ್ಟ್‌ನ ಆಶ್ರಯದಲ್ಲಿ ಖಾದಿ ಉದ್ಯಮವನ್ನು ಸಹಕಾರ ತತ್ವದ ಆಧಾರದ ಮೇಲೆ ಹೇಗೆ ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ ಎಂಬುದನ್ನು ವಿವರಿಸಿದರು. ದುಡಿಯುವವರೇ ಹೂಡಿಕೆ ಮಾಡಿ ತಮ್ಮ ಉದ್ಯಮದ ನೀತಿ ಸಂಹಿತೆಯನ್ನು ತಾವೇ ಒಮ್ಮತದಿಂದ ರೂಪಿಸಿಕೊಂಡು ಲಾಭಾಂಶವನ್ನು ತಂತಮ್ಮ ಜೀವನೋಪಾಯಕ್ಕಾಗಿ ಹಂಚಿಕೊಳ್ಳುವುದು ಮಾತ್ರವಲ್ಲದೆ ಉದ್ಯಮದ ಬೆಳವಣಿಗೆಗೆ ಕೂಡ ಬಳಸುವ ವಿಧಾನವನ್ನು ಅಳವಡಿಸಿಕೊಂಡಿರುವ ಬಗ್ಗೆ ಅವರು ಮಾಹಿತಿ ನೀಡಿದರು.

ನಂತರ ವಿಶೇಷ ಆಹ್ವಾನಿತರಾಗಿ ಬಂದಿದ್ದ ಹರಿಹರದ ಬಳಿಯ ಗುಳದಹಳ್ಳಿಯ ಸಹಜ ಕೃಷಿಕ ರಾಘವ ಅವರು, ತಾವು ಉನ್ನತ ಶಿಕ್ಷಣ ಪಡೆದ ನಂತರ ಪ್ರಸಕ್ತ ಜೀವನ ಪದ್ಧತಿಯಿಂದ ಬೇಸತ್ತು ತಮ್ಮ ಇಡೀ ಜೀವನದ ಸ್ವರೂಪವನ್ನೇ ಬದಲಾಯಿಸಿಕೊಂಡು ನೆಮ್ಮದಿಯಿಂದ ಬದುಕುತ್ತಿರುವ ಬಗೆಯನ್ನು ಶಿಬಿರಾರ್ಥಿಗಳ ಮುಂದೆ ತೆರೆದಿಟ್ಟರು. ತಮ್ಮ ಕುಟುಂಬದ ಆಹಾರಕ್ಕೆ ಬೇಕಾದ ಎಲ್ಲವನ್ನೂ ತಾವೇ ಸಹಜ ಕೃಷಿ ಮೂಲಕ ತಮ್ಮ ಜಮೀನಿನಲ್ಲಿ ಬೆಳೆದುಕೊಳ್ಳುತ್ತಿರುವುದಲ್ಲದೆ, ತಮ್ಮ ಮನೆಯನ್ನೂ ಸುತ್ತಮುತ್ತಲ ಪ್ರಾಕೃತಿಕ ಸಾಮಗ್ರಿಗಳನ್ನೇ ಬಳಸಿ ಕಟ್ಟಿಕೊಂಡ ಬಗೆಯನ್ನೂ ವಿವರಿಸಿದರು.

ಅಂದು ರಾತ್ರಿ ಅಕಿರಾ ಕುರಸೋವಾನ 'ದ ಡ್ರೀಮ್ಸ್' ಮತ್ತು ಚಾರ್ಲಿ ಚಾಪ್ಲಿನ್‌ನ 'ಗೋಲ್ಡ್ ರಷ್' ಚಲನಚಿತ್ರಗಳ ಪ್ರದರ್ಶನವಿತ್ತು.

ಶಿಬಿರದ ಎರಡನೆಯ ದಿನ, ಹಿಂದಿನ ರಾತ್ರಿ ಪ್ರದರ್ಶಿಸಲಾದ ಚಲನಚಿತ್ರಗಳನ್ನು ಕುರಿತು ಶಿಬಿರಾರ್ಥಿಗಳಿಂದ ಅಭಿಪ್ರಾಯ ಮಂಡನೆಯಿಂದ ಆರಂಭವಾಗಿ, ನಂತರ ಮೈಸೂರಿನ ಕಲಾವಿದ ಸಚ್ಚಿದಾನಂದ ಅವರು ತಾವು ಚರಕಾದ ಕಡೆ ಆಕರ್ಷಿತರಾದ ಬಗೆಯನ್ನು ವಿವರಿಸುತ್ತಾ, (ಪೆಟ್ಟಿಗೆ) ಚರಕಾದಿಂದ ನೂಲು ತೆಗೆಯುವ ವಿಧಾನದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ನಂತರದ ಗೋಷ್ಠಿಯಲ್ಲಿ ಶಿರ್ಸಿಯ ಪರಿಸರ ತಜ್ಞ ಮತ್ತು ಕಾರ್ಯಕರ್ತ ಕೇಶವ ಎಚ್. ಕೊರ್ಸೆಯವರು 'ಪರ್ಯಾಯ ಜೀವನ ಪದ್ಧತಿಗಾಗಿ ಶಿಕ್ಷಣ ಮತ್ತು ತರಬೇತಿ' ಎಂಬ ವಿಷಯವಾಗಿ ಮಾತನಾಡುತ್ತಾ, ತಾವು ಮತ್ತು ಕೆಲವು ಸಹಮನಸ್ಕರು ರಚಿಸಿಕೊಂಡಿರುವ ಒಂದು ಪುಟ್ಟ ಸ್ವಯಂಸೇವಾ ಸಂಘವು ಗ್ರಾಮ ಮಟ್ಟದಲ್ಲಿ ಭೂ ಬಳಕೆ, ಗೋಮಾಳ–ಕಾಡು–ಕೆರೆ–ಕಟ್ಟೆ ರಕ್ಷಣೆ ಮತ್ತು ನಿರ್ವಹಣೆ, ಪ್ಲಾಸ್ಟಿಕ್ ನಿಯಂತ್ರಣ ಮುಂತಾದ ಕಾರ್ಯಕ್ರಮಗಳ ಮೂಲಕ ಜನರ ಪರಿಸರ ಮಾರಕ ಜೀವನ ಪದ್ಧತಿಗಳ ಬಗ್ಗೆ ಜಾಗೃತಿ ಮೂಡಿಸಿ, ಬದಲಿ ಜೀವನ ಮಾರ್ಗಗಳಿಗಾಗಿ ಸರ್ಕಾರ ರೂಪಿಸುತ್ತಿರುವ ಯೋಜನೆಗಳನ್ನು ಗ್ರಾಮೀಣ ಜನರು ಬಳಸಿಕೊಳ್ಳಬಹುದಾದ ರೀತಿ ನೀತಿಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದರ ವಿವರ ನೀಡಿದರು.

ನಂತರದ ಗೋಷ್ಠಿಯಲ್ಲಿ ಕಾರ್ಕಳದ 'ಕದಿಕೆ' ಟ್ರಸ್ಟ್‌ನ ಮಮತಾ ರೈ ಅವರು 'ಪರ್ಯಾಯ ಜೀವನ ಮಾರ್ಗ: ನಮ್ಮ ಪ್ರಯೋಗ' ಎಂಬ ವಿಷಯದ ಬಗ್ಗೆ ಮಾತನಾಡಿ, ಭೌತಶಾಸ್ತ್ರದ ಉಪನ್ಯಾಸಕಿಯಾಗಿದ್ದ ತಾವು ಸಮಕಾಲೀನ ಜೀವನ ಪದ್ಧತಿಯಿಂದ ಬೇಸತ್ತು ತಮ್ಮದೇ ಆಯ್ಕೆಗಳಿರುವ ಹೊಸ ಜೀವನ ಪದ್ಧತಿಯನ್ನು, ಮೊದಲಿಗೆ ಇದಕ್ಕೆ ಸೂಕ್ತವೆನಿಸಿದ ಜೀವನ ಸಂಗಾತಿಯನ್ನು ತಾವೇ ಆರಿಸಿಕೊಂಡು ಅತಿ ಸರಳ ರೀತಿಯಲ್ಲಿ ಮದುವೆಯಾದುದರಿಂದ ಆರಂಭಿಸಿದ್ದಾಗಿ ಹೇಳುತ್ತಾ ಇಬ್ಬರು ಹೆಣ್ಣು ಮಕ್ಕಳ ತಮ್ಮ ಕುಟುಂಬವನ್ನು ಹೇಗೆ ಕನಿಷ್ಠ ಅಗತ್ಯಗಳ ಮತ್ತು ವಿವೇಚನಾಯುಕ್ತ ಬದಲಿ ಮಾರ್ಗಗಳ ಮೂಲಕ ಸರಳ ನೆಮ್ಮದಿಯ ವೈಯಕ್ತಿಕ ಜೀವನವನ್ನು ಕಟ್ಟಿಕೊಂಡ ಬಗೆಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ನಂತರ ಸಾಮಾಜಿಕವಾಗಿ ಕೆಲಸ ಮಾಡುವ ಪ್ರೇರಣೆಯಿಂದ 'ಕದಿಕೆ' (ಹಗೇವು) ಟ್ರಸ್ಟ್ ಸ್ಥಾಪಿಸಿ ಅದರ ಮೂಲಕ ಕಾಣೆಯಾಗತೊಡಗಿದ್ದ ಉಡುಪಿ ಸೀರೆಗಳ ಉಜ್ವಲ ಪರಂಪರೆಯನ್ನು ನೇಕಾರರ ಸಂಘಟನೆಯ ಮೂಲಕ ಪುನರುಜ್ಜೀವನಗೊಳಿಸಿ ಇಂದು ಅದನ್ನೊಂದು ಯಶಸ್ವಿ ಉದ್ಯಮವನ್ನಾಗಿ ಮಾಡಿ ನೇಕಾರಿಕೆಯ ಕಡೆ ನವ ಶಿಕ್ಷಿತ ಯುವಜನರನ್ನೂ ಆಕರ್ಷಿಸುತ್ತಿರುವ ಕಥೆಯನ್ನೂ ವಿವರಿಸಿದರು.

ಊಟದ ನಂತರ ಶಿಬಿರದ ಕೊನೆಯ ಗೋಷ್ಠಿಯಾಗಿ 'ಮಾನವತೆಯ ಬೆಳೆಗಾಗಿ ಬೇಸಾಯ' ವಿಷಯದ ಬಗ್ಗೆ ಮಾತನಾಡಿದ, ಬದಲಿ ನೀರಾವರಿ ಪದ್ಧತಿಯ ತಜ್ಞ ತುಮಕೂರಿನ ಮಲ್ಲಿಕಾರ್ಜುನ ಹೊಸಪಾಳ್ಯ ಅವರು ಒಂದು ಜೀವನ ಪದ್ಧತಿಯಾಗಿದ್ದ ಕೃಷಿಯನ್ನು ಆಧುನಿಕ ಬದುಕು ಒಂದು ವೃತ್ತಿಯನ್ನಾಗಿ ಪರಿವರ್ತಿಸಿ ರೈತನ ಆತ್ಮವನ್ನೇ ನಾಶ ಮಾಡಿ ಆತ ಬದುಕಿನಲ್ಲೇ ನಂಬಿಕೆ ಕಳೆದುಕೊಂಡು ಹತಾಶನಾಗಿ ಆತ್ಮಹತ್ಯೆಯ ಕಡೆ ಮುಖ ಮಾಡುವಂತೆ ಮಾಡಿದೆ ಎಂದರು. ಬೇಸಾಯದ ಮೂಲಕ ಪ್ರಕೃತಿಯೊಂದಿಗೆ, ತನ್ನ ಸಮಾಜದೊಂದಿಗೆ ಸಹಬಾಳ್ವೆಯ ಪಾಠಗಳನ್ನು ಕಲಿಯುತ್ತಾ ಮಾನವತೆಯ ಮೌಲ್ಯಗಳನ್ನು ಬಿತ್ತಿ ಬೆಳೆಯುತ್ತಾ ಸಂತೃಪ್ತ ಜೀವನ ನಡೆಸುತ್ತಿದ್ದ ರೈತ ಆಧುನಿಕ ಬೇಸಾಯ ಪದ್ಧತಿಯ ದುರಾಸೆ ಮತ್ತು ಲಾಭಕೋರತನಗಳಿಗೆ ಬಲಿ ಬಿದ್ದು ಹೇಗೆ ಹಳ್ಳಿಯ ಕೃಷಿ ಸಂಬಂಧಿತ ಜನಪದ ಆಚರಣೆ–ಪದ್ಧತಿಗಳು, ಭಜನೆ–ನಾಟಕ, ಹಬ್ಬ ಹರಿದಿನಗಳಿಂದ ದೂರವಾಗಿ, ಇದ್ದ ಸರಳ ನೆಮ್ಮದಿಯನ್ನು ಕಳೆದುಕೊಂಡಿರುವ ದುರಂತವನ್ನು ಮುಂದಿಟ್ಟರು.

ಪ್ರತಿ ಗೋಷ್ಠಿಯ ನಂತರ ಸಂಬಂಧಿತ ವಿಷಯದ ಬಗ್ಗೆ ಮುಕ್ತ ಚರ್ಚೆ ಮತ್ತು ಪ್ರಶ್ನೋತ್ತರಗಳಿಗೆ ಅವಕಾಶವಿರುತ್ತಿತ್ತು.



ಶಿಬಿರದ ಕೊನೆಯಲ್ಲಿ ಶಿಬಿರಾರ್ಥಿಗಳು ಶಿಬಿರ ಕುರಿತ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಶಿಬಿರದ ಸಮಾರೋಪದ ಮಾತುಗಳನ್ನಾಡಿದ ಹಿರಿಯ ಕವಯತ್ರಿ ಸವಿತಾ ನಾಗಭೂಷಣ ಅವರು, ಪರ್ಯಾಯ ಜೀವನ ಪದ್ಧತಿಗೆ ನಮ್ಮ ಅಗತ್ಯಗಳನ್ನು ಕಡಿಮೆ ಮಾಡಿಕೊಳ್ಳುವುದೇ ಮೊದಲ ಹೆಜ್ಜೆ ಎನ್ನುತ್ತಾ, ಸುಖದ ಬೆನ್ನಟ್ಟಿದ ಆಧುನಿಕ ಮನುಷ್ಯ ಹೆಚ್ಚೆಚ್ಚು ಜಡವಸ್ತುಗಳಿಂದ ಸುತ್ತುವರಿಯಲ್ಪಟ್ಟು ಹೇಗೆ ಮಾನವ ಸಂವೇದನೆಗಳಿಗೇ ಎರವಾಗುತ್ತಾ ಹೇಗೆ ಹೆಚ್ಚು ಹಿಂಸಕನಾಗುತ್ತಿದ್ದಾನೆ ಎಂಬುದನ್ನು ವಿವರಿಸಿದರು ಮತ್ತು ಇದಕ್ಕೆ ಪೂರಕವಾಗಿ ತಮ್ಮ ಎರಡು ಮೂರು ಕವನಗಳ ವಾಚನ ಮಾಡಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಮಕಾರ್ಯದರ್ಶಿ ಕಡಿದಾಳು ಪ್ರಕಾಶ್ ಅವರು ಮಾತನಾಡಿ, ಶಿಬಿರದ ಶಿಸ್ತು ಮತ್ತು ಅಚ್ಚುಕಟ್ಟುತನಗಳನ್ನು ಮೆಚ್ಚಿದರಲ್ಲದೆ, ಪ್ರತಿ ವರ್ಷ ಇಂತಹ ಶಿಬಿರಗಳ ಮೂಲಕ ಹೊಸ ತಲೆಮಾರನ್ನು ಸಮಕಾಲೀನ ಸವಾಲುಗಳಿಗೆ ಜಾಗೃತಗೊಳಿಸುತ್ತಿರುವ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಮಹತ್ಕಾರ್ಯದಲ್ಲಿ ತಮ್ಮ ಪ್ರತಿಷ್ಠಾನವೂ ಕೈಜೋಡಿಸುತ್ತಿರುವ ಹೆಮ್ಮೆ ತಮಗಿದೆ ಎಂದರು.

ಶಿಬಿರದ ಕಲಾಪಗಳ ಮಧ್ಯೆ ಯುವ ಗಾಯಕ ನಾದ ಮಣಿನಾಲ್ಕೂರು ಅವರು ಬಹು ಮಧುರವಾಗಿ ಭಾವಗೀತೆ ಮತ್ತು ತತ್ವಪದಗಳನ್ನು ಹಾಡಿ ಶಿಬಿರದ ಉತ್ಸಾಹವನ್ನು ಹೆಚ್ಚಿಸಿದರು. ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಟ್ರಸ್ಟಿಗಳಾದ ಎನ್.ಎಂ. ಕುಲಕರ್ಣಿ, ಎಂ. ರಾಜು ಮತ್ತು ಹೊನ್ನಾಳಿ ಚಂದ್ರು ಅವರು ವಿವಿಧ ಗೋಷ್ಠಿಗಳ ನಿರ್ವಹಣೆ ಮಾಡಿದರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ೬೦ ಜನ ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿದ್ದರು.

(ವರದಿ: **ರೇಖಾಂಬ ಟಿ.ಎಲ್.**)

ಒಂದು ಸವಿನೆನಪು

# ಸಾಬರ ಮನೆಯಲ್ಲಿ ಜಂಗು, ಜೋಳಿಗೆ, ಗಂಟೆ, ಜಾಗಟೆ!

–ಮಲ್ಲಿಕಾರ್ಜುನ ಹೊಸಪಾಳ್ಯ



ಚಿತ್ರ: ಹಜರತ್ ಅಲಿ

ಅಪ್ಪ ಮಧುಗಿರಿಯ ಆನಂದರಾಯನಬೆಟ್ಟದ ಬಸವಣ್ಣನ ಗುಡಿ ಪೂಜಾರ್ರು. ಅಪ್ಪ–ಅಮ್ಮ ಇಬ್ಬರೂ ದೇವರ ತಲೆ ಮೇಲೆ ಹೂವಿಡದೆ ನೀರನ್ನೂ ಕುಡಿಯುತ್ತಿರಲಿಲ್ಲ. ಬೆಳಿಗ್ಗೆ–ಸಂಜೆ ಶಿವಪೂಜೆ ಆಗಲೇಬೇಕು. ನಮ್ಮೂರು ಮಧುಗಿರಿಗೆ ಹತ್ತು ಮೈಲಿ ದೂರ. ಪ್ರತಿ ಸೋಮವಾರ, ಅಮಾವಾಸ್ಯೆ, ಹಬ್ಬಗಳಂದು, ಶ್ರಾವಣ, ಕಾರ್ತೀಕ ಇತ್ಯಾದಿ ವಿಶೇಷ ದಿನಗಳಲ್ಲಿ ಅಪ್ಪ ಊರಿಂದ ಮಧುಗಿರಿಗೆ ಬಂದು ಗುಡ್ಡ ಹತ್ತಿ ಪೂಜೆ ಮಾಡುತ್ತಿತ್ತು. ಶಿವರಾತ್ರಿ ಮತ್ತು ಬಸವ ಜಯಂತಿಯಲ್ಲಿ ವಿಶೇಷ ಪೂಜೆ.

ಪೂಜೆಗೆ ಸಂಬಂಧಿಸಿದ ಪರಿಕರಗಳಾದ ಜೋಳಿಗೆ, ಕಂಚಿನ ಮಂಗಳಾರತಿ ತಟ್ಟೆ, ಉದ್ಧರಣೆ, ತೀರ್ಥದ ಬಟ್ಟಲು, ಗಂಟೆ, ಜಾಗಟೆ, ಬಿದಿರಿನ ಬೆತ್ತ, ಭಕ್ತರಿಗೆ ಹೂಪ್ರಸಾದ ಕೊಡುವ ತಾಮ್ರದ ತಂಬಿಗೆ, ಕಾಲಿಗೆ ಕಟ್ಟಿಕೊಳ್ಳುವ ಜಂಗು, ದೀಪದೆಣ್ಣೆಯ ಕ್ಯಾನು, ಹಬ್ಬಗಳಂದು ವಿಶೇಷವಾಗಿ ಬಳಸುತ್ತಿದ್ದ ದೊಡ್ಡ ಗಂಟೆ, ಶಿವಲಿಂಗದ ತಲೆ ಮೇಲೆ ನೀರು ತೊಟ್ಟಿಕ್ಕಿಸುವ ತಾಮ್ರದ ಧಾರಾಪಾತ್ರೆ, ಪಂಚಲೋಹದ ಕಳಶ ಮುಂತಾದವುಗಳನ್ನೆಲ್ಲಾ ಪ್ರತೀಸಲ ಊರಿಂದ ಹೊತ್ತುಕೊಂಡು ಹೋಗುವುದು ತ್ರಾಸದಾಯಕ. ಹಾಗಾಗಿ ಅವುಗಳನ್ನೆಲ್ಲಾ ಮಧುಗಿರಿಯ ನನ್ನಮ್ಮಜ್ಜಿ ಮನೆಯಲ್ಲಿಡುತ್ತಿದ್ದರು. ಚೌಡೇಶ್ವರಿ ಗುಡಿ ಬೀದಿಗೆ ಆತುಕೊಂಡಂತೆ ಇದ್ದ ದರ್ಗಾ ರಸ್ತೆಯ ಓಣಿಯಲ್ಲಿ ನನ್ನಮ್ಮಜ್ಜಿ ಮನೆ ಇತ್ತು. ಆ ಮನೆಯನ್ನು ಅಜ್ಜಿ ಮನೆ ಎಂದೇ ಕರೆಯುತ್ತಿದ್ದೆವು. ನಮ್ಮ ಮನೆ ಬಿಟ್ಟರೆ ನಾವು ಹೆಚ್ಚು ಇರುತ್ತಿದ್ದುದೇ ಈ ಅಜ್ಜಿ ಮನೆಯಲ್ಲಿ. ನಮ್ಮ ಮನೆಯಿಂದ ಯಾರೇ ಮಧುಗಿರಿಗೆ ಹೋದರೂ ಅಜ್ಜಿ ಮನೆಗೆ ಒಂದು ಭೇಟಿ ಇದ್ದೇ ಇರುತ್ತಿತ್ತು. ಅದು ಬುಧವಾರದ ಸಂತೆ ಇರಲಿ, ಕಡ್ಲೆಕಾಯಿ ಮಂಡಿ ಇರಲಿ, ಬಟ್ಟೆ ಖರೀದಿ ಇರಲಿ, ಆಸ್ಪತ್ರೆಗೆ ಹೋಗಲಿ, ಸಿನಿಮಾ ಇರಲಿ, ದಂಡಿನ ಮಾರಮ್ಮನ ಜಾತ್ರೆಯ ಬೆಳ್ಳಿ ಪಲ್ಲಕ್ಕಿ ಇರಲಿ. ಕೋಟೆ ಬುಡದಲ್ಲಿದ್ದ ಬಸ್‌ಸ್ಟ್ಯಾಂಡಿನಲ್ಲಿ ಇಳಿದು ಪ್ರಧಾನರ ಬಾವಿ ದಾಟಿ ಹೋದರೆ ಐದೇ ನಿಮಿಷದ ದಾರಿ. ಸಾದಾ ಉಡುಗೆಯಲ್ಲಿ ಊರಿನಿಂದ ಬರುತ್ತಿದ್ದ ಅಪ್ಪ, ಅಜ್ಜಿ ಮನೆಗೆ ಹೋಗಿ ಕಾವಿ ಪೇಟ, ಶಾಲು ಧರಿಸಿ ಎಲ್ಲಾ ಪೂಜಾ ಪರಿಕರಗಳನ್ನೂ ತೆಗೆದುಕೊಂಡು ದೇವಸ್ಥಾನಕ್ಕೆ ಹೋಗುತ್ತಿತ್ತು. ಹೋಗೋ ಮುಂಚೆ ಅಜ್ಜಿಯೋ, ಸೊಸೆಯೋ ಮಾಡಿದ ಟೀ ಕುಡಿಯುವುದು ವಾಡಿಕೆ. ಪೂಜೆ ಮುಗಿಸಿಕೊಂಡು ಬೆಟ್ಟ ಇಳಿದು ಮತ್ತೆ ಅಜ್ಜಿ ಮನೆಗೆ ಬಂದು ಜೋಳಿಗೆಯನ್ನು ಅಡುಗೆ ಮನೆಯಲ್ಲಿದ್ದ ಗೂಟಕ್ಕೆ ನೇತು ಹಾಕಿ ಉಳಿದ ವಸ್ತುಗಳನ್ನು ನಡುಮನೆಯ ಗೋಡೆ ಪಕ್ಕ ಪೇರಿಸಿದ್ದ ರಿಪೀಸುಗಳ ಮೇಲೆ ಇಟ್ಟು ಪ್ರಸಾದ ಕೊಡಲು ಊರೊಳಗೆ ಹೋಗುತ್ತಿತ್ತು. ಆ ಕೆಲಸ ಮುಗಿಸಿ ಮತ್ತೆ ಬಂದು ಒಂದೆರಡು ಕಾಯೊಪ್ಪು, ಎಲೆ, ಅಡಿಕೆ, ಬಾಳೆ ಹಣ್ಣುಗಳನ್ನು ಅಜ್ಜಿಗೆ ಕೊಟ್ಟು ಮತ್ತೊಂದು ಸಲ ಟೀ ಕುಡಿದು ಊರಿಗೆ ವಾಪಸಾಗುವುದು ರೂಢಿ. ಒಮ್ಮೊಮ್ಮೆ ಊರಾಡಿ ಬಂದು ಸುಸ್ತಾಗಿದ್ದರೆ ಅಜ್ಜಿಮನೆ ವರಾಂಡದಲ್ಲಿ ಹಾಗೇ ಮಲಗುತ್ತಿದ್ದುದೂ ಉಂಟು. ಪೂಜೆ ತಡವಾಗಿ ಕೊನೇ ಬಸ್ಸು ಹೊರಟುಹೋಗಿದ್ದರೆ ಆವತ್ತು ಅಜ್ಜಿ ಮನೆಯಲ್ಲೇ ವಾಸ್ತವ್ಯ. ಮನೆ ಎಂದರೆ ಒಂದು ಬಚ್ಚಲು, ಅದರಾಚೆ ನಡುಮನೆ, ಅಲ್ಲಿ ಬಲಕ್ಕೆ ತಿರುಗಿದರೆ ಅಡುಗೆ ಕೋಣೆ. ಇಷ್ಟೇ.

ಶಿವರಾತ್ರಿ ಹಬ್ಬದಲ್ಲಂತೂ ನಾವು ಮನೆಮಂದಿಯೆಲ್ಲಾ ೨–೩ ದಿವಸ ಅಲ್ಲೇ ಠಿಕಾಣಿ. ಇಮ್ಮಡಿಗಾನಹಳ್ಳಿಯವರ ಅಂಗಡಿ ಮುಂದಿದ್ದ ಬುಡೇನ್, ಬೆಟ್ಟದ ಮೇಲಿನ ದೇವಸ್ಥಾನಕ್ಕೆ ಮೈಕ್‌ಸೆಟ್ ಹಾಕುತ್ತಿದ್ದರು. ಅವರೊಂದಿಗೆ ಆ ಉದ್ದನೆಯ ಹಾರನ್, ಬ್ಯಾಟರಿ, ಸೀರಿಯಲ್ ಸೆಟ್ಟುಗಳನ್ನು ಹೊತ್ತು ನಾವು, ಅಜ್ಜಿ ಕೊನೆಮಗ ಮಾಬು ಹತ್ತುತ್ತಿದ್ದೆವು.

ಒಂದು ವರ್ಷ ಮೈಕ್‌ಸೆಟ್ ಜೋಡಿಸಿ 'ಶುಕ್ಲಾಂಬರಧರಂ...' ಮುಗಿಯುತ್ತಿದ್ದಂತೆ ಸಣ್ಣವನಾದ ನಾನು ಆಗ ತುಂಬಾ ಜನಪ್ರಿಯವಾಗಿದ್ದ ಕುರ್ಬಾನಿ ಹಿಂದಿ ಸಿನಿಮಾ ಪ್ಲೇಟು ಹಾಕುವಂತೆ ದುಂಬಾಲು ಬಿದ್ದೆ. ಬುಡೇನು–ಮಾಬು ಇಬ್ಬರೂ ನಗಾಡುತ್ತಾ 'ಇಂತಾ ಜಾಗದಾಗೆ ಅಂತಾ ಹಾಡೆಲ್ಲಾ ಹಾಕ್ಬಾರ್ದು ಅಯ್‌ನೋರೇ' ಎಂದಿದ್ದ ನೆನಪು.

ಶಿವರಾತ್ರಿ ಜಾಗರಣೆಗೆ ಬೆಟ್ಟದ ಮೇಲಿನ ದೇವಸ್ಥಾನದಲ್ಲೇ ಎಲ್ಲರೂ ತಂಗುತ್ತಿದ್ದೆವು. ಅದಕ್ಕೆ ಬೇಕಾದ ಚಾಪೆ, ಬಿಂದಿಗೆ, ಮಚ್ಚು, ಚಾಕು, ತುರೆಮಣೆ ಇತ್ಯಾದಿಗಳೆಲ್ಲಾ ಅಜ್ಜಿಮನೆಯಿಂದಲೇ ಸರಬರಾಜು. ಕೆಲವು ಸಲ ಅವರೂ ಬಂದು ಸ್ವಲ್ಪ ಹೊತ್ತು ಇದ್ದು ಹೋಗುತ್ತಿದ್ದರು.

ಅಜ್ಜಿ ಮನೆಯಿಂದ ನಾಲ್ಕು ಹೆಜ್ಜೆ ದಾಟಿದರೆ ಗಂಗೋಜಿರಾಯರ ಮನೆ, ಅಲ್ಲಿಂದಾಚೆ ದರ್ಗಾ ರಸ್ತೆ, ಅದರ ಪಕ್ಕದ ದೊಡ್ಡಬಯಲಿನಲ್ಲಿ ಬೃಹತ್ ಆಲದ ಮರ, ಅದರ ಕೆಳಗೆ ಗೋರಿ. ಇಲ್ಲಿ ಪ್ರತಿ ವರ್ಷ ಉರುಸ್ ನಡೆಯುತ್ತಿತ್ತು. ಅಜ್ಜಿಮನೆ ಪಕ್ಕದಲ್ಲೇ ಕೆ.ಇ.ಬಿ.ಯಲ್ಲಿ ಕೆಲಸ ಮಾಡುತ್ತಿದ್ದವರ ಒಂದು ಮನೆ ಇತ್ತು. ಹೆಸರು ಮರೆತಿದೆ. ಅಪ್ಪ ರಾತ್ರಿ ಅಜ್ಜಿಮನೆಯಲ್ಲಿ ಉಳಿಯಬೇಕಾಗಿ ಬಂದಾಗ ಅವರ ಮನೆಗೆ ಶಿವಪೂಜೆಗೆ ಹೋಗುತ್ತಿತ್ತು.

ಅಜ್ಜಿ ಮನೆಯ ಮರೆಯಲಾರದ ನೆನಪೆಂದರೆ ನನ್ನ ಜೀವಮಾನದಲ್ಲಿ ಮೊದಲ ಸಲ ಇಡ್ಲಿ ಅನ್ನೋ ಪದಾರ್ಥ ತಿಂದಿದ್ದು ಅಲ್ಲೇ. ಒಂದು ದಿನ ಅಕ್ಕನನ್ನು ಆಸ್ಪತ್ರೆಗೆ ಕರೆದುಕೊಂಡು ಬೆಳಿಗ್ಗೆಯೇ ಮಧುಗಿರಿಗೆ ಹೋಗಿದ್ದೆ. ತಟ್ಟೆಯಲ್ಲಿ ಬಿಸಿಬಿಸಿ ಗುಂಡಿಡ್ಲಿಗಳು ಬಂದವು. ಆ ಇಡ್ಲಿಗಳೋ, ಅವುಗಳ ಮೃದುತ್ವವೋ, ಗುಂಡಗಿನ ಆಕಾರವೋ, ಆ ಚಟ್ನಿಯ ರುಚಿಯೋ, ಅಬ್ಬಾ. ನಾಲ್ಕು ದಶಕಗಳಲ್ಲಿ ಎಲ್ಲೆಲ್ಲೋ ಇಡ್ಲಿ ತಿಂದಿದ್ದರೂ ಇಡ್ಲಿ ಅಂದಾಕ್ಷಣ ನನಗೆ ನೆನಪಾಗುವುದೇ ನನ್ನಮ್ಮಜ್ಜಿ ಮನೆ.

ಅಜ್ಜಿಯ ಎರಡನೇ ಮಗ ಇಮಾಮ್ ಸಾಬು ಹಾಗೂ ನನ್ನ ದೊಡ್ಡಣ್ಣ ಬಸವಲಿಂಗಾರಾಧ್ಯ ಒಂದೇ ವಾರಿಗೆಯವರು. ಬಸವಣ್ಣನ ದೇವಸ್ಥಾನದ ಮುಂದಿರುವ ವಿಶಾಲವಾದ ಬಂಡೆಯ ಮೇಲೆ ಇಬ್ಬರೂ ತಮ್ಮ ಹೆಸರುಗಳನ್ನು ಕೆತ್ತಿದ್ದಾರೆ. ಇಂದಿಗೂ ಅವು ಹಾಗೇ ಇವೆ. ಇಬ್ಬರೂ ಸಣ್ಣವರಿದ್ದಾಗ ದೇವಸ್ಥಾನದ ನಿರ್ಮಾಣ ನಡೆಯುತ್ತಿತ್ತಂತೆ. ದೊಡ್ಡವರೆಲ್ಲಾ ಕೆಲಸ ಮಾಡುತ್ತಿದ್ದರೆ ಹುಡುಗರಾದ ಇವರು ಹೆಸರು ಕೆತ್ತುತ್ತಿದ್ದರಂತೆ. ಅದನ್ನು ಅಮ್ಮ ಆಗಾಗ ನೆನಪಿಸಿಕೊಳ್ಳುತ್ತದೆ.

ಅಜ್ಜಿಯ ಮೂರನೇ ಮಗ ಮಾಬು. ಅವರ ಹೆಸರು ಮಹಬೂಬ್ ಅಂತ ಗೊತ್ತಾಗಲು ಎಷ್ಟೋ ವರ್ಷವಾಯ್ತು. ಮಾಬು ಮದುವೆ ಬುಕ್ಕಾಪಟ್ಟಣದಲ್ಲೋ, ಮರೆಕ್ಕನಹಳ್ಳಿಯಲ್ಲೋ ಆದ ನೆನಪು. ನಮ್ಮ ಎತ್ತಿನ ಗಾಡಿಯಲ್ಲೇ ಗಂಡು ಕರೆದುಕೊಂಡು ಹೋಗಿದ್ದು. ಗಾಡಿ ಹೊಡಕೊಂಡು ಹೋಗಿದ್ದ ನಮ್ಮ ಮಂಜಣ್ಣ ಮದುವೆಯಲ್ಲಿ ಮಾಡಿದ್ದ ಥರಾಂಥರ ಸಿಹಿ ತಿನಿಸುಗಳ ಬಗ್ಗೆ ತಿಂಗಳುಗಟ್ಟಲೆ ನಮಗೆಲ್ಲಾ ಹೇಳುತ್ತಲೇ ಇದ್ದ.

ನಾವು ಅಜ್ಜಿ ಮನೆಗೆ ಹೋಗುತ್ತಿದ್ದಂತೆ ಅವರೂ ನಮ್ಮ ಮನೆಗೆ ವರ್ಷಕ್ಕೊಮ್ಮೆ ಬಂದು ಭರ್ತಿ ವಾರ ಇರುತ್ತಿದ್ದರು. ಅದೊಂಥರಾ ಸಂಭ್ರಮ. ಮನೆಯಲ್ಲಿ ಅಮ್ಮ–ಅಕ್ಕನ ಜೊತೆ ಸೇರಿ ಎಲೆಕಟ್ಟುವುದು, ಹಪ್ಪಳ–ಸಂಡಿಗೆ ಇಡುವುದು, ಹೊಲಕ್ಕೆ ಬರುವುದು ಮುಂತಾಗಿ ಹಲವು ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. ನಮ್ಮ ಮನೆಯಲ್ಲಿ ಬೆಲ್ಲದ ಟೀ ಮಾಡುತ್ತಿದ್ದೆವು. ಆದರೆ ಅಜ್ಜಿ ಬಂದಾಗ ಅಪ್ಪ ಸಕ್ಕರೆ ತರುತ್ತಿತ್ತು. ಅಜ್ಜಿ ಸಕ್ಕರೆ ಹಾಕಿದ ಟೀಯನ್ನೇ ಕುಡಿಯುತ್ತಿದ್ದುದು. ಅದರಲ್ಲೂ ಸ್ವಲ್ಪ ಜಾಸ್ತೀನೇ ಹಾಕಬೇಕಿತ್ತು. ಒಂದು ಸಲ ಅಮ್ಮ ಸಕ್ಕರೆ ಕಮ್ಮಿ ಹಾಕಿಬಿಟ್ಟಿತ್ತು. ಒಂದು ಗುಟುಕು ಕುಡಿದವರೇ ಅಜ್ಜಿ 'ಯಾ ಅಲ್ಲಾ' ಅಂತ ಮುಖ ಕಿವಿಚಿಕೊಂಡುಬಿಟ್ಟಿತು. ತಕ್ಷಣ ಸಕ್ಕರೆ ಕೊಟ್ಟೆವು.

ಒಂದು ಸಲ ಅಜ್ಜಿಯ ಎರಡನೇ ಸೊಸೆ ಮಮ್ತಾಜ್ ಬಂದಿದ್ದರು. ಅವರು ಎಷ್ಟು ಬೆಳ್ಳಗಿದ್ದರೆಂದರೆ ಅವರನ್ನು ನೋಡಲಿಕ್ಕೆಂದೇ ಮನೆ ಹತ್ರ ಜನ ಬಂದಿದ್ದು ನೆನಪು. ಮಮ್ತಾಜ್ ಆಗ ನಮ್ಮ ಮನೆಯಲ್ಲಿದ್ದ ಎಲ್ಲೋರಾ ರೇಡಿಯೋದಲ್ಲಿ ಹಿಂದಿ ಹಾಡುಗಳನ್ನು ಕೇಳುತ್ತಿದ್ದರು. ರಫಿ, ಕಿಶೋರ್‌ಕುಮಾರ್, ಮನ್ನಾಡೆಯವರ ಹೆಸರುಗಳು ಕೇಳಿದ್ದೇ ಅವರಿಂದ. ಹಿಂದೂಪುರದವರಾದ ಅವರು ಆ ಊರಿನ, ಅಲ್ಲಿನ ಹುಣಸೆ ಮಾರ್ಕೆಟ್ ಬಗ್ಗೆ ತುಂಬಾ ಮಾತಾಡುತ್ತಿದ್ದರು.

ಮಧುಗಿರಿಯಲ್ಲಿ ಅಪ್ಪ–ಅಮ್ಮನಿಗೆ ಪರಿಚಯದ, ಸಂಬಂಧಿಕರ ಹತ್ತಾರು ಮನೆಗಳಿದ್ದವು. ಸಿದ್ದಮ್ಮಜ್ಜಿ ಮನೆ, ಮಂಡಿ ಬಸವರಾಜಪ್ಪನ ಮನೆ, ಗಂಧದ ಮಲ್ಲಣ್ಣನವರ ಮನೆ, ಗಂಗಾಧರಪ್ಪ ಮೇಷ್ಟರ ಮನೆ ಇತ್ಯಾದಿ. ಅವರ ಮನೆಗೆ ಕತೆ ಓದಲಿಕ್ಕೋ, ಪೂಜೆಗೋ, ಊಟಕ್ಕೋ ಹೋಗುತ್ತಿದ್ದೆವು. ಆದರೆ ಅಲ್ಲೆಲ್ಲೂ ಅಜ್ಜಿ ಮನೆ ಥರದ ಹೊಕ್ಕು ಬಳಕೆ ಇರಲಿಲ್ಲ. ಅಲ್ಲದೆ ಅವರುಗಳೂ ಸಹ ಯಾಕೆ ಐನೋರೆ ನನ್ನಮ್ಮಜ್ಜಿ ಮನೆಯಲ್ಲಿದ್ದೀರಿ ಅಂತ ಅಪ್ಪನನ್ನು ಕೇಳಿದ್ದಿಲ್ಲ.

ಇಮಾಮಣ್ಣ ಧಿಡೀರ್ ಅಂತ ತೀರಿಹೋದಾಗ ಅಜ್ಜಿ ಮೆತ್ತಗಾಗಿಬಿಟ್ಟಿತ್ತು. ಅಪ್ಪನಿಗೆ ಸ್ಟ್ರೋಕ್ ಆಗಿ ಮಾತು ನಿಂತಾಗ, ಅದೇ ನೋವಿನಲ್ಲಿ ಕಣ್ಮುಚ್ಚಿದಾಗ ಮನೆಗೆ ಬಂದ ಅಜ್ಜಿಯ ಗೋಳಾಟ ಹೇಳತೀರದು. ಕೆಲ ವರ್ಷಗಳ ಹಿಂದೆ ಅಜ್ಜಿಯೂ ತೀರಿ ಹೋಯಿತು.

ಅಪ್ಪ ಹೋದ ಮೇಲೆ ದೇವಸ್ಥಾನದ ಪೂಜಾರಿಕೆ ಬೇರೆಯವರು ನಿರ್ವಹಿಸತೊಡಗಿದರು. ಅಜ್ಜಿ ಮನೆಯಲ್ಲಿ ಈಗ ಜಂಗು, ಜೋಳಿಗೆಗಳಿಲ್ಲ. ಆದರೆ ಈಗಲೂ ಎರಡೂ ಕುಟುಂಬಗಳ ನಂಟು ಹಾಗೇ ಇದೆ.

**(ಲೇಖಕರು ಹೊಸಪೇಟೆಯ ಸಿಂಡಿಕೇಟ್ ಬ್ಯಾಂಕಿನ ಕೃಷಿ ವಿಭಾಗದಲ್ಲಿ ನೀರಾವರಿ ಸಲಹಾಕಾರರಾಗಿದ್ದಾರೆ)**

ಅನುಭವ ಕಥನ

# ಕುಪ್ಪಳಿಯ ಎರಡು ದಿನಗಳ ಶಿಬಿರ: ನೆನಪು ಅಮರ

–ಮಮತಾ ಪ್ರಭು



**ಅ**ಕ್ಟೋಬರ್ ೩೦ ಹಾಗೂ ೩೧ರಂದು ಎರಡು ದಿನ ಕುವೆಂಪು ಜನಿಸಿದ ಕುಪ್ಪಳಿಯಲ್ಲಿ ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನವು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಡಿ ಎಸ್ ನಾಗಭೂಷಣರವರ ನಿರ್ದೇಶಕತ್ವದಲ್ಲಿ "ಪರ್ಯಾಯ ಜೀವನ ಪದ್ಧತಿ" ವಿಚಾರವನ್ನು ಇಟ್ಟುಕೊಂಡು ಚಿಂತನ–ಮಂಥನ ಶಿಬಿರ ನಡೆದಿತ್ತು. ಆಡಿಮಾಡುವವನು ರೂಢಿಯೊಳಗುತ್ತಮನು ಎಂಬ ಮಾತನ್ನು ಕೇಳಿದ್ದೇವೆ. ಆದರೆ ಮಾಡಿದ್ದನ್ನೆ ಆಡುವವರು, ಆಡಿದ್ದನ್ನೆ ಮಾಡುವವರು ಬಹಳ ಅಪರೂಪ. ಅಂತಹ ವ್ಯಕ್ತಿಗಳನ್ನು ನೋಡುವ ಭಾಗ್ಯ ಶಿಬಿರಾರ್ಥಿಯಾಗಿ ಹೋಗಿದ್ದ ನನ್ನದಾಯಿತು.

### ತದ್ವಿರುದ್ಧವಾಗಿತ್ತು

ನಾವು ಜಾಗತಿಕ ತಾಪಮಾನದ ಬಗ್ಗೆ ವೇದಿಕೆಯ ಮೇಲೆ ನಿಂತು ಗಂಟೆಗಟ್ಟಲೆ ಭಾಷಣ ಮಾಡುತ್ತೇವೆ. ಜಾಗತಿಕ ತಾಪಮಾನ ಏರಿಕೆಗೆ ಕಾರಣವಾದ ಎಲ್ಲರನ್ನು, ಎಲ್ಲವನ್ನೂ ನಿಂದಿಸಿ ರೋಷದಿಂದ ಕೂಗಾಡಿ ಅದೇ ವೇದಿಕೆಯಿಂದ ಕೆಳಗಿಳಿದು ಲೀಟರಿಗೆ ೮–೯ ಕಿಲೋಮೀಟರ್ ಕೊಡುವ ಗಾಡಿಯಲ್ಲಿ ಅರ್ಧ ಕಿಲೋಮೀಟರ್ ದೂರದಲ್ಲಿರುವ ನಮ್ಮ ಮನೆಯನ್ನು ಸೇರುತ್ತೇವೆ. ಇದು ನಮ್ಮ ಜಾಗತಿಕ ತಾಪಮಾನವನ್ನು ತಗ್ಗಿಸುವಲ್ಲಿ ಇರುವ ನಮ್ಮ ಪ್ರಯತ್ನ. ಕನ್ನಡವ ಕಾಪಾಡು ಎಂದು ಇಂಗ್ಲಿಷ್ನಲ್ಲಿ ಮನವಿಪತ್ರ ನೀಡಿದಂತೆ. ಆದರೆ ಈ ಕಾರ್ಯಕ್ರಮ ಅದಕ್ಕೆಲ್ಲ ತದ್ವಿರುದ್ಧವಾದದ್ದು. ಅಲ್ಲಿ ಬಂದು ಮಾತನಾಡುತ್ತಿದ್ದವರು ತಲೆ ಕೂದಲಿಗೆ ಬಣ್ಣ ಹಾಕಿರಲಿಲ್ಲ. ತಾವೇ ನೇಯ್ದ ಬಟ್ಟೆಯನ್ನು ತೊಟ್ಟು ಬಂದಿದ್ದರು. ಎಲ್ಲರೊಟ್ಟಿಗೆ ನಗುತ್ತ ಮಾತನಾಡುತ್ತಿದ್ದರು. ಏನನ್ನೋ ಸಾಧಿಸಿದ್ದೇವೆಂಬ ಹಮ್ಮು–ಬಿಮ್ಮು ಅವರಲ್ಲಿ ಕಾಣಲಿಲ್ಲ. ಅಹಂಕಾರವಿಲ್ಲದ ನಿರಾಭರಣ ಸುಂದರ ಮೂರ್ತಿಗಳಂತೆ ಕಂಡರು. ಅವರೆಲ್ಲಾ ನಿಜವಾದ ಸಾಧಕರಾಗಿದ್ದರು. ನಾವೆಲ್ಲರೂ "ಇದೆಲ್ಲಾ ಕೇಳೋಕೆ, ನೋಡೋಕೆ ಚಂದ. ಆದ್ರೆ ಬದುಕೋಕಲ್ಲ" ಎಂದು ಸೋತು ಕುಳಿತಾಗ ಅದೇ ದಾರಿಯಲ್ಲಿ ನಡೆದು ಬರುತ್ತಿದ್ದ ನಿಜ ಸಾಧಕರು ಅವರು.

### ಕಥೆ ಹೇಳಿದರು



ನನ್ನ ಜೀವನದಲ್ಲಿ ಇದುವರೆಗೂ ಯಾವ ಕಾರ್ಯಕ್ರಮದಲ್ಲಿಯೂ ಇಂತಹ ವ್ಯಕ್ತಿಗಳನ್ನು ಅಷ್ಟು ಹತ್ತಿರದಿಂದ ನೋಡುವುದಾಗಲಿ ಮಾತನಾಡುವುದಾಗಲಿ ಸಾಧ್ಯವಾಗಿರಲಿಲ್ಲ. ಡಾಕ್ಟರ್ ಸಂಜೀವ ಕುಲಕರ್ಣಿ ಅವರು ವೈದ್ಯರು. ಚರಕದಿಂದ ನೇಯ್ದ ಬಟ್ಟೆಯನ್ನು ತೊಟ್ಟಿದ್ದರು. ಇಂದಿನ ಜನರ ಜೀವನಕ್ರಮ ವಿವರಿಸುತ್ತಾ ಒಂದು ಕಥೆಯನ್ನು ಹೇಳಿದರು. ನೀರೋ ಎಂಬ ರೋಮನ್ ರಾಜ ತನ್ನ ಸಾಮ್ರಾಜ್ಯದ ಗಣ್ಯರನ್ನು ಕರೆದು ಒಂದು ಔತಣಕೂಟವನ್ನು ಏರ್ಪಡಿಸಿದ್ದನು. ಮದ್ಯ ಮಾಂಸದೂಟದ ವ್ಯವಸ್ಥೆ ಬಹಳ ಜೋರಾಗಿತ್ತಂತೆ. ಇನ್ನೇನು ಔತಣಕೂಟ ಪ್ರಾರಂಭವಾಗುವಷ್ಟರಲ್ಲಿ ದೀಪಗಳಲ್ಲಿನ ಇಂಧನ ತೀರಿ ಹೋಯ್ತಂತೆ. ಆಗ ಸೆರೆಮನೆಯಲ್ಲಿದ್ದ ಗುಲಾಮರನ್ನು ಕರೆತರಲು ಆಜ್ಞಾಪಿಸಿದನಂತೆ. ಗುಲಾಮರನ್ನು ಕರೆತಂದು ಕಂಬಕ್ಕೆ ಕಟ್ಟಿ ಅವರಿಗೆ ಬೆಂಕಿ ಹಚ್ಚಿ ಆ ಬೆಂಕಿಯಲ್ಲಿ ಔತಣ ಕೂಟ ಮುಂದುವರಿಸಿದರಂತೆ. ನಮ್ಮ ಇಂದಿನ ಜೀವನ ಕ್ರಮ, ಆಹಾರ ಕ್ರಮ ಎಲ್ಲವೂ ಈ ನೀರೋ ರಾಜನ ಪರಿಪಾಠವೇ ಆಗಿದೆ. ನಮ್ಮ ಮಕ್ಕಳ ಭವಿಷ್ಯದ ಬೆಂಕಿಯಲ್ಲಿ ಇಂದು ಅತ್ಯಾಧುನಿಕ ಬದುಕು ನಡೆಸುತ್ತಾ ಮಕ್ಕಳಿಗೆ ಕಂಫರ್ಟ್ ಬದುಕನ್ನು ಕೊಡುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದೇವೆ.

### ವಿಶೇಷ ವ್ಯಕ್ತಿತ್ವದವರು

ಮತ್ತೊಂದು ವಿಶೇಷ ವ್ಯಕ್ತಿತ್ವವೆಂದರೆ ರಾಘವರದ್ದು. ಕಾರ್ಯಕ್ರಮದ ಉದ್ಘಾಟನೆಯ ಸಂದರ್ಭದಲ್ಲಿ ಬೆನ್ನ ಹಿಂದೆಲ್ಲಾ ಯಾರ್ಯಾರು ಕುಳಿತಿರಬಹುದೆಂದು ತಿಳಿಯುವ ಕುತೂಹಲಕ್ಕೆ ಸಭೆಯನ್ನು ಹಿಂದಿರುಗಿ ನೋಡಿದಾಗ ರಾಘವರನ್ನು ನೋಡಿ ಯಾವುದೋ ಮಠದಿಂದ ಸ್ವಾಮೀಜಿ ಬಂದಿದ್ದಾರೆ, ಆಧ್ಯಾತ್ಮ ಬೋಧಿಸಬಹುದೆಂದು ಅಂದುಕೊಂಡೆ. ಉದ್ದನೆಯ ಮರೂನ್ ಬಣ್ಣದ ನಿಲುವಂಗಿ, ಪಂಚೆ, ಉದ್ದನೆಯ ಗಡ್ಡ ಬಿಟ್ಟಿದ್ದ ರಾಘವ ಎಲ್ಲರ ನಡುವೆ ಬಹಳ ವಿಶೇಷವಾಗಿ ಕಾಣಿಸುತ್ತಿದ್ದರು. ಸಂಸಾರ ತೊರೆದ ಸನ್ಯಾಸಿಯಂತೆ ಕಂಡರು ರಾಘವ. ಅವರು ಮಾತನಾಡಲು ವೇದಿಕೆಗೆ ಬಂದ ಮೇಲೆ, ಅವರ ಮಾತುಗಳನ್ನು ಕೇಳಿದ ಮೇಲೆ ಅವರೆಂಥ ರಸಿಕರು!! ಎಂದು ತಿಳಿಯಿತು. ಪ್ರತಿಯೊಂದರಲ್ಲಿಯೂ durability ಹಾಗೂ sustainability ಯನ್ನು ಹುಡುಕುವ ಮತ್ತು ನಿರೀಕ್ಷಿಸುವ, ಜೀವನದ ನಿಜ ಸ್ವಾರಸ್ಯ ತಿಳಿದ ರಸಿಕ ಇವರು ಅಂದುಕೊಂಡೆ.



ಎಂಬಿಎ ಪದವೀಧರನಾಗಿದ್ದ ಇವರು ಆರಂಕಿ ಸಂಬಳ ಪಡೆಯುತ್ತಾ ವಿದೇಶದಲ್ಲಿ ನೆಲೆಸುವ ಎಲ್ಲಾ ಅವಕಾಶಗಳನ್ನು ಬಿಟ್ಟಿದ್ದರು. ಹುಟ್ಟಿನಿಂದ ಶ್ರೀಮಂತರಾಗಿದ್ದ ರಾಘವ ಅಪ್ಪನ ಅನಾರೋಗ್ಯದ ಕಾರಣಕ್ಕೆ ಕೆಲಸ ತೊರೆದು ಮನೆಗೆ ಮರಳುವ ಅನಿವಾರ್ಯತೆಗೆ ಬಿದ್ದಿದ್ದರು. ಮೊದಲಿಂದಲೂ ಏನೇ ಮಾಡಿದರೂ ವಿಶೇಷವಾಗಿ, ಭಿನ್ನವಾಗಿಯೇ ಮಾಡುವ ವ್ಯಕ್ತಿತ್ವ ಇವರದ್ದು. ಮಣ್ಣಿಗೆ ಮರಳಿದಾಗ ಅಲ್ಲಿಯೂ ಅವರ ವ್ಯಕ್ತಿತ್ವದೊಡನೆ ರಾಜಿ ಆಗಲಿಲ್ಲ. ನೈಸರ್ಗಿಕ ಕೃಷಿಗೆ ಮಾರು ಹೋದವರು.. "ಏನು ಮಾಡದಿರುವುದೇ ವ್ಯವಸಾಯ" ಎಂಬುದನ್ನು ಅರಿತರು. ಅಂದರೆ ಭೂಮಿಗೆ ಎಲ್ಲವನ್ನು ಧರಿಸುವ, ಬೆಳೆಸುವ ಶಕ್ತಿ ಇದೆ. ಅದು ಎಲ್ಲವನ್ನೂ ಬೆಳೆಸಿ ಕೊಳ್ಳುತ್ತದೆ. ಅದು ಬೆಳೆಸಿದ್ದನ್ನು ನಾವು ಬಳಸಿಕೊಳ್ಳುವುದಕ್ಕೆ ವ್ಯವಸಾಯ ಅನ್ನಬಹುದು ಎಂದಿತ್ತು ಅವರ ವ್ಯಾಖ್ಯಾನ. ಭೂಮಿಗೆ ಬೆಳೆಯುವುದಕ್ಕೆ ಅವಕಾಶ ಕೊಡುವುದೇ ಬೇಸಾಯ ಎಂದರು. ಹೊರ ರಾಜ್ಯಗಳಿಂದ, ವಿದೇಶಗಳಿಂದಲೂ ಬಂದು ತಿಂಗಳುಗಟ್ಟಲೆ ಅಲ್ಲಿಯೇ ಉಳಿದು ಇವರ ಸಹಜ ಕೃಷಿ ಪದ್ಧತಿಯನ್ನು ಕಲಿತು ಹೋಗುತ್ತಿದ್ದಾರೆ. ಶಾಲೆಗಳು ಜೀವನ ಶಿಕ್ಷಣ ನೀಡುತ್ತಿಲ್ಲ ಎಂದರಿತ ರಾಘವ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸದೆಯೇ ಮನೆಯಲ್ಲಿಯೇ ಜೀವನ ಶಿಕ್ಷಣ ನೀಡುತ್ತಿರುವವರು. ಮನೆಯಲ್ಲಿ ಅಕ್ಷರ ಹಾಗೂ ಜೀವನ ಶಿಕ್ಷಣ ಕಲಿತ ಮಕ್ಕಳು ದೊಡ್ಡ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ. ರಾಘವ ನಮ್ಮೊಳಗಿನ ವಿಶೇಷಗಳ ವಿಶೇಷ ಅನಿಸಿದ್ದಂತೂ ಸತ್ಯ. Unschooling, ಸಹಜಕೃಷಿ ಪದಗಳನ್ನು ಎಲ್ಲೆಲ್ಲೋ ಕೇಳಿದಾಗ ಅರೆಕ್ಷಣ ಅಚ್ಚರಿ ವ್ಯಕ್ತಪಡಿಸಿ ಸುಮ್ಮನಾಗುತ್ತೇವೆ. ಆದರೆ ಅದೇ ವಿಷಯ ನಮ್ಮ ಮುಂದೆ ಮೂರ್ತವೆತ್ತು ನಿಂತಾಗ ಹೀಗೂ ಬದುಕಬಹುದೇ? ನಾವು ಹೇಗೆಲ್ಲಾ ಬದುಕಿದೆವು ಎಂದು ಪ್ರಶ್ನೆಯೊಂದು ಕಾಡುತ್ತದೆ.. ಒಂದು ಸೃಜನಾತ್ಮಕ ಬದುಕಿನ ಶೈಲಿಯನ್ನು ಮಿಸ್ ಮಾಡಿಕೊಂಡ ಭಾವ ಮೂಕ ಹಾಡಾಗಿ ಮನದಲ್ಲಿ ಉಳಿಯುತ್ತದೆ.

### ಚರಕ ದಾರಿ ತೋರಿತು



ಮೈಸೂರಿನಿಂದ ಸಚ್ಚಿದಾನಂದ ಅವರು ಬಂದಿದ್ದರು. ಪ್ರೀತಿಯಿಂದ ಎಲ್ಲರೂ ಅವರನ್ನು ಸಚ್ಚಿ ಎಂದು ಕರೆಯುತ್ತಿದ್ದರು. ಅವರು ಕೂಡ ನೋಡಲು ಬಹಳ ವಿಶೇಷ. ಉದ್ದವಾದ ಗಡ್ಡ, ಎತ್ತರವಾದ ಆಳು, ಒಳ್ಳೆ ಹರಟೆಕೋರ ಅಂತ ಅವರ ಗೆಳೆಯ ಹೇಳುತ್ತಿದ್ದರು. ಹುಟ್ಟುವಾಗಲೇ ಶೇಕಡಾ 65ರಷ್ಟು ಮಾತ್ರ ದೃಷ್ಟಿ ಹೊಂದಿದವರು. ನನಗೆ ಈ ಸುಂದರ ಪ್ರಪಂಚವೆಲ್ಲವೂ ಮಬ್ಬು ಮಬ್ಬಾಗಿ ಕಾಣುತ್ತಿತ್ತು ಎಂದು ಹೇಳುವಾಗ ಭಾವುಕಳಾದೆ. ಅವರ 40ನೇ ವಯಸ್ಸಿನಲ್ಲಿ ಶಸ್ತ್ರಚಿಕಿತ್ಸೆಯ ನಂತರ ಪೂರ್ತಿ ದೃಷ್ಟಿ ಪಡೆಯಲು ಸಾಧ್ಯವಾಯಿತು. ಸುಂದರ ಪ್ರಪಂಚ ಕಂಡರು. ಸುಂದರೆ–ವಸುಂಧರೆಯ ಮೇಲಾಗುತ್ತಿರುವ ಅತ್ಯಾಚಾರ ಕಂಡರು, ಮರುಗಿದರು. ಪರಿಹಾರವೇನೆಂದು ಹಗಲಿರುಳು ಚಿಂತಿಸಿದರು. ಚರಕ ದಾರಿತೋರಿತು. ಅವರ ಮಾತಿನಲ್ಲೇ ಹೇಳುವುದಾದರೆ "ಗಾಂಧೀಜಿಯವರ ಬಗ್ಗೆ extreme ಆಗಿ ಬರೆದ ಅನೇಕ ಪುಸ್ತಕಗಳನ್ನು ನಾನು ಓದಿದ್ದೆ. ನನಗೆ ಗಾಂಧಿ ಅರ್ಥವಾಗಿದ್ದು ಚರಕ ಹಿಡಿದ ಮೇಲೆ ಎಂದರು. ಗಾಂಧಿ ನನಗೆ ಅದ್ಭುತವಾಗಿ ಕಂಡರು. ಆ ವ್ಯಕ್ತಿಯ ಚೈತನ್ಯ ಎಂಥದ್ದು ಎಂದು ತಿಳಿಯಿತು. ಗಾಂಧಿ ಹೊಸದಾಗಿ ನನ್ನೊಳಗೆ ಪ್ರಜ್ವಲಿಸಿದ. ನನ್ನೊಳಗಿನ ನಾನು ಅನಾವರಣಗೊಂಡು ನನ್ನೊಳಗೆ ನಾನು ಮಾತನಾಡತೊಡಗಿದೆ. ಅದೊಂದು ದಿವ್ಯ ಅನುಭವ. ನನ್ನೊಳಗಿನ ಒಬ್ಬನಿಗೆ ಸ್ನೇಹಿತ ಕಾಣಿಸುತ್ತಾ ಹೋದ, ಮಾತನಾಡುತ್ತಾ ಹೋದ" ಎಂದರು.

### ಚರಕಕ್ಕಿಲ್ಲ ಮರ್ಯಾದೆ

ಮೊಟ್ಟಮೊದಲು ಅವರು ಆಂಧ್ರದಿಂದ ಚರಕವನ್ನು ತರಿಸಿಕೊಂಡಾಗ ಅದನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಸುತ್ತಿ ಕಳಿಸಿದ್ದರು. ಅದನ್ನು ನೋಡಿ ಅವರಿಗೆ ಬಹಳ ದುಃಖವಾಯಿತು. ನಮ್ಮ ದೇಶದಲ್ಲಿ ಒಂದು ಲ್ಯಾಪ್ಟಾಪ್‌ಗೆ ಕೊಡುವ ಮರ್ಯಾದೆಯನ್ನು ಚರಕಕ್ಕೆ ಕೊಡುತ್ತಿಲ್ಲವೆಂದು ಮರುಗಿದರು. ನನ್ನ ದೇಶದ ಹೆಮ್ಮೆ ಇದು. ಜಗತ್ತಿನ ಅದೆಷ್ಟೋ ಸಮಸ್ಯೆಗಳ ನಿವಾರಕ ಇವನು, ತಲೆಯಮೇಲೆ ಹೊತ್ತು ನಡೆಯಬೇಕಾದ ಈ ಆಂತರ್ಯದ ಬೆಳಕನ್ನು ನಾವು ಇಷ್ಟು ಕಡೆಗಣಿಸಿದ್ದೇವಲ್ಲ!! ಇದಕ್ಕೊಂದು ಚೆಂದದ ಸ್ವರೂಪ ನೀಡಬೇಕೆಂದು ದೃಢ ನಿರ್ಧಾರ ಮಾಡಿದರು. ಚರಕದ ಸ್ವರೂಪವನ್ನು ಕೂಡ ಸರಳಗೊಳಿಸಿದರು. ಅದಕ್ಕೊಂದು ಸುಂದರವಾದ ಪೆಟ್ಟಿಗೆಯನ್ನು ತಯಾರಿಸಿ ಅದರ ಮೇಲೆ MD ಗುರುತನ್ನು ಹಾಕಿದರಂತೆ. ಅದನ್ನು ಎರಡು ಅರ್ಥವಾಗಿಯೂ ನೋಡಬಹುದು; ಒಂದು

'ಮೋಹನದಾಸ' ಎಂತಲೂ ಮತ್ತೊಂದು "Musical Drowning" ಎಂದು ಅರ್ಥೈಸಿದರು. ನೂಲುವುದೆಂದರೆ ಅದು ಕೆಲಸವಲ್ಲ. ಕರ್ಮವಲ್ಲ. ಸಂಗೀತದ ಆನಂದದಲ್ಲಿ ಮುಳುಗುವುದೇ ಆಗಿದೆ ಎಂದು ವಿವರಿಸಿದರು. ನಮ್ಮ ಬಟ್ಟೆಯನ್ನು ಯಾವಾಗ ನೇಯುತ್ತೇವೆಯೋ ಆಗ ನಾವು ಬೇಗನೆ ಬಿಸಾಡುವುದಿಲ್ಲ ಎಂದರು. ನನ್ನಲ್ಲಿ ನಾಲ್ಕು ಜೊತೆ ಬಟ್ಟೆಗಳಿವೆ. ನಾನು ಎಲ್ಲಿಗೆ ಹೋಗುವುದಾದರೂ ಬಹಳ ಸುಲಭವಾಗಿ ನನ್ನ wardrobe ಕೈಯಲ್ಲಿಡಿದು ಹೋಗುವೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

**ಚೈತನ್ಯ ದೀಪ**



ಮತ್ತೊಂದು ಚೈತನ್ಯ ದೀಪ ಮಮತಾ ರೈ.. ಅವರ ಮಾತು ಒಂದು ಸಣ್ಣ ಪ್ರಸಂಗದ ವಿವರಣೆಯೊಂದಿಗೆ ಆರಂಭವಾಯಿತು. ೨೦ ಮಧ್ಯವಯಸ್ಸಿನ ದಂಪತಿಗಳನ್ನು ಒಂದು ಕೋಣೆಯಲ್ಲಿ ಇರಿಸಿ ಅವರಿಗೆ ಚಿತ್ರ ಬಿಡಿಸಿ ಬಣ್ಣ ಹಚ್ಚುವಂತೆ ಹೇಳಿ ಪೆನ್ಸಿಲ್ ಹಾಗೂ crayons ನೀಡುತ್ತಾರೆ. ಆಕಸ್ಮಿಕವಾಗಿ ಒದಗಿಬಂದ ಇಂತಹ ವಿಶೇಷ ಟಾಸ್ಕ್ ಬಗ್ಗೆ ದಂಪತಿಗಳೆಲ್ಲರೂ ಬಹಳ ಪುಳಕಗೊಂಡು ಚಂದಚಂದದ ಚಿತ್ರ ಬಿಡಿಸಿ ಬಣ್ಣ ಬಣ್ಣದ crayonಗಳಿಂದ ಬಣ್ಣ ತುಂಬಿಸಿ ತೋರಿಸಿ ಹೆಮ್ಮೆಪಡುತ್ತಾರೆ. ಈಗ ಎರಡನೇ ಗುಂಪು ಆ ದಂಪತಿಗಳ ಮಕ್ಕಳದ್ದು. ಅವರಿಗೂ ಚಿತ್ರ ಬಿಡಿಸಿ ಅವರ ತಂದೆ ತಾಯಿಗಳು ಬಣ್ಣ ಹಚ್ಚಿ ಉಳಿಸಿದ crayons ನೀಡಲಾಗುತ್ತದೆ. ಎರಡು ಗುಂಪುಗಳನ್ನು ಒಟ್ಟಿಗೆ ಕೂರಿಸಿ ತಂದೆ–ತಾಯಿ ಹಾಗೂ ಮಕ್ಕಳು ಬಿಡಿಸಿದ ಚಿತ್ರಗಳನ್ನು ಅವರ ಮುಂದೆ ಪ್ರದರ್ಶಿಸಲಾಗುತ್ತದೆ. ಮಕ್ಕಳು ಬಿಡಿಸಿದ ಚಿತ್ರಗಳನ್ನು ಕಂಡು ತಂದೆ ತಾಯಿಯ ಕಣ್ಣಲ್ಲಿ ಕಣ್ಣೀರು ಸುರಿಯುತ್ತದೆ. ಏಕೆಂದರೆ ಮಕ್ಕಳ ಚಿತ್ರದಲ್ಲಿ ಇದ್ದದ್ದು ಕರಿಮರ, ಕರಿಯ ನದಿ, ಕರಿಯ ಸೂರ್ಯ, ಕರಿಯ ಮೋಡ, ಕರಿಗುಡ್ಡ ಬೆಟ್ಟಗಳು... ಇದಕ್ಕೆ ಕಾರಣ ಆ ಮಕ್ಕಳ ಪೋಷಕರು ಬಣ್ಣಬಣ್ಣದ crayonsಗಳನ್ನು ಖಾಲಿ ಮಾಡಿ ಕೇವಲ ಕಪ್ಪು ಬಣ್ಣಗಳನ್ನು ಮಾತ್ರ ಉಳಿಸಿರುತ್ತಾರೆ. ಕೇಳಲು ಈ ಕಥೆ ರೋಮಾಂಚಕ ಆಗಿದ್ದರೂ ಇಂತಹ ಕಥೆಗಳು ಭವಿಷ್ಯದ ಅವನತಿ ಸಾರುತ್ತಿರುವ ಭಗವದ್ಗೀತೆ ಎಂದರೆ ತಪ್ಪಾಗಲಾರದು.

**ಗದ್ಗದಿತರಾದರು**

ಈ ಕಥೆ ಹೇಳುವಾಗ ಮಮತಾ ಭಾವುಕರಾಗಿ ಗದ್ಗದಿತರಾದರು. ಜಗತ್ತಿನ ಎಲ್ಲಾ ಅವಘಡಗಳಿಗೆ ಸರಳ ಬದುಕು ಒಂದೇ ಪರಿಹಾರ. ಅದೊಂದೇ ನಮಗಿರುವ ದಾರಿ ಎಂದು ಹೇಳುತ್ತಾ ಅವನತಿಯ ಅಂಚಿನಲ್ಲಿದ್ದ ಉಡುಪಿ ಸೀರೆಗೆ ಇಂದು ವಿದೇಶಗಳಿಂದ ಬೇಡಿಕೆ ಇದೆ. ಇದಕ್ಕೆ ಕಾರಣ ಅದನ್ನು ತಯಾರಿಸುವ ವಿಶೇಷ ವಿಧಾನ ಮತ್ತು ಕೊಡುವ ನೈಸರ್ಗಿಕ ಬಣ್ಣ. ನಾಲ್ಕು ಗೋಡೆಯೊಳಗಿದ್ದ ನೇಕಾರನನ್ನು, ಆ ಕೆಲಸದ ಇತಿಹಾಸವನ್ನು, ಅದರಿಂದಾಗುವ ಪರಿಸರ ಸಂರಕ್ಷಣೆಯ ವಿಷಯವೆಲ್ಲವನ್ನೂ ಮಮತಾರವರು ಫೇಸ್ಬುಕ್ಕಲ್ಲಿ ಅನಾವರಣಗೊಳಿಸಿದರು.. ಅಂದಿಂದ ಹುಟ್ಟಿಕೊಂಡರು ಉಡುಪಿ ಸೀರೆಗೆ ಅಭಿಮಾನಿಗಳು.. ವೃದ್ಧರ ವೃತ್ತಿಯಾಗಿದ್ದ ನೇಯ್ಗೆ ಇಂದು ಯುವಕರ ವೃತ್ತಿಯಾಯಿತು.. ಇದೊಂದು ಟ್ರೆಂಡ್ ಸೃಷ್ಟಿ ಆಯಿತು... ಈ ಎಲ್ಲದರ ಹಿಂದಿನ ಮಮತಾರ ಪರಿಶ್ರಮ, ಛಲ, ಸಹನೆ ಅನನ್ಯವಾದದ್ದು.. ಸ್ವದೇಶಿ, ಸ್ವದೇಶಿ ಎಂದು ವೇದಿಕೆ ಮೇಲೆ ಗಟ್ಟಿ, ಬಿಟ್ಟಿ ಭಾಷಣ ಬಿಗಿದು ವಿದೇಶಿ ವಸ್ತುಗಳಿಗೆ addict ಆಗಿರುವವರಿಗೆ ಮಮತಾ ಮೇಡಂ ಪಾಠ ಆಗುತ್ತಾರೆ. ಅವರು ಮಾತನಾಡುತ್ತಿರುವಾಗಲೇ ಅತ್ತ ಕಡೆಯಿಂದ ಒಂದು ಪ್ರಶ್ನೆ "ನಮಗೆ ಬೇಕಾದ ಆಕರ್ಷಕ ಬಣ್ಣ ನಿಮ್ಮ ಸೀರೆಗಳಲ್ಲಿ ಸಿಗುವುದಿಲ್ಲವಲ್ಲ?" ಎಂದು. ಪ್ರಶ್ನೆಗೆ ಉತ್ತರಿಸಿದ ಮಮತಾರವರು "ಆಕರ್ಷಣೆ, ಸೌಂದರ್ಯ ಎಲ್ಲ ಮನಸ್ಸಿನ ಸ್ಥಿತಿ ಅಷ್ಟೇ, ಎಲ್ಲ ಬಣ್ಣಗಳಲ್ಲಿರುವ ದೇಹ ನಮ್ಮದೇ. ಕ್ಷಣಮಾತ್ರದ ಸೌಂದರ್ಯ, ಆಕರ್ಷಣೆಗೆ ಮುಂದಿನ ಜನಾಂಗಕ್ಕೆ ಬಣ್ಣಗಳೇ ಇಲ್ಲದಂತೆ ಮಾಡಿ ಹೋಗುವುದು ಎಷ್ಟು ಸರಿ? ದೇಹ ಸೌಂದರ್ಯಕ್ಕಿಂತ ಬದುಕಿನ ಸೌಂದರ್ಯ ಮುಖ್ಯ. ನಾವು ಬದುಕುವ ರೀತಿಯಿಂದ ನಾವು ಮತ್ತಷ್ಟು ಸುಂದರವಾಗಿ ಕಾಣುತ್ತೇವೆ ಎಂದ ಮಮತಾ ಅವರು ನಿಜಕ್ಕೂ ಆದರ್ಶಪ್ರಾಯರು ಮತ್ತು ಹಾಗೆಯೇ ಬದುಕುತ್ತಿದ್ದಾರೆ ಕೂಡ. "ನಾವು ಏನೆಲ್ಲಾ ಧರಿಸಿ ಅಂತಸ್ತು ತೋರಲು ಪ್ರಯತ್ನ ಪಡುತ್ತಿದ್ದೇವೆಯೋ ಅವು ಯಾವ್ಯಾವು ಬೇಡವೆಂದು ನಿರ್ಧರಿಸಿ ಅವರು ನಮ್ಮೆಲ್ಲರಿಗಿಂತ ಶ್ರೀಮಂತರಾಗಿ ಕಾಣುತ್ತಾರೆ.

**ಬೆರಗಾಗಿಸಿದ ಶೀರ್ಷಿಕೆ-ಮಾತಿನ ಮೊಂಡು ಸೂಜಿ**

ಕೊನೆಯ ಭಾಷಣಕಾರರಾಗಿ ಬಂದ ಮಲ್ಲಿಕಾರ್ಜುನ ಹೊಸಪಾಳ್ಯ ಅವರು "ಮಾನವತೆಯ ಬೆಳೆಗಾಗಿ ಬೇಸಾಯ" ಶೀರ್ಷಿಕೆ ಇಟ್ಟು ಮಾತು ಆರಂಭಿಸಿದರು. ಆ ಶೀರ್ಷಿಕೆಯೇ ನಮ್ಮನ್ನು ಬೆರಗಾಗಿಸಿತು. ಈ ಮೊದಲ ಗೋಷ್ಠಿಯೊಂದರ ಚರ್ಚೆಯಲ್ಲಿ ಭಾಗವಹಿಸಿ ತಾವು ಬೋರ್‌ವೆಲ್ ಕೊರೆಸದೆ ಮನೆ ಕಟ್ಟಿಸಿದ ನವೀನ ರೀತಿಯ ಬಗ್ಗೆ ಮಾತಾಡಿದ್ದ ಹಾಸನದಿಂದ ಬಂದಿದ್ದ ಶಿಬಿರಾರ್ಥಿ ರೋಹಿತ್ ಅವರ ಮಾತಿನ ದಾರಕ್ಕೆ ಮಣಿ ಪೋಣಿಸಿದ ಮಲ್ಲಿಕಾರ್ಜುನ ಅವರು, "ರೋಹಿತ್ ಅವರು ೩೦'X೫೦' ಅಳತೆಯ ಮನೆಗಾಗಿ ಕೊಳವೆಬಾವಿ ತೆಗೆದಿಲ್ಲ ನಾನು ಐದಾರು ಎಕರೆ ಭೂಮಿಯಲ್ಲಿ ಬೆಳೆಯನ್ನು ಬೆಳೆಯುವವನಾಗಿಯೂ ಕೊಳವೆ ಬಾವಿಯನ್ನು ತೆಗೆದಿಲ್ಲ" ಎಂದು ನಮ್ಮನ್ನು ಅಚ್ಚರಿಗೊಳಪಡಿಸಿದರು. ಬಳ್ಳಾರಿ ಜಿಲ್ಲೆಯ ಹೊಸಪೇಟೆಯಂತಹ ಬಯಲುಸೀಮೆಯಲ್ಲಿ ಕೊಳವೆಬಾವಿ ಇಲ್ಲದೆ ಅಂದದ ಕೃಷಿ ಮಾಡುತ್ತ ಚಂದವಾಗಿ ಬದುಕುತ್ತಿರುವ ಅವರ ವಿಶ್ವಾಸ ನೋಡಿ ಆನಂದವಾಯಿತು.



ನಾವು ಒಂದನ್ನು ಅರ್ಥೈಸಿಕೊಳ್ಳಬೇಕಾಗಿದೆ. ಕೊಳವೆಬಾವಿ ಇಲ್ಲದ ಕಾಲದಲ್ಲಿ ಬೆಳೆಗಳಿಗೆ ನೀರು ಕೊಡುತ್ತಿದ್ದವರು ಯಾರು? ಈಗಲೂ ಅವರು ಬದುಕಿದ್ದಾರೆ. ಆದರೆ ಅವರನ್ನು ಹುಡುಕುವುದನ್ನು ಬಿಟ್ಟು, ಅವರನ್ನು ನಮ್ಮ ಮನದ ಹೊಲಗಳಿಗೆ ಕರೆತರುವ ವ್ಯವಧಾನವಿಲ್ಲದೆ ಬೇಗ ಬೆಳೆಯುವ ಬೇಗ ಮಾರುವ ಬೇಗ ಸಿರಿವಂತರಾಗುವ ಧಾವಂತಕ್ಕೆ ಬಿದ್ದಿದ್ದೇವೆ ಎಂದರು. ಏಕೆಂದರೆ ನಾವು ವಿಶಾಲ ಹೃದಯಿಗಳು.. ಲಾರಿಯವನನ್ನು ಸಾಕಬೇಕು, ಪೈಪು ಕೇಬಲ್ ಅಂಗಡಿಯವರನ್ನು ಮೋಟಾರು ಪಂಪು ರಿಪೇರಿ ಮಾಡುವವರನ್ನು ಸಾಕಬೇಕು, ಬ್ಯಾಂಕ್‌ನವರನ್ನು ಸಾಕಬೇಕು, ವಿದ್ಯುತ್ ನೀಡುವವರನ್ನು ಸಾಕಬೇಕು. ಈ ಎಲ್ಲಾ ಸಾಕುಪ್ರಾಣಿಗಳ ಸಲುವಾಗಿ ನಾವು ಕೊಳವೆಬಾವಿ ತೆಗೆಸಲೇಬೇಕು ಎಂದು ಮಾತಿನಮೊಂಡು ಸೂಜಿಯಲ್ಲಿ ಮೆದುಳಿಗೆ ಚುಚ್ಚಿದರು ಮಲ್ಲಿಕಾರ್ಜುನ್.

**ಸಿರಿವಂತರ ಆರ್ಭಟ**

ಸಿರಿವಂತರ ಆರ್ಭಟದ ಪರಿಣಾಮ ರೈತರ ಬದುಕಿನ ಮೇಲೆ ಅತಿಯಾದ ಪರಿಣಾಮ ಬೀರಿದೆ. ಅತಿಯಾದ ಕೊಳ್ಳುವಿಕೆಯಿಂದ ಪರಿಸರದಲ್ಲಿ ದಿನೇದಿನೇ ಏರುತ್ತಿರುವ ಕಾರ್ಬನ್ ಭೂತ ಭೂ ತಾಯಿಯ ಮೈಗೆ ಬರೆ ಎಳೆಯುತ್ತಿದೆ. ಇನ್ನು ಭೂ ತಾಯಿಯ ಮೈಯಲ್ಲಿ ಬರೆಗೆ ಜಾಗವಿಲ್ಲದೆ ಜೀವಸಂಕುಲದ ಮೇಲೆ ಬೀಳುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಬೀಜ ಗೊಬ್ಬರ ನೀರಿಗಾಗಿ ವಾರ್ಷಿಕ ಸರಾಸರಿ ಒಂದು ಲಕ್ಷಕ್ಕೂ ಹೆಚ್ಚು ಖರ್ಚು ಮಾಡುತ್ತಾನೆ ರೈತ. ಯಾವುದನ್ನು ಉಚಿತವಾಗಿ ಪಡೆದುಕೊಂಡು ಅದೇ ಒಂದು ಲಕ್ಷದಲ್ಲಿ ಸಮೃದ್ಧ ಜೀವನವನ್ನು ನಡೆಸಬಹುದಿತ್ತೋ ಅದನ್ನು ಸಾಕುಪ್ರಾಣಿಗಳ ಬಾಯಿಗೆ ಹಾಕಿ ಸಾಲಗಾರನಾಗುತ್ತಿದ್ದಾನೆ ಎಂದರು. ಹಿಂದೆ ಮನೆಯ ಜಂತಿಗಳು ಬೀಜದ ಬ್ಯಾಂಕುಗಳಾಗಿದ್ದವು. ಮನೆಯ ಅಜ್ಜಿ ಆ ಬ್ಯಾಂಕ್‌ನ ಮ್ಯಾನೇಜರ್ ಆಗಿದ್ದರು. ಇಂದಿನ ಶಿಕ್ಷಣದಲ್ಲಿ ನೀರನ್ನು ದುಡ್ಡಿಲ್ಲದೆ ಬಳಸುವ ಬುದ್ಧಿವಂತಿಕೆ ಕಲಿಸುವುದಿಲ್ಲ, ಬೀಜ ಗೊಬ್ಬರ ಶೂನ್ಯ ಬಂಡವಾಳದಲ್ಲಿ ಉತ್ಪತ್ತಿಯಾಗುವಂಥದ್ದು ಎಂದು ಹೇಳಿ ಕೊಡುವುದಿಲ್ಲ ಆದರೆ ಭಾರತ ಕೃಷಿ ಪ್ರಧಾನ ರಾಷ್ಟ್ರ!!! ಹಳ್ಳಿಗಳ ದೇಶ!! ಎಲ್ಲಾ ಮನುಷ್ಯರ ಬದುಕಿನ ಮೂಲ ಆಹಾರ. ಆಹಾರದ ಮೂಲ ಕೃಷಿ ಆಗಿರುವಾಗ ಕೃಷಿಯ ಜೀವ ನೀರು ಬೀಜ–ಗೊಬ್ಬರ... ಹಾಗಿರುವಾಗ ನಾವು ಜೀವನ ಶಿಕ್ಷಣವನ್ನು ನೀಡದೆ ಉಳಿದೆಲ್ಲವನ್ನೂ ನೀಡುತ್ತಿದ್ದೇವೆ ಎಂದಾಗ ಹೌದಲ್ಲವೇ ಅನ್ನಿಸದಿರದು.

ಹೀಗೆ ಎಷ್ಟು ಬರೆದರೂ ಪುಟಗಳು ಸಾಲದು ಆದರೆ ಅಲ್ಲಿ ಪಡೆದ ಅನುಭೂತಿ ಅದೆಲ್ಲವನ್ನು ಪದಗಳಲ್ಲಿ ಬಂಧಿಸಿಡುವುದು ಕಷ್ಟ. ಹಾಗೆಯೇ ಅಲ್ಲೇ ಕಂಡದ್ದೆಲ್ಲವನ್ನೂ ಜೀವನದಲ್ಲಿ ಅಳವಡಿಸಿಕೊಂಡು ನಾನು ಇಂದು ಬದಲಾದೆ ಎಂಬ ಭ್ರಮೆಯೂ ಇಲ್ಲ. ಆದರೆ ನಮ್ಮ ಮುಂದಿನ ಭವಿಷ್ಯಕ್ಕಾಗಿ ಏನೆಲ್ಲ ಮಾಡಬಹುದಿತ್ತು ಅದನ್ನು ನಾವು ಮಾಡಲಿಲ್ಲವಲ್ಲ ಎಂಬ ಪರಿತಾಪವಾಗಲಿ ಪಶ್ಚಾತ್ತಾಪವಾಗಲಿ ಆ ಜೀವಗಳ ಕಂಗಳುಗಳಲ್ಲಿ ನನಗೆ ಕಾಣಲಿಲ್ಲ. ಕೊನೆಯದಾಗಿ ಅವರ ಮಾತುಗಳಲ್ಲಿ ಮಿಂಚಿಹೋದ ಕೆಲವು ನುಡಿಗಳನ್ನು ಹಂಚಿಕೊಳ್ಳುವ ಆಶಯ..

**ಈ ಶಿಬಿರದ ಸಾರ**



ಸರಳವಾಗಿ ಬದುಕುವುದೆಂದರೆ ಅದೊಂದು ಸಂಕಷ್ಟದ ಬದುಕು ಸಂಕೀರ್ಣದ ಬದುಕು ಎಂದೇ ಎಲ್ಲರ ಭಾವನೆ. ಆಡಂಬರದ ಬದುಕಿಗೆ ಅವಿಭಾಜ್ಯವೆಂಬಂತೆ ಹೊಂದಿ ಕೊಂಡಿರುವವರೆಗೆ ಸರಳ ಬದುಕು ಬಹಳ ದುರ್ಗಮ ದಾರಿಯಾಗಿ ಕಾಣುತ್ತದೆ. ಆದರೆ ಸರಳವಾಗಿ ಬದುಕುವುದು ಸೃಜನಾತ್ಮಕವಾದ ಬದುಕು, ಸಂತೋಷದ ಬದುಕು, ಬಹಳ ಸುಖಕರವಾದ ಬದುಕು ಹಾಗೂ ಸಾರ್ಥಕವಾದ ಬದುಕು. ಆಡಂಬರದ ಬದುಕಿಗೆ ಹೆಚ್ಚು ದುಡಿಯುವ ಅಗತ್ಯವಿದೆ. ಸರಳ ಬದುಕಿಗೆ ಹೆಚ್ಚು ದುಡಿಯುವ, ಹೆಚ್ಚು ಸಂಪಾದಿಸುವ ಅಗತ್ಯ ಇರುವುದಿಲ್ಲ. ಮಾನಸಿಕ ಶಾಂತಿ ಸರಳ ಬದುಕಿನಿಂದ ಮಾತ್ರ ಸಾಧ್ಯ. ಹೆಚ್ಚು ದುಡಿಯಬೇಕೆನ್ನುವ ಹೆಚ್ಚು ಸಂಪಾದಿಸುವ ಒತ್ತಡವಿಲ್ಲದ ಸುಖಕರವಾದ ಬದುಕು ಸರಳ ಬದುಕಿನಲ್ಲಿದೆ. ಸರಳ ಬದುಕು ಪ್ರಪಂಚವನ್ನು ತನ್ನತ್ತ ಆಕರ್ಷಿಸುವಂತೆ ಆಗಲಿ, ಸರ್ವರಿಗೂ ಸರಳ ಬದುಕಿನ ಸವಿ ಅರಿವಾಗಲಿ, ಭೂಮಿ ಉಳಿಯಲಿ ಎಂಬುದೇ ಎಲ್ಲರ ಮಾತಿನ ಆಶಯ ಆಗಿತ್ತು..



**(ಹಾಸನದ ನಿವಾಸಿಯಾದ ಲೇಖಕಿ ಹಳೇಬೀಡಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಶಿಕ್ಷಕಿಯಾಗಿದ್ದಾರೆ)**


ಪುಣ್ಯ ಸ್ಮರಣೆ

ಡಿಸೆಂಬರ್, ೬ : ಅಂಬೇಡ್ಕರರ ಪರಿನಿರ್ವಾಣ ದಿನ

# ಅಂಬೇಡ್ಕರ್ ಅವರ ಐತಿಹಾಸಿಕ ಮತಾಂತರ; ಒಂದು ಸಮಕಾಲೀನ ನೋಟ

–ರಾಜೇಂದ್ರ ಚೆನ್ನಿ

ತಾವು ಹಿಂದೂವಾಗಿ ಹುಟ್ಟಿದ್ದರೂ ಹಿಂದೂವಾಗಿ ಸಾಯುವುದಿಲ್ಲ ಎಂದು ೧೯೩೫ರಲ್ಲಿ ಘೋಷಿಸಿದ್ದ ಅಂಬೇಡ್ಕರ್ ಕೊನೆಗೆ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮಕ್ಕೆ ಮಾತಾಂತರವಾಗಲು ಇಪ್ಪತ್ತು ವರ್ಷಗಳ ಕಾಲ ಕಾಯಬೇಕಾಯಿತು. ಅದೂ ಅವರ ಪರಿನಿರ್ವಾಣದ ಎರಡು ತಿಂಗಳ ಮುನ್ನವಷ್ಟೇ ಅದು ಸಾಧ್ಯವಾಯಿತು. ಇದು ಅವರ ಮತಾಂತರದ ನಿರ್ಧಾರದ ಹಿಂದಿನ ಅನೇಕ ಹುಡುಕಾಟ-ತಾಕಲಾಟಗಳ ಕಥೆಯನ್ನು ಹೇಳುವಂತಿದೆ. ಈ ದೃಷ್ಟಿಯಿಂದ ಅಂಬೇಡ್ಕರರ ಮತಾಂತರವನ್ನು ಇಂದು ಒಮ್ಮೆ ಹಿನ್ನೋಡಿದಾಗ ಏನೆಲ್ಲ ಕಾಣುತ್ತದೆ ಎಂಬುದರ ವಿಶ್ಲೇಷಣೆಯೊಂದನ್ನು ಅವರ ಪರಿನಿರ್ವಾಣ ದಿನಾಚರಣೆಯ ಸಂದರ್ಭದ ಈ ಲೇಖನದಲ್ಲಿ ಪ್ರಯತ್ನಿಸಲಾಗಿದೆ.-ಸಂ,



೧೯೫೬ರ ಅಕ್ಟೋಬರ್ ೧೪ರಂದು ನಾಗಪುರದಲ್ಲಿ ನಡೆದ ಅಂಬೇಡ್ಕರ್ ಅವರ ಮತಾಂತರ ಮಾತ್ರವಲ್ಲ ಇನ್ನೂ ಅನೇಕ ತೀರ್ಮಾನಗಳು ಹಾಗೂ ಕ್ರಿಯೆಗಳು 'ಸಾಂದರ್ಭಿಕ'ವಾಗಿದ್ದು ಅವುಗಳ ಪರಸ್ಪರ ಸಂಬಂಧ ಅಥವಾ ಸಾಂಗತ್ಯ ಹೊಂದಿರಲಿಲ್ಲವೆಂದು ಕೆಲವು ವಿದ್ವಾಂಸರು ವ್ಯಾಖ್ಯಾನಿಸಿದ್ದಾರೆ. ಇನ್ನು ಕೆಲವರು ಒಂದು ಹೆಜ್ಜೆ ಮುಂದುಹೋಗಿ ಆಯಾ ಸಂದರ್ಭದ ಪ್ರಯೋಜನವನ್ನು ಪಡೆಯಲು ಅಂಬೇಡ್ಕರ್ ಹೀಗೆ ಮಾಡಿದರು ಎಂದು ವಿಮರ್ಶೆ ಮಾಡಿದ್ದಾರೆ. ವಾಸ್ತವವೆಂದರೆ ಅಂಬೇಡ್ಕರ್ ತಮ್ಮ ವೈಚಾರಿಕ ಹಾಗೂ ರಾಜಕೀಯ ಜೀವನದಲ್ಲಿ ಇನ್ನಾರೂ ಪ್ರಾಯಶಃ ಎದುರಿಸದಂಥ ಸಂಕೀರ್ಣವಾದ ಸವಾಲುಗಳನ್ನು ಎದುರಿಸುತ್ತಾ ವಿಭಿನ್ನವಾದ ಕ್ರಿಯೆಗಳನ್ನು ಆಯ್ಕೆಮಾಡಿಕೊಳ್ಳಬೇಕಾದರೂ ಅವರ ಒಟ್ಟು ಕ್ರಿಯೆಗಳ ಹಿಂದೆ ಅರ್ಥಪೂರ್ಣವಾದ ತರ್ಕವೊಂದಿತ್ತು. ಹೀಗಾಗಿ ಮತಾಂತರದ ನಿರ್ಧಾರವು ಹಠಾತ್ತನೆ ಮಾಡಿದ ಅಥವಾ ಅವಕಾಶವಾದಿಯಾದ ನಿರ್ಧಾರವಾಗಿರಲಿಲ್ಲ. ಅದಕ್ಕೆ ಸುದೀರ್ಘವಾದ ಹಿನ್ನೆಲೆಯಿತ್ತು.

## ಬ್ರಾಹ್ಮಣ್ಯ ವಿರೋಧಿ ಸಾಮಾಜಿಕ ಪ್ರಜ್ಞೆಯ ಉದಯ

೧೯ನೇ ಶತಮಾನದಲ್ಲಿ ಜೋತಿಬಾ ಫುಲೆ ರೂಪಿಸಿದ ಬ್ರಾಹ್ಮಣಶಾಹಿ ವಿರೋಧಿ ಚಳುವಳಿಯು ತನ್ನದೆ ಆದ ವೈಚಾರಿಕತೆಯನ್ನು ರೂಪಿಸಿಕೊಂಡಿತು. ಇದು ಶ್ರೇಣೀಕೃತವಾದ ವರ್ಣವ್ಯವಸ್ಥೆಯನ್ನು ಮತ್ತು ಬ್ರಾಹ್ಮಣ್ಯದ ಯಾಜಮಾನ್ಯವನ್ನು ತೀವ್ರವಾಗಿ ವಿರೋಧಿಸಿತು. ಅಲ್ಲದೆ ಆ ಕಾಲದಲ್ಲಿ ಪ್ರಚಲಿತವಾಗಿದ್ದ ಆರ್ಯ ಜನಾಂಗವಾದವನ್ನು ತಲೆಕೆಳಗೆ ಮಾಡಿ ಆರ್ಯರು ಹೊರಗಿನಿಂದ ಬಂದ ದಾಳಿಕೋರರು ಮತ್ತು ಈ ನೆಲದ ಮೂಲ ನಿವಾಸಿಗಳಾದ ಕುಣಬಿ (ರೈತಾಪಿ) ಶೂದ್ರ ಜನಾಂಗವನ್ನು ಸೋಲಿಸಿ ಗುಲಾಮರನ್ನಾಗಿಸಿತು ಎನ್ನುವ ಚರಿತ್ರೆ ಕಥನವನ್ನೂ ರೂಪಿಸಿತು. ಫುಲೆಯವರು ಶೂದ್ರ–ಅತಿಶೂದ್ರ ಪರಿಕಲ್ಪನೆಗಳ ಮೂಲಕ ಶೂದ್ರರು ಹಾಗೂ ದಲಿತರು ಬ್ರಾಹ್ಮಣ್ಯದ ಬಲಿಪಶುಗಳು ಎನ್ನುವ ವಾದವನ್ನು ಮುನ್ನೆಲೆಗೆ ತಂದರು. ಜೊತೆಗೆ ವೇದ ಪುರಾಣಗಳನ್ನು ಬ್ರಾಹ್ಮಣ್ಯದ ಪಠ್ಯಗಳೆಂದು ವ್ಯಾಖ್ಯಾನಿಸಿದರು. ಹೀಗಾಗಿ ಅಂಬೇಡ್ಕರ್ ಅವರ ರಾಜಕೀಯ ಪ್ರವೇಶದ ಮೊದಲೇ ಮಹಾರಾಷ್ಟ್ರದಲ್ಲಿ ಬ್ರಾಹ್ಮಣ್ಯ ವಿರೋಧಿ ಸಾಮಾಜಿಕ ಪ್ರಜ್ಞೆಯೊಂದು ಗಟ್ಟಿಗೊಂಡಿದ್ದು ವಸಾಹತುಶಾಹಿಯಿಂದಾಗಿ ಶಿಕ್ಷಣ ಹಾಗೂ ಉದ್ಯೋಗವನ್ನು ಪಡೆಯಲು ಆರಂಭಿಸಿದ್ದ ಮಹಾರ್ ಜನಾಂಗವು ನಗರೀಕರಣದ ಬೆಂಬಲದೊಂದಿಗೆ ಸಾವಿರಾರು ವರ್ಷಗಳ ದಾಸ್ಯದಿಂದ ನಿಧಾನವಾಗಿ ಬಿಡುಗಡೆ ಹೊಂದಿ ಹೊಸ ಪ್ರಜ್ಞೆಯನ್ನು ಪಡೆದುಕೊಳ್ಳತೊಡಗಿತ್ತು. ಹಿಂದೂ ಧರ್ಮವು ಮತ್ತು ಅದನ್ನು ಪಾಲಿಸುವ ಸಾಮಾಜಿಕ ಪದ್ಧತಿಗಳು ಅಸಮಾನತೆಯನ್ನು ಹೇರಿ ದಾಸ್ಯ ಹಾಗೂ ಅವಮಾನಗಳನ್ನು ತಮ್ಮ ಮೇಲೆ ಒತ್ತಾಯಿಸಿವೆ ಎನ್ನುವ ಭಾವನೆಯು ತೀವ್ರಗೊಂಡಿತು.

ಅಂಬೇಡ್ಕರ್ ಹಾಗೂ ಅಂದಿನ ದಲಿತ ಚಿಂತಕರ ಎದುರಿಗಿದ್ದ ಸಮಸ್ಯೆಯೆಂದರೆ ಸ್ಥಳೀಯ ಆಡಳಿತದಲ್ಲಿ ಅಲ್ಪಮಟ್ಟದ ಅಧಿಕಾರವನ್ನು ಕೊಟ್ಟಿದ್ದ ಬ್ರಿಟಿಷ್ ವಸಾಹತುಶಾಹಿ ಸರಕಾರವು ಕ್ರಮೇಣವಾಗಿ ಹೆಚ್ಚಿನ ಅಥವಾ ಪೂರ್ಣ ಅಧಿಕಾರ ಹಸ್ತಾಂತರವನ್ನು ಮಾಡುವುದಾದರೆ ಅಧಿಕಾರಕ್ಕೆ ಬರುವುದು ಬ್ರಾಹ್ಮಣ್ಯ ಕೇಂದ್ರಿತ ಹಿಂದೂ ಆಳುವ ವರ್ಗವೆ(?). ಹೀಗಾದರೆ ಇನ್ನೂ ಕ್ರೂರವಾದ ಶೋಷಣೆ ಹಾಗೂ ಅಪಮಾನವು ದಲಿತರಿಗೆ ತಪ್ಪಿದ್ದಲ್ಲ. ಆದ್ದರಿಂದ ಬ್ರಿಟಿಷ್ ಅಧಿಪತ್ಯವು ತನ್ನದೇ ಆದ ಕಾರಣಗಳಿಗಾಗಿ ಮುಸ್ಲಿಮ್ ಸಮುದಾಯಕ್ಕೆ ಪ್ರತ್ಯೇಕ ರಾಜಕೀಯ ಅಧಿಕಾರ (ಅಂದರೆ ಪ್ರತ್ಯೇಕ ಮೀಸಲು ಮತಕ್ಷೇತ್ರ ಹಾಗೂ ಹೆಚ್ಚಿನ ಸಂಖ್ಯೆಯ ಪ್ರಾತಿನಿಧ್ಯ) ಕೊಡುತ್ತಿರುವಾಗ ದಲಿತ ವರ್ಗಗಳಿಗೂ ಈ ಸೌಲಭ್ಯವನ್ನು ದೊರಕಿಸಿಕೊಳ್ಳುವುದು ಬಹುಮುಖ್ಯ ರಾಜಕೀಯ ಕ್ರಿಯೆಯಾಗಿತ್ತು. ಇಂಥ ಬೇಡಿಕೆಗೆ ಸಮರ್ಥನೆಯೆಂದರೆ ದಲಿತರು (ಅಂದಿನ Depressed Class) ಹಿಂದೂ ಸಮಾಜದ ಭಾಗವಾಗಿರಲಿಲ್ಲ. ಅವರನ್ನು ಅಸಮಾನತೆ, ಅಸ್ಪೃಶ್ಯತೆಗಳ ಮೂಲಕ ಪ್ರತ್ಯೇಕವಾಗಿಯೇ ಇರಿಸಿದ್ದರಿಂದ ಅವರನ್ನು ಹಿಂದೂ ವರ್ಗವು ಪ್ರತಿನಿಧಿಸುವುದು ಅಸಾಧ್ಯವಾಗಿತ್ತು. ಹೀಗಾಗಿ ದುಂಡು ಮೇಜಿನ ಪರಿಷತ್ತುಗಳು ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಅಂಬೇಡ್ಕರ್ ಅವರು ಪ್ರತ್ಯೇಕ ಮತಕ್ಷೇತ್ರ, ಎಲ್ಲಾ ವಯಸ್ಕರಿಗೆ ಮತದಾನದ ಹಕ್ಕು, ದಲಿತರಿಗೆ ಹೆಚ್ಚಿನ ಸಂಖ್ಯೆಯ ಪ್ರಾತಿನಿಧ್ಯ ಇವುಗಳನ್ನು ತಮ್ಮ ಮುಖ್ಯ ರಾಜಕೀಯ ಕ್ರಿಯೆಯನ್ನಾಗಿಸಿಕೊಂಡಿದ್ದರು. ಇದರ ಹಿಂದೆ ಇದ್ದ ದಲಿತ ವರ್ಗಗಳ ಚಾರಿತ್ರಿಕ ನಂಬಿಕೆಯೆಂದರೆ ಬ್ರಿಟಿಷ್ ವಸಾಹತು ಆಡಳಿತವು ತಮಗೆ ಕೆಲವು ಅನುಕೂಲಗಳನ್ನು ತಂದುಕೊಟ್ಟಿದೆ ಮತ್ತು ಬ್ರಿಟಿಷರು ದಲಿತರಿಗೆ ಪ್ರಬಲವಾದ ರಾಜಕೀಯ ಪ್ರಾತಿನಿಧ್ಯ ಕೊಡದೆ ಹಿಂದೂಗಳಿಗೆ ಅಧಿಕಾರ ಹಸ್ತಾಂತರ ಮಾಡಿದರೆ ಅದು ಮಹಾ ದುರಂತವಾಗುತ್ತದೆ ಎನ್ನುವುದು.

## ಹಿಂದೂ ಸಮಾಜದ ಅಡಿಪಾಯವೇ ಅಸ್ಪೃಶ್ಯತೆಯಾಗಿದೆ.

ಸ್ವತಃ ಅಂಬೇಡ್ಕರ್ ಬ್ರಿಟಿಷ್ ಆಳ್ವಿಕೆಯನ್ನು ವಿರೋಧಿಸಿದ್ದು ಮಾತ್ರವಲ್ಲ ದಲಿತರಿಗೆ ಅಂತಿಮ ರಾಜಕೀಯ ಪರಿಹಾರವು ಸ್ವರಾಜ್ಯದಿಂದ ಮಾತ್ರ ಸಾಧ್ಯವೆಂದು ಖಚಿತವಾಗಿ ವಾದ ಮಂಡಿಸಿದ್ದರು. ಅಲ್ಲದೆ ತಮ್ಮ ರಾಜಕೀಯ ಜೀವನದ ಈ ಹಂತದಲ್ಲಿ ರಾಜಕೀಯ ಪ್ರಾತಿನಿಧ್ಯ ಹಾಗು ರಾಜಕೀಯ ಹಕ್ಕುಗಳು ಮತ್ತು ನಾಗರೀಕ ಹಕ್ಕುಗಳ ಮೂಲಕ ಸಮಾನತೆಗಳು ಅವರ ಪ್ರಧಾನ ಗುರಿಗಳಾಗಿದ್ದವು. ಈ ಹಂತದ ಅತ್ಯಂತ ಪ್ರಮುಖ ಕ್ರಿಯೆಯೆಂದರೆ ಮಹಾಡ್ ಸತ್ಯಾಗ್ರಹವಾಗಿತ್ತು. ಇದು ಆಧುನಿಕ ಭಾರತೀಯ ಇತಿಹಾಸದ ಪ್ರಮುಖ ಘಟನೆಯಾಗಿತ್ತು. ಅದರ ಸಂಕೀರ್ಣ ವಿವರಗಳಿಗೆ ಹೋಗದೆ, ಚಾವ್‌ದಾರ್ ಕೆರೆಯ ನೀರನ್ನು ಕುಡಿದಿದ್ದಕ್ಕಾಗಿ ದಲಿತರ ಮೇಲೆ ನಡೆದ ಹಲ್ಲೆ, ನಂತರ ಕಾನೂನನ್ನು ತಿರುಚಿ ಕೆರೆಯ ಬಳಕೆಯ ಮೇಲೆ ನಿಷೇಧ ಹೇರಿದ್ದು, 'ಮನುಸ್ಮೃತಿ'ಯನ್ನು ಸುಟ್ಟಿದ್ದು, ಪುಣೆ ಹಾಗೂ ನಾಸಿಕ್ ದೇವಾಲಯಗಳ ಪ್ರವೇಶಕ್ಕಾಗಿ ನಡೆದ ಸುದೀರ್ಘ ಹೋರಾಟ ಇವೆಲ್ಲವುಗಳ ಒಟ್ಟು ಪರಿಣಾಮವೆಂದರೆ ಕಾನೂನು, ನಾಗರೀಕ ಸಂಹಿತೆಗಳು ಇವೆಲ್ಲವನ್ನೂ ಧಿಕ್ಕರಿಸಿ ಹಿಂದೂ ಸಮಾಜವು ದಲಿತರ ಅಸಮಾನತೆಯ ವಿರುದ್ಧದ ಹೋರಾಟವನ್ನು ತಿರಸ್ಕರಿಸುತ್ತದೆ ಎನ್ನುವುದು ಅಂಬೇಡ್ಕರ್ ಅವರಿಗೆ ಮನವರಿಕೆಯಾಯಿತು. ದುಂಡು ಮೇಜಿನ ಪರಿಷತ್ತುಗಳ ನಂತರ ಬ್ರಿಟಿಷ್ ಸರಕಾರವು ದಲಿತರಿಗೆ ಪ್ರತ್ಯೇಕ ಮತಕ್ಷೇತ್ರ ನೀಡಲು ಒಪ್ಪಿದರೂ ಗಾಂಧೀಜಿ ಆಮರಣ ಉಪವಾಸ ಕೈಕೊಂಡು ಪೂನಾ ಒಪ್ಪಂದವಾಗಿದ್ದು ದಲಿತ ಹೋರಾಟಕ್ಕೆ ಬೇರೆ ತಿರುವನ್ನು ಕೊಟ್ಟಿತು. ಅಂಬೇಡ್ಕರ್ ಚಿಂತನೆಯ ಎರಡನೇ ಹಂತವನ್ನು 'ಜಾತಿ ವಿನಾಶ' ಕೃತಿ ಹಾಗೂ ಅದರ ಸಂದರ್ಭದ ವಿದ್ಯಮಾನಗಳ ಮೂಲಕ ನೋಡಬಹುದು. 'ಜಾತಿ ವಿನಾಶ' ಕೃತಿಯ ಬಹುಮುಖ್ಯ ವಾದವೆಂದರೆ ಹಿಂದೂ ಸಮಾಜದ ಕ್ರೂರ ಅಸಮಾನತೆಗೆ ಹಿಂದೂ ಧರ್ಮವೇ ಕಾರಣ, ಹಿಂದೂ ಧರ್ಮಶಾಸ್ತ್ರಗಳೇ ಕಾರಣ. ವರ್ಣ ಹಾಗೂ ಜಾತಿವ್ಯವಸ್ಥೆಗಳು ಹಿಂದೂ ಧರ್ಮದ ಅವಿನಾ ಭಾಗಗಳು ಹಾಗೂ ಹಿಂದೂ ಸಮಾಜದ ಅಡಿಪಾಯವೇ ಅಸ್ಪೃಶ್ಯತೆಯಾಗಿದೆ. ಹೀಗಾಗಿ ಧರ್ಮಶಾಸ್ತ್ರಗಳ ವಿನಾಶವಿಲ್ಲದೆ ಜಾತಿವಿನಾಶವು ಸಾಧ್ಯವೇ ಇಲ್ಲ.

ಈ ವಾದದ ಇನ್ನೊಂದು ಮಗ್ಗಲೆಂದರೆ ಹಿಂದೂ ಧರ್ಮದ ಚೌಕಟ್ಟಿನ ಒಳಗೆ ದಲಿತರಿಗೆ ಬಿಡುಗಡೆ ಸಾಧ್ಯವೇ ಇಲ್ಲ. ಆದ್ದರಿಂದ ಇನ್ನುಳಿದ ಪರಿಹಾರ ಮಾರ್ಗವೆಂದರೆ ಹಿಂದೂ ಧರ್ಮವನ್ನು ತ್ಯಜಿಸಿ ಮತಾಂತರ ಹೊಂದುವುದು. 'ನಾನು ಹಿಂದೂ ಆಗಿ ಹುಟ್ಟಿದ್ದೇನೆ ಆದರೆ ಹಿಂದೂ ಆಗಿ ಸಾಯುವುದಿಲ್ಲ' ಎಂದು ಇಂದಿನ ಮಹಾರಾಷ್ಟ್ರದ (ಅಂದಿನ ಬಾಂಬೆ ಪ್ರಾಂತ್ಯ) ಯವೋಲಾ ಎಂಬಲ್ಲಿ ನಿಮ್ನ ವರ್ಗಗಳ ಸಮ್ಮೇಳನವೊಂದರಲ್ಲಿ ೧೯೩೫ರ ಅಕ್ಟೋಬರ್ ೧೮ರಂದು ಅಂಬೇಡ್ಕರ್ ಮಾಡಿದ ಘೋಷಣೆಯು ಆಕಸ್ಮಿಕವಾಗಿರಲಿಲ್ಲ; ತತ್‌ಕ್ಷಣದ ಪ್ರತಿಕ್ರಿಯೆಯೂ ಆಗಿರಲಿಲ್ಲ. ಆ ಕಾಲದ ಚರಿತ್ರೆಯನ್ನು ವಿವರವಾಗಿ ಓದಿದರೆ ಮತಾಂತರವೇ ಬಿಡುಗಡೆಯ ಮಾರ್ಗವೆನ್ನುವುದು ಬಹುದೊಡ್ಡ ಚರ್ಚೆಯ ವಿಷಯವಾಗಿತ್ತು. ಅಲ್ಲದೆ ಮತಾಂತರವಾಗುವುದಾದರೆ ಅದು ಪ್ರಬಲವಾದ ಇಸ್ಲಾಮ್, ಕ್ರಿಶ್ಚಿಯನ್ ಅಥವಾ ಸಿಖ್ ಧರ್ಮಕ್ಕೆ ಆಗಬೇಕು ಎಂದು ಅಂಬೇಡ್ಕರ್ ಚಿಂತಿಸಿದ್ದರು. ಈ ಬಗ್ಗೆ ಹೊಯ್ದಾಟದಲ್ಲಿದ್ದರೂ ಹಿಂದೂ ಧರ್ಮ ತ್ಯಜಿಸುವುದರ ಬಗ್ಗೆ ಅವರು ಖಚಿತವಾಗಿದ್ದರು.

## ಅಂಬೇಡ್ಕರ್ ಚಿಂತನೆಯ ಎರಡು ಪ್ರಮುಖ ಕವಲುಗಳು

ಹೈಸ್ಕೂಲು ಪಾಸಾದ ಕಾಲದಿಂದ ಬೌದ್ಧ ಧರ್ಮದ ಬಗ್ಗೆ ಗಾಢವಾದ ಆಸಕ್ತಿಯಿದ್ದ ಹಾಗೂ ಬುದ್ಧನನ್ನು ತಮ್ಮ ಗುರು (master) ಎಂದು ನಂಬಿದ್ದ ಅಂಬೇಡ್ಕರ್ ಅವರಿಗೆ ಬೌದ್ಧ ಸಂಘಟನೆಗಳ ಬಗ್ಗೆ ಹಾಗೂ ಬುದ್ಧನ ಚಿಂತನೆಯನ್ನು ಅವನ ನಂತರ ವ್ಯಾಖ್ಯಾನಿಸಿದ ರೀತಿಯ ಬಗ್ಗೆ ತೀವ್ರವಾದ ಗುಮಾನಿ ಹಾಗೂ ಅಸಮಾಧಾನಗಳಿದ್ದವು. ಅದನ್ನು ಸಮರ್ಥಿಸುವ ಹಾಗೆ, ಅಂಬೇಡ್ಕರ್ ಅವರು ಮುಂದೆ ಬೌದ್ಧ ಧರ್ಮಕ್ಕೆ ಮತಾಂತರ ಹೊಂದುತ್ತೇನೆ ಎಂದಾಗ ಬಂಗಾಲದ ಬ್ರಾಹ್ಮಣರೇ ಮುಂಚೂಣಿಯಲ್ಲಿದ್ದ 'ಮಹಾಬೋಧಿ' ಸಂಸ್ಥೆಯು "ಆಘಾತವಾಗಿದೆ ನಿಮ್ಮ ನಿರ್ಣಯವನ್ನು ಮರುಪರಿಶೀಲಿಸಿ" ಎಂದು ಟೆಲಿಗ್ರಾಮ್ ಕಳಿಸಿತು! ಹೀಗಾಗಿ ಹಿಂದೂ ಧರ್ಮ ತ್ಯಜಿಸುವ ಘೋಷಣೆ ಮತ್ತು ಬೌದ್ಧ ಧರ್ಮದ ಸ್ವೀಕಾರದ ನಡುವಿನ ಸುದೀರ್ಘ ಕಾಲದಲ್ಲಿ ಅಂಬೇಡ್ಕರ್ ಚಿಂತನೆ ಎರಡು ಪ್ರಮುಖ ಕವಲುಗಳನ್ನು ಪಡೆದುಕೊಂಡಿತು. ಅವರು ಹಿಂದೆ 'ಮೂಕನಾಯಕ' ಪತ್ರಿಕೆಯಲ್ಲಿ ಬರೆದಂತೆ (ನೋಡಿ : ಖೈರ್‌ಮೋಡೆ ಸಂಪಾದಿತ ಕೃತಿ ಸಂಪುಟ–೧: ಪು: ೨೬೧–೬೪) ಹಿಂದೂ ಸಮಾಜ ವ್ಯವಸ್ಥೆಯು ಮೆಟ್ಟಿಲುಗಳಿಲ್ಲದ ಬಹುಮಹಡಿಗಳ ಕಟ್ಟಡದಂತೆ. ಅಲ್ಲಿ ದಲಿತರಿಗೆ ಬಿಡುಗಡೆ ಅಸಾಧ್ಯ. ಎರಡನೇಯದಾಗಿ ಹಿಂದೂ ಧರ್ಮ, ಸಮಾಜ ವ್ಯವಸ್ಥೆ ಹಾಗೂ ರಾಜಕೀಯಗಳನ್ನು ಬೇರ್ಪಡಿಸುವುದು ಅಸಾಧ್ಯ. ಹೀಗಾಗಿ ವಸಾಹತುಶಾಹಿ ಇರಲಿ ಅಥವಾ ಸ್ವರಾಜ್ಯವಿರಲಿ ರಾಜಕೀಯ ಸಮಾನತೆಯೂ ಕಷ್ಟ, ಅದರ ಮೂಲಕ ಸಾಮಾಜಿಕ ಸಮಾನತೆ ತರುವುದೂ ಅಸಾಧ್ಯ. ಗಾಂಧೀ ಬಯಸಿದ್ದ ಮನಪರಿವರ್ತನೆಯು ಸಾಧ್ಯವಾಗದ ಆದರ್ಶವೆನ್ನುವುದನ್ನು ಅಂಬೇಡ್ಕರ್ ಅವರ ಸಮಕಾಲೀನ ಘಟನೆಗಳು ಕ್ರೂರವಾಗಿ ಸಾಬೀತು ಮಾಡಿದ್ದವು. ಹೀಗಾಗಿ ತಮ್ಮನ್ನು ಈ ಸ್ಥಿತಿಯಲ್ಲಿ ಇಟ್ಟಿರುವ ಧರ್ಮವನ್ನು ದಲಿತರು ತ್ಯಜಿಸುವುದು ಅನಿವಾರ್ಯ.

## ಬೌದ್ಧ ಧರ್ಮದ ಪುನರ್‌ನಿರೂಪಣೆ

ಇಷ್ಟಾದರೂ ಅಂಬೇಡ್ಕರ್ ತಕ್ಷಣ ಮತಾಂತರ ಹೊಂದದೇ ಇರುವುದಕ್ಕೆ ಕಾರಣವೆಂದರೆ ಹಾಗೆ ಮಾಡಿದ್ದಲ್ಲಿ ದಲಿತ ವಿಮೋಚನೆಗಾಗಿ ಮಾಡಬೇಕಾದ ಹೋರಾಟದಲ್ಲಿ ಅವರಿಗೆ ಮುಂದಾಳತ್ವ ವಹಿಸುವುದು ಅಸಾಧ್ಯವಾಗುತ್ತಿತ್ತು. ಅಲ್ಲದೆ ಅವರು ಆಗಿದ್ದ ಸ್ಥಿತಿಯಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಲು ಸಿದ್ದರಾಗಿರಲಿಲ್ಲ. ಏಕೆಂದರೆ ಅವರು ಧಮ್ಮ ಹಾಗೂ ರಿಲೀಜನ್‌ಗಳನ್ನು ಬೇರೆಯಾಗಿ ನೋಡಿದರು. ಅವರ ದೃಷ್ಟಿಯಲ್ಲಿ ಧಮ್ಮವೆಂದರೆ ನೈತಿಕತೆಯಾಗಿತ್ತು. ಬೌದ್ಧ ಧರ್ಮದಲ್ಲಿ ದೇವರ ಕಲ್ಪನೆ, ಆತ್ಮದಲ್ಲಿ ನಂಬಿಕೆ, ಕುರುಡು ನಂಬಿಕೆ ಹಾಗೂ ಆಚರಣೆಗಳಿಗೆ ಅವಕಾಶವಿರಲಿಲ್ಲ. ಅದು ಕೇವಲ ವಿವೇಕ (rational) ಹಾಗೂ ವೈಚಾರಿಕ ವ್ಯವಸ್ಥೆಯಾಗಿತ್ತು. ಸ್ವತಃ ಬುದ್ಧನೇ ಬೋಧಿಸಿದ ವೈಚಾರಿಕ ಸ್ವಾತಂತ್ರ್ಯದ ಮೂಲಕ ಬೌದ್ಧ ಧರ್ಮವನ್ನು ಪುನರ್ ನಿರೂಪಿಸಿ ತಮ್ಮ Buddha and His Dhamma ಕೃತಿಯನ್ನು ಬರೆದರು. ಶ್ರೇಷ್ಠ ಚಿಂತಕರಾದ Martin Fuch ಅವರ ಪ್ರಕಾರ ಅಂಬೇಡ್ಕರ್ ತಮ್ಮ ಗುರುಗಳಾದ John Dewey ಅವರ ಚಿಂತನೆಯ ಮಾದರಿಯಲ್ಲಿ ಒಂದು Civic Religion ನ ಶೋಧನೆಯಲ್ಲಿದ್ದರು. ಅಂದರೆ ದೇವರು, ಆತ್ಮ, ಬ್ರಹ್ಮ ಇವುಗಳ ಬದಲಾಗಿ ಒಂದು ಸಾಮಾಜಿಕ ಹಾಗೂ ನೈತಿಕ ಸಂಹಿತೆಯಾಗಬಲ್ಲ ಧರ್ಮವನ್ನು ಹುಡುಕುತ್ತಿದ್ದರು. ಪರದ ಧ್ಯಾನದ ಬದಲಾಗಿ ಇಲ್ಲಿನ ನೆಲದ ಸಾಮಾಜಿಕ ಬದುಕನ್ನು ಹಸನಾಗಿಸುವ ಮತ್ತು ಧರ್ಮ ಸಂಸ್ಥಾಪಕನ ಆರಾಧನೆಯ ಬದಲಾಗಿ ವಿವೇಕ(reason) ಹಾಗೂ ವೈಚಾರಿಕತೆಯನ್ನು ನೆಚ್ಚಿಕೊಳ್ಳುವ ಧರ್ಮವನ್ನು ಹುಡುಕುತ್ತಿದ್ದರು. ಹಾಗಿದ್ದರೆ ಧರ್ಮವೇಕೆ ಬೇಕು? ಕೇವಲ ನೈತಿಕ ಸಂಹಿತೆ ಸಾಲದೆ? ಎಂದರೆ ಅಂಬೇಡ್ಕರ್ ಒಪ್ಪುತ್ತಿರಲಿಲ್ಲ. ಮೊದಲಿನಿಂದಲೂ ಅವರು ಇಂಥ ಸಂಹಿತೆಯನ್ನು ಪವಿತ್ರಗೊಳಿಸುವ ಧಮ್ಮದ ಅವಶ್ಯಕತೆಯನ್ನು ಹೇಳುತ್ತಲೇ ಬಂದಿದ್ದರು. ಅವರು ಮರುನಿರೂಪಿಸಿದ ಬೌದ್ಧ ಧರ್ಮವು ಬಹುಪಾಲು ಒಂದು ಸಾಮುದಾಯಿಕ ಒಡಂಬಡಿಕೆಯಾಗಿದೆ; ಕೆಡುಕಿನ ಬದಲು ಸಾಮುದಾಯಿಕ ಒಳಿತನ್ನು ಅನುಷ್ಠಾನಕ್ಕೆ ತರುವ ಸಾಮರ್ಥ್ಯವುಳ್ಳ ಸಾಂಘಿಕ ಪ್ರಯತ್ನವಾಗಿದೆ. ಆದ್ದರಿಂದಲೇ ಅದು




ಚಲನಶೀಲವಾಗಿರುತ್ತದೆ. ಬದಲಾವಣೆಗೆ ಮರುಚಿಂತನೆಗೆ ತೆರೆದುಕೊಂಡಿರುತ್ತದೆ. ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿ, ನೆರೆದ ಲಕ್ಷಾಂತರ ಜನರಿಗೆ ಬೋಧಿಸಿದ ದೀಕ್ಷೆಯ ಪ್ರಮಾಣಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಇದು ದೀಕ್ಷೆಗಿಂತ ಹೆಚ್ಚಾಗಿ ಒಂದು ಸಾಮಾಜಿಕ, ವೈಯುಕ್ತಿಕ ನೀತಿ ಸಂಹಿತೆಯ ಸ್ವೀಕಾರವಾಗಿದೆ. ಇದರ ಸಮರ್ಥನೆಗಾಗಿ ತಮ್ಮ ಕೃತಿಯಲ್ಲಿ ಬೌದ್ಧ ಧರ್ಮವನ್ನು ಬುದ್ಧನ ಚರಿತ್ರೆಯನ್ನು ಮರುರೂಪಿಸಿದ ಬಗ್ಗೆ ಬೌದ್ಧ ಧರ್ಮೀಯ ಚಿಂತಕರ ತೀವ್ರವಾದ ಆಕ್ಷೇಪಣೆಗಳು ಬಂದವು. ಸರಳವಾಗಿ ಹೇಳುವುದಾದರೆ ಅವರಿಗೆ ಅದು ಬೌದ್ಧ ಧರ್ಮವಾಗಿ ಕಾಣಲೇ ಇಲ್ಲ.

ದೀಕ್ಷಾ ಭೂಮಿಯಲ್ಲಿ ನಡೆದ ಸಮಾರಂಭದಲ್ಲಿ ನೆರೆದು ದೀಕ್ಷೆ ಸ್ವೀಕರಿಸಿ ಲಕ್ಷಾನುಗಟ್ಟಲೆ ದಲಿತರು (ಬಹುಪಾಲು ಮಹಾರ್‌ರು) ತೀವ್ರವಾದ ಭಾವುಕತೆಯಿಂದ ಈ ಸ್ವೀಕಾರವನ್ನು ಪೂರೈಸಿದರು. ಅಂಬೇಡ್ಕರ್ ಅವರು ಬೋಧಿಸಿದ ಪ್ರಮಾಣಗಳಲ್ಲಿ ಹಿಂದೂ ಧರ್ಮವನ್ನು ತ್ಯಜಿಸುವ, ಹಿಂದೂ ದೇವತಾ ಸಂಕೇತಗಳನ್ನು ತ್ಯಜಿಸುವ, ನೈತಿಕತೆಯನ್ನು ಪಾಲಿಸುವ ಪ್ರಮಾಣಗಳನ್ನು ಒಪ್ಪಿಕೊಂಡರು. ಮಾನಸಿಕವಾಗಿ ಆಧ್ಯಾತ್ಮಿಕವಾಗಿ ಅವರಿಗೆ ಅದೊಂದು ಮರುಜನ್ಮವೇ ಆಗಿತ್ತು. ಪ್ರಜ್ಞೆಯಿಲ್ಲದ ಒಂದು ಹೊಸ ತಿರುವೂ ಆಗಿತ್ತು.

## 'ಮುಕ್ತಿಗೆ ಮಾರ್ಗ ಯಾವುದು?' : ಅಂಬೇಡ್ಕರ್ ಪ್ರಶ್ನೆಗೆ ಹಿಂದುತ್ವದಲ್ಲಿ ಉತ್ತರವಿಲ್ಲ

ಮುಂದಿನ ವರ್ಷಗಳಲ್ಲಿ ಈ ಮತಾಂತರವು ಮೂಲಭೂತವಾದ ಬದಲಾವಣೆಗಳನ್ನು ತಂದಿತೆ? ದಲಿತರ ಸಾಮಾಜಿಕ ಸ್ಥಿತಿಗತಿಗಳಲ್ಲಿ ಬದಲಾವಣೆ ಆಯಿತೆ? ಅಪಾರ ಸಂಖ್ಯೆಯ ದಲಿತ ಸಮುದಾಯಗಳನ್ನು ಅಂಬೇಡ್ಕರ್ ಬೋಧಿಸಿದ ಧಮ್ಮವನ್ನು ಪಾಲಿಸುವುದು ಸಾಧ್ಯವಾಯಿತೆ? ಇದು ರಾಜಕೀಯ ಸಂಚಲನವನ್ನು ಉಂಟುಮಾಡಿತೆ? ಈ ಪ್ರಶ್ನೆಗಳಿಗೆ ಸರಳವಾದ ಉತ್ತರಗಳಿಲ್ಲ. ಈ ಬಗ್ಗೆ ನಡೆದಿರುವ ಸಂಶೋಧನೆಗಳೂ ಕೂಡ ವಿಭಿನ್ನ ತೀರ್ಮಾನಗಳಿಗೆ ಬಂದಿವೆ. ಮತಾಂತರದ ಮೊದಲಿದ್ದ ಅನೇಕ ಆಚರಣೆಗಳು ಮತ್ತೆ ವಾಪಸ್ಸು ಬಂದಿರುವುದನ್ನು ಕೆಲವು ಸಂಶೋಧನೆಗಳು ದಾಖಲಿಸುತ್ತವೆ. ಮತಾಂತರದಿಂದಾಗಿ ಕೆಲಕಾಲ ಮೀಸಲಾತಿ ಇತ್ಯಾದಿ ಸವಲತ್ತುಗಳಿಂದ ವಂಚಿತರಾಗಿದ್ದ ಬಗ್ಗೆ ಕೂಡ ವಿಮರ್ಶಾತ್ಮಕ ವರದಿಗಳು ಲಭ್ಯವಿವೆ. ಅದೇ ಹೊತ್ತಿಗೆ ಅಸಮಾನತೆಯ ಹಿಂದೂ ಧರ್ಮವನ್ನು ತ್ಯಜಿಸಿದ ಆತ್ಮಾಭಿಮಾನ ಹಾಗೂ ಸ್ವಾಯತ್ತತೆಗಳು ಕ್ರಮೇಣವಾಗಿ ಸಾಮಾಜಿಕ ಸ್ಥಿತಿಗಳ ಬದಲಾವಣೆಗೂ ಕಾರಣವಾಗಿವೆ ಎನ್ನುವ ವರದಿಗಳೂ ಇವೆ. ಒಂದು ಮಾತು ನಿಜ. ಪ್ರಾಯಶಃ ಅಂಬೇಡ್ಕರ್ ನಿರೀಕ್ಷಿಸಿದಂತೆ ಮತಾಂತರವು ಬಹುಸಂಖ್ಯಾತ ಹಿಂದೂ ಸಮಾಜದ ಮೇಲೆ ಬಹುದೊಡ್ಡ ಪರಿಣಾಮವನ್ನು ಮಾಡಲಿಲ್ಲ. ಏಕೆಂದರೆ ಬೌದ್ಧ ಧರ್ಮವೆಂದರೆ ಪರಿಷ್ಕೃತ ಹಿಂದೂ ಧರ್ಮವೆನ್ನುವ ನಂಬಿಕೆ ಬಲವಾಗಿದೆ. ಕ್ರಿಶ್ಚಿಯನ್ ಅಥವಾ ಮುಸ್ಲಿಮ್ ಧರ್ಮಕ್ಕೆ ಮತಾಂತರವಾಗುವುದನ್ನು ಕೊಲೆ, ಹಿಂಸೆ, ಕಾನೂನು ಇವುಗಳ ಮೂಲಕ ನಿಲ್ಲಿಸುವ ಆಕ್ರೋಶವು ಬೌದ್ಧ ಧರ್ಮಕ್ಕೆ ಮತಾಂತರವಾಗುವುದರ ಬಗ್ಗೆ ಇಲ್ಲ. ಆದರೆ ಹಿಂದೂ ಧರ್ಮವು ಹಿನ್ನೆಲೆಗೆ ಸರಿದು ಹಿಂದುತ್ವವು ಹಿಂಸಾತ್ಮಕ, ಆಕ್ರಮಣಕಾರಿ ಸ್ವರೂಪವನ್ನು ಪಡೆಯುತ್ತಿರುವ ಇಂದಿನ ಸಂದರ್ಭದಲ್ಲಿ ಅಂಬೇಡ್ಕರ್ ಅವರ ನಿರ್ಧಾರವು ಸರಿಯಾಗಿಯೇ ಇತ್ತು ಅನ್ನಿಸುತ್ತದೆ. "ಮುಕ್ತಿಗೆ ಯಾವುದು ಮಾರ್ಗ?"ವೆನ್ನುವ ಭಾಷಣದಲ್ಲಿ ('ಮುಕ್ತಿ ಕೋಣ್ ಪಥೆ?' : ಅಖಿಲ ಬಾಂಬೆ ಜಿಲ್ಲಾ ಮಹಾರ್ ಸಮಾವೇಶ: ೧೯೩೬) ಅಂಬೇಡ್ಕರ್ ಹೇಳಿದ ಮಾತುಗಳಿಗೆ ಹಿಂದುತ್ವದಲ್ಲಿ ಯಾವ ಉತ್ತರವೂ ಇಲ್ಲ.

ಮತಾಂತರದ ಪ್ರಶ್ನೆಯ ಆಚೆಗೆ ಬಹಳ ಸ್ಪಷ್ಟವಾಗಿ ಕಾಣುವುದೆಂದರೆ ಹಿಂದುತ್ವದ ಅಧಿಕಾರದಲ್ಲಿ ಮತಾಂತರವನ್ನು ದೇಶದ್ರೋಹವೆಂದು ಅಧಿಕೃತವಾಗಿ ವ್ಯಾಖ್ಯಾನಿಸಿರುವುದರಿಂದ ಅದರ ಬಗ್ಗೆ ಚರ್ಚೆಯೂ ಅಸಾಧ್ಯವಾಗುತ್ತಿದೆ. ಅಂಬೇಡ್ಕರ್ ಭಾರತದ ಸಾಮಾಜಿಕ ಸ್ಥಿತಿಯ ಬಗ್ಗೆ ಬಳಸಿದ ರೂಪಕವು ಈಗ ನೂರಕ್ಕೆ ನೂರು ನಿಜವಾಗಿದೆ. ಇದೇ ಹೊತ್ತಿಗೆ ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದ ಚಾರಿತ್ರಿಕ ವಿದ್ಯಮಾನವು ಶಿಕ್ಷಿತ, ಪ್ರಜ್ಞಾವಂತ ದಲಿತರ ಮೇಲೆ ಅತ್ಯಂತ ಗಾಢವಾದ ಪರಿಣಾಮವನ್ನು ಮಾಡಿದೆ. ದಲಿತ ಚಳುವಳಿಗಳು ದುರ್ಬಲವಾಗಿ ದಲಿತ ನಾಯಕತ್ವವು ಭ್ರಷ್ಟ ರಾಜಕಾರಣಕ್ಕೆ ಬಲಿಯಾಗಿರುವ ಇಂದಿನ ಸಂದರ್ಭದಲ್ಲಿ ಈ ಬೆಳವಣಿಗೆಗಳು ಕ್ಷೀಣವಾಗಿ ಕಾಣುತ್ತಿರಬಹುದು. ಸಾರ್ವಜನಿಕವಾಗಿ ದೀಕ್ಷೆ ತೆಗೆದುಕೊಂಡು ಬೌದ್ಧ ಧರ್ಮಕ್ಕೆ ಮತಾಂತರ ಹೊಂದದೇ ಇದ್ದರೂ ಆಳದಲ್ಲಿ ದಲಿತ ಸಮುದಾಯಗಳು ಭಾವನಾತ್ಮಕವಾಗಿ ಮತಾಂತರ ಹೊಂದಿದ್ದಾರೆ ಎನ್ನುವುದು ಅತಿಶಯೋಕ್ತಿಯಲ್ಲ.



**(ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ಲೇಖಕರು ಕನ್ನಡದ ಹಿರಿಯ ಸಾಹಿತ್ಯ ವಿಮರ್ಶಕರು ಮತ್ತು ರಾಜಕೀಯ ಚಿಂತಕರು)**

ಪ್ರಚಲಿತ-೨

# ಇಂದಿನ ರೈತ ಪ್ರತಿಭಟನೆಯೂ, ಅಂದಿನ ಬಾರ್ಡೋಲಿ ಸತ್ಯಾಗ್ರಹವೂ...

-ರಾಮಚಂದ್ರ ಗುಹಾ



ಕೇಂದ್ರದ ಮೂರು ಕೃಷಿ ಕಾಯಿದೆಗಳನ್ನು ವಾಪಸ್ ಪಡೆಯುವಂತೆ ಭಾರತದ ರೈತರು, ಮುಖ್ಯವಾಗಿ ಪಂಜಾಬ್, ಹರ್ಯಾಣ ಮತ್ತು ಪಶ್ಚಿಮ-ಉತ್ತರ ಉತ್ತರಪ್ರದೇಶದ ರೈತರು ಹೆಚ್ಚೂ ಕಡಿಮೆ ಒಂದು ವರ್ಷದಿಂದ ನಡೆಸುತ್ತಿದ್ದ ಪ್ರತಿಭಟನೆಗೆ ಅಂತೂ ಜಯ ಸಿಕ್ಕಿದೆ. ಸರ್ಕಾರ ಪ್ರತಿಭಟನೆಗೆ ಮಣಿದು ಕಾಯ್ದೆಗಳನ್ನು ರದ್ದು ಮಾಡುವ ಘೋಷಣೆ ಮಾಡಿದೆ. ಅಂದ ಮಾತ್ರಕ್ಕೆ ಈ ರೈತ ಚಳುವಳಿ ನಿಲುಗಡೆಗೆ ಬಂದಿದೆ ಎಂದಲ್ಲ, ಎಲ್ಲ ಮುಖ್ಯ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಪದ್ಧತಿ ಜಾರಿಗೆ ತರುವವರೆಗೆ ಇದು ಮುಂದುವರೆಯುವುದೆಂದು ರೈತ ಮುಖಂಡರು ಹೇಳಿದ್ದಾರೆ.

ಅದೇನೇ ಇರಲಿ, ಸದ್ಯದ ಈ ರೈತ ಚಳುವಳಿ ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲೇ ಒಂದು ಅಪೂರ್ವ ಚಳುವಳಿ. ಅಪೂರ್ವ ಏಕೆಂದರೆ ಅದು ಎಂದೂ ದುರ್ಬಲವಾಗದೆ ಸುಸ್ಥಿರವಾಗಿತ್ತು ಮತ್ತು ಶಾಂತಿಯುತವಾಗಿತ್ತು. ಇದಕ್ಕೆ ಕಾರಣ ಈ ಚಳುವಳಿಯ ಅರ್ಥೋದ್ದೇಶಗಳ ಬಗ್ಗೆ, ಇದಕ್ಕೆ ಕಾರಣವಾದ ಕಾಯ್ದೆಗಳ ದೂರಗಾಮಿ ಪರಿಣಾಮಗಳ ಬಗ್ಗೆ ರೈತ ಮುಖಂಡರಿಗೆ ವಿಚಾರ ಸ್ಪಷ್ಟತೆ ಇತ್ತು ಮತ್ತು ಇದರಿಂದ ಹೊಮ್ಮಿದ ದೃಢ ಸಂಕಲ್ಪವಿತ್ತು. ಈ ಎಲ್ಲ ದೃಷ್ಟಿಗಳಿಂದ, ಖ್ಯಾತ ಇತಿಹಾಸಕಾರ ರಾಮಚಂದ್ರ ಗುಹಾ ಪ್ರಕಾರ, ಈ ಚಳುವಳಿಯು ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಗಾಂಧೀಜಿಯ ಮಾರ್ಗದರ್ಶನದಲ್ಲಿ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ನಡೆದ ಗುಜರಾತ್‌ನ ಬಾರ್ಡೋಲಿ ಸತ್ಯಾಗ್ರಹವನ್ನು ನೆನಪಿಗೆ ತರುತ್ತದೆ. ಈ ನೆನಪು ಹೇಗೆ ಅರ್ಥಪೂರ್ಣವಾಗಿದೆ ಎಂದು ಈ ಲೇಖನ ಹೇಳುವಂತಿದೆ.-ಸಂ.



೧೯೩೧ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ವಾರ್ಷಿಕ ಸಮಾವೇಶವು ಬಂದರು ಪಟ್ಟಣವಾದ ಕರಾಚಿಯಲ್ಲಿ ನಡೆಯಿತು. ವಲ್ಲಭಭಾಯ್ ಪಟೇಲರನ್ನು ಸಮಾವೇಶದ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ತಮ್ಮ ಭಾಷಣದಲ್ಲಿ ಮೊದಲಿಗೆ ಪಟೇಲರು, "ಯಾವ ಭಾರತೀಯನಾದರೂ ಬಯಸಬಹುದಾದ ಅತ್ಯುನ್ನತ ಸ್ಥಾನವೊಂದಕ್ಕೆ ನೀವು ಒಬ್ಬ ಸರಳ ಕೃಷಿಕನನ್ನು ಆರಿಸಿದ್ದೀರಿ. ಪ್ರಥಮ ಸೇವಕನನ್ನಾಗಿ ನನ್ನನ್ನು ಆರಿಸಿರುವುದಕ್ಕೆ ಕಾರಣ, ನಾನು ಮಾಡಿರಬಹುದಾದ ಅಲ್ಪ ಸೇವೆಯಲ್ಲ, ಗುಜರಾತ್ ಮಾಡಿರುವ ಅಗಾಧ ತ್ಯಾಗದ ಗುರುತಾಗಿ ನನ್ನನ್ನು ಈ ಸ್ಥಾನಕ್ಕೆ ಚುನಾಯಿಸಿದ್ದೀರಿ ಎಂಬ ಪ್ರಜ್ಞೆ ನನಗಿದೆ. ಗೌರವ ಸಮರ್ಪಣೆಗಾಗಿ ಗುಜರಾತನ್ನು ಆರಿಸಿಕೊಂಡಿರುವುದು ನಿಮ್ಮ ಔದಾರ್ಯವನ್ನು ತೋರಿಸುತ್ತದೆ. ವಾಸ್ತವದಲ್ಲಿ ಬೃಹತ್ ರಾಷ್ಟ್ರೀಯ ಜಾಗೃತಿಯ ಸಂದರ್ಭದಲ್ಲಿ ಪ್ರತಿಯೊಂದು ಪ್ರಾಂತ್ಯವೂ ಅತಿಹೆಚ್ಚಿನ ಕೊಡುಗೆಯನ್ನೇ ನೀಡಿದೆ" ಎನ್ನುತ್ತಾರೆ.

೧೯೩೧ರ ಹೊತ್ತಿಗೆ ಅದಾಗಲೇ ನಾಲ್ಕು ದಶಕಗಳಿಗಿಂತಲೂ ಹೆಚ್ಚಿನ ಸಮಯದಿಂದ ಕಾಂಗ್ರೆಸ್ ಅಸ್ತಿತ್ವದಲ್ಲಿತ್ತು. ಆದರೂ ಭಾರತವು ಹಳ್ಳಿಗಳಲ್ಲಿ ಬದುಕುತ್ತದೆ ಎಂಬ ಗಾಂಧೀಜಿಯವರ ಪ್ರತಿಪಾದನೆ ಮತ್ತು ಪ್ರೇರಣೆಗಳಿದ್ದಾಗಲೂ ಈ ಅವಧಿಯಲ್ಲಿ ಹಿಂದೆಂದೂ ಅದು ಒಂದು ರೈತ ಕುಟುಂಬದಿಂದ ಬಂದ ವ್ಯಕ್ತಿಯನ್ನು ತನ್ನ ನಾಯಕತ್ವಕ್ಕಾಗಿ ಚುನಾಯಿಸಿರಲಿಲ್ಲ. ಕಾಂಗ್ರೆಸ್‌ನ ಹಿಂದಿನ ಎಲ್ಲ ಅಧ್ಯಕ್ಷರೂ ನಗರಗಳಲ್ಲಿ ಹುಟ್ಟಿ ಬೆಳೆದವರಾಗಿದ್ದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗ್ರಾಮೀಣ ಹಿನ್ನೆಲೆಯಿಂದ ಬಂದ ಪ್ರಥಮ ಪ್ರಮುಖ ವ್ಯಕ್ತಿ ಪಟೇಲರಾಗಿದ್ದರು. ವಿಶೇಷವಾಗಿ ಗ್ರಾಮೀಣ ಜನರ ಸಂಘಟಕರಾಗಿ ಅವರು ಮೊದಲಿಗೆ ರಾಷ್ಟ್ರೀಯ ರಂಗದಲ್ಲಿ ತಮ್ಮ ಛಾಪನ್ನು ಮೂಡಿಸಿದರು. ಪಟೇಲರನ್ನು ಕುರಿತ ಇತ್ತೀಚಿನ ಚರ್ಚೆಗಳು ದೇಶ ವಿಭಜನೆ ಮತ್ತು ಸ್ವಾತಂತ್ರ್ಯಾ ನಂತರದಲ್ಲಿ ರಾಜರ ಆಳ್ವಿಕೆಯಲ್ಲಿದ್ದ ಪ್ರಾಂತ್ಯಗಳನ್ನು ಭಾರತದೊಂದಿಗೆ ಒಗ್ಗೂಡಿಸುವ ಮೂಲಕ ರಾಷ್ಟ್ರೀಯ ಏಕತೆಗೆ ನೆರವಾದುದರಲ್ಲಿನ ಅವರ ಪಾತ್ರ ಮಹತ್ವದ್ದು ಎಂದು ಪ್ರತಿಪಾದಿಸುವ ದಿಕ್ಕಿನಲ್ಲಿ ನಡೆಯುತ್ತಿವೆ. ಆ ಕೊಡುಗೆಗಳು ವಾಸ್ತವದಲ್ಲಿ ಮಹತ್ವವಾದುವೇ. ಆದರೂ ರೈತ ಸಂಘಟಕರಾಗಿ ಅವರು ಮಾಡಿದ ಕಾರ್ಯವನ್ನು ಇದು ಮಸುಕುಗೊಳಿಸುವುದು ಒಂದು ವಿಷಾದನೀಯ ವಿಚಾರ.

ವಾಸ್ತವದಲ್ಲಿ ಒಂದು ವರ್ಷಕ್ಕೂ ಹೆಚ್ಚಿನ ಕಾಲದಿಂದ ಉತ್ತರ ಭಾರತದ ರೈತರು ನರೇಂದ್ರ ಮೋದಿಯವರ ಸರ್ಕಾರದ ವಿರುದ್ಧ ಸತ್ಯಾಗ್ರಹವನ್ನು ನಡೆಸುತ್ತಾ ಬಂದಿರುವ ಇಂದಿನ ಸಂದರ್ಭದಲ್ಲಿ ಪಟೇಲರು ಒಬ್ಬ ರೈತರ ಸರ್ದಾರ್(ನಾಯಕ) ಆಗಿ ಹೆಚ್ಚು ಪ್ರಸ್ತುತರಾಗಿ ಕಾಣುತ್ತಾರೆ.

## ಬಾರ್ಡೋಲಿ ಸತ್ಯಾಗ್ರಹ

ವಲ್ಲಭಭಾಯ್ ಪಟೇಲರು ಸಂಘಟಿಸಿ ಮುನ್ನಡೆಸಿದ ೧೯೨೮ರ ಬಾರ್ಡೋಲಿ ಸತ್ಯಾಗ್ರಹವು ರೈತರ ಸ್ವಾಭಿಮಾನದ ವಿಚಾರದಲ್ಲಿ ಅಹಿಂಸೆಯ ಸಾಮರ್ಥ್ಯವನ್ನು ಸಮರ್ಥವಾಗಿ ತೋರಿಸಿಕೊಟ್ಟಿತು. ಬ್ರಿಟಿಷ್ ಸರ್ಕಾರ ಪ್ರಕಟಿಸಿದ್ದ ಭೂಕಂದಾಯ ಏರಿಕೆ ವಿರುದ್ಧ ರೈತರು ನಡೆಸಿದ ದೀರ್ಘಕಾಲಿಕ ಹೋರಾಟ ಇದಾಗಿತ್ತು. ಈ ಹೋರಾಟದಲ್ಲಿ ಗ್ರಾಮೀಣ ಗುಜರಾತ್ ಭಾಗದ ಜನ ವಸಾಹತುಶಾಹಿ ಸರ್ಕಾರದ ದಮನಕಾರಿ ಕೃಷಿ ನೀತಿಯ ವಿರುದ್ಧ ಸಂಘಟಿತರಾದರು. ಬಾಂಬೆ ಪ್ರೆಸಿಡೆನ್ಸಿಯ ದಾಖಲೆಗಳಲ್ಲಿ ಈ ವಿಚಾರದ ಬಗ್ಗೆ ವಿಪುಲವಾದ ವಿವರಗಳು ಲಭ್ಯವಿದ್ದು ಈ ದಾಖಲೆಗಳನ್ನು ಈಗ ಮುಂಬೈನಲ್ಲಿರುವ ರಾಜ್ಯ ಪತ್ರಾಗಾರದಲ್ಲಿ ದೊರೆಯುತ್ತವೆ.

ಸತ್ಯಾಗ್ರಹದ ಕಾಲದಲ್ಲಿ ಬಾರ್ಡೋಲಿಯಲ್ಲಿ ಪಟೇಲರು ಮಾಡಿದ ಭಾಷಣಗಳ ಅನುವಾದಗಳೂ ಕೂಡ ಗಮನ ಸೆಳೆಯುವಂತಿವೆ. ಒಂದು ಭಾಷಣದಲ್ಲಿ ಅವರು ರೈತರಿಗೆ ಧೈರ್ಯವನ್ನು ಪ್ರದರ್ಶಿಸಬೇಕೆಂದು, ತ್ಯಾಗಕ್ಕೆ ಸಿದ್ಧರಾಗಿರಬೇಕೆಂದು ಕರೆಕೊಡುತ್ತಾ "ನಿಮಗೆ ಏತರ ಹೆದರಿಕೆ? ಆಸ್ತಿಪಾಸ್ತಿ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಎಂಬ ಹೆದರಿಕೆಯೇ? ಒಂದು ಮದುವೆಗಾಗಿ ನೀವು ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, (ಸರ್ಕಾರಿ) ಅಧಿಕಾರಿಗಳು 200 ಅಥವಾ 500 ರೂಪಾಯಿ ಬೆಲೆಯ ನಿಮ್ಮ ವಸ್ತುಗಳನ್ನು ಕೊಂಡೊಯ್ದರೆ ನೀವೇಕೆ ಹೆದರಬೇಕು?" ಎಂದು ರೈತರಿಗೆ ಧೈರ್ಯ ತುಂಬುತ್ತಾರೆ.

"ಈ ಹೋರಾಟದಲ್ಲಿ ನಾವು ಐದು ಸಾವಿರ ಕುರಿಗಳನ್ನು ಹೊಂದಿರುವುದಕ್ಕಿಂತ ಆತ್ಮಾಹುತಿಗೆ ಸಿದ್ಧರಿರುವ ಬರೀ ಐದು ಜನರನ್ನು ಹೊಂದಿರುವುದೇ ಉತ್ತಮ" ಎಂದು ಸರ್ದಾರ್ ಪಟೇಲರು ಬಾರ್ಡೋಲಿಯ ರೈತರನ್ನು ಕುರಿತು ಹೇಳುತ್ತಾರೆ. ಮತ್ತೊಂದು ಭಾಷಣದಲ್ಲಿ ಪಟೇಲರು ಗುಜರಾತ್‌ನ ರೈತರನ್ನು ದಮನ ಮಾಡುವುದಕ್ಕಾಗಿ ಸರ್ಕಾರವು ಉಗಿ-ರೋಲರ್ ಯಂತ್ರವನ್ನು ಹೊಂದಿದೆ ಎಂದು ವ್ಯಂಗ್ಯವಾಡುತ್ತಾರೆ.

ಮತ್ತೊಂದು ಭಾಷಣದಲ್ಲಿ "ಸರ್ಕಾರದ ಪರವಾದ ವೃತ್ತಪತ್ರಿಕೆಯೊಂದು ಗುಜರಾತ್, ಗಾಂಧಿ ಜ್ವರದಿಂದ ಬಳಲುತ್ತಿದೆ ಎಂದು ಬರೆಯುತ್ತದೆ. ಪ್ರತಿಯೊಬ್ಬರಿಗೂ ಇಂತಹ ಜ್ವರ ಬರಲಿ ಎಂದು ನಾವೆಲ್ಲಾ ಬಯಸೋಣ" ಎನ್ನುತ್ತಾರೆ. ಒಂದು ಪೊಲೀಸ್ ವರದಿಯು ತುಸು ದಿಗಿಲಿನಿಂದಲೇ ವಲ್ಲಭಭಾಯ್ ಪಟೇಲರು(ಬಾರ್ಡೋಲಿ) ತಾಲೂಕಾದ ಬಹುತೇಕ ಎಲ್ಲ ಹಳ್ಳಿಗಳ ನಾಯಕರನ್ನೂ ಭೇಟಿಯಾಗುತ್ತಿದ್ದಾರೆ ಎಂದು ಬರೆಯುತ್ತದೆ.

ವಸಾಹತು ಪ್ರಭುತ್ವದ ಪತ್ರಾಗಾರದ ದಾಖಲೆಗಳಿಗೆ ಪೂರಕವಾಗಿ (ದುರದೃಷ್ಟವಶಾತ್ ಈಗ ನಿಂತು ಹೋಗಿರುವ) *ದ ಬಾಂಬೆ ಕ್ರಾನಿಕಲ್* ಪತ್ರಿಕೆಯ ಅದ್ಭುತವಾದ ಮೈಕ್ರೋ ಫಿಲ್ಮ್‌ಗಳೂ ಇವೆ. ೧೯೨೮ ರ ಏಪ್ರಿಲ್ ಕೊನೆಯ ವಾರದಲ್ಲಿ *ಕ್ರಾನಿಕಲ್* ಪತ್ರಿಕೆಯು ಕಿಸಾನ್ ಸಭಾ ಕುರಿತು ಈ ರೀತಿ ವರದಿ ಮಾಡುತ್ತದೆ: "ನಿನ್ನೆ ರಾತ್ರಿ ವಾರದ್ ಎಂಬಲ್ಲಿ ನಡೆದ ಕೃಷಿಕರ ಸಭೆಯಲ್ಲಿ ವಲ್ಲಭಭಾಯ್ ಪಟೇಲರ ಮೇಲೆ ಭಕ್ತಿ ಮತ್ತು ಆರಾಧನೆಯ ಮಳೆಗರೆದ ಸಂಭ್ರಮದ ದೃಶ್ಯವು ಕಂಡುಬಂದಿತು. ಖಾದಿ ತೊಟ್ಟ ಮಹಿಳೆಯರು ಕೈಮಗ್ಗದ ನೂಲಿನ ಹಾರ, ಹೂವು, ತೆಂಗಿನಕಾಯಿ, ಕುಂಕುಮ ಮತ್ತು ಅಕ್ಕಿ ಇತ್ಯಾದಿಗಳನ್ನು ಅರ್ಪಿಸುತ್ತಾ ಕೊನೆಯಿಲ್ಲದ ಸರಣಿಯಲ್ಲಿ ಗೌರವ ಸಮರ್ಪಿಸುತ್ತಿದ್ದರು.. ಭಕ್ತ ಮಹಿಳೆಯರು ರಚಿಸಿದ ಹಾಡುಗಳನ್ನು, ಈ ಸಂದರ್ಭಕ್ಕೆ ಹೊಂದುವಂತೆ ಕೆಲವು ಬದಲಾವಣೆ ಮಾಡಿಕೊಂಡು, ಸತ್ಯಕ್ಕಾಗಿ ನಡೆಯುತ್ತಿರುವ ತಮ್ಮ ಪವಿತ್ರ ಹೋರಾಟವನ್ನು ಹರಸುವಂತೆ 500 ಜನ ಏಕಕಂಠದಿಂದ ಹಾಡಿದ್ದು ೨೫೦೦ ಜನ ನೆರೆದಿದ್ದ ಸಭೆಗೆ ಒಂದು ಧಾರ್ಮಿಕ ರೂಪವನ್ನು ನೀಡಿತ್ತು."

ಸತ್ಯಾಗ್ರಹಿಗಳು ಮತ್ತು ಸರ್ಕಾರದ ನಡುವೆ ನಡೆದ ಒಂದು ಒಪ್ಪಂದವನ್ನು ಕುರಿತು *ಕ್ರಾನಿಕಲ್* ಪತ್ರಿಕೆಯು ವರದಿ ಮಾಡುತ್ತದೆ: ಈ ಒಪ್ಪಂದದಲ್ಲಿ ಸರ್ಕಾರವು ಒಬ್ಬ ರೆವಿನ್ಯೂ ಅಧಿಕಾರಿ ಮತ್ತು ಒಬ್ಬ ನ್ಯಾಯಾಂಗದ ಅಧಿಕಾರಿಯಿಂದ, ಯಾವುದೇ ಸಂದರ್ಭದಲ್ಲೂ ನ್ಯಾಯಾಂಗದ ಅಧಿಕಾರಿಯ ಅಭಿಪ್ರಾಯಕ್ಕೆ ಮನ್ನಣೆ ಇರುವ ಷರತ್ತಿಗೆ ಒಳಪಟ್ಟು ವಿಚಾರಣೆ ನಡೆಸಲು ಸಮ್ಮತಿಸುತ್ತದೆ. ಸರ್ಕಾರವು ಎಲ್ಲಾ ಸತ್ಯಾಗ್ರಹಿಗಳನ್ನೂ ಕಾರಾಗೃಹದಿಂದ ಬಿಡುಗಡೆ ಮಾಡುತ್ತದೆ. ರಾಜೀನಾಮೆ ನೀಡಿದ್ದ ಎಲ್ಲಾ ಗ್ರಾಮಗಳ ಪಂಚರನ್ನೂ ಪುನಃ ನೇಮಿಸಿಕೊಳ್ಳುತ್ತದೆ.

ಬಾರ್ಡೋಲಿ ಸತ್ಯಾಗ್ರಹದ ಬಗ್ಗೆ ೧೯೨೯ ರಲ್ಲಿ ಪ್ರಕಟವಾದ ತಮ್ಮ ಪುಸ್ತಕದಲ್ಲಿ ಮಹದೇವ ದೇಸಾಯಿಯವರು "ಸರ್ದಾರ್ ಪಟೇಲರು ರೈತರನ್ನು ಆದರ್ಶೀಕರಿಸುವ ವಿಚಾರಕ್ಕೆ ಎರಡು ನೆಲೆಗಳಿವೆ; ನಿಜವಾದ ಸಾಮಾಜಿಕ ಆರ್ಥಿಕತೆಯಲ್ಲಿ ರೈತರ ಉನ್ನತ ಸ್ಥಾನದ ಬಗೆಗಿನ ಅರಿವು ಮತ್ತು ರೈತ ದೂಡಲ್ಪಟ್ಟಿರುವ ಅತ್ಯಂತ ಕನಿಷ್ಠ ಸ್ಥಿತಿಯ ಬಗ್ಗೆ ಪಟೇಲರಿಗೆ ಇರುವ ತೀವ್ರವಾದ ನೋವು. ಬಾರ್ಡೋಲಿಯಲ್ಲಿ ಸತ್ಯಾಗ್ರಹವು ಯಶಸ್ವಿಯಾಯಿತು, ಏಕೆಂದರೆ ಸರ್ದಾರರು ರೈತರಿಗೆ ಅಲ್ಲಿ ನಿರ್ಭೀತಿ ಮತ್ತು ಒಗ್ಗಟ್ಟುಗಳೆಂಬ ಎರಡು ಮೂಲಭೂತ ಪಾಠವನ್ನು ಕಲಿಸಿದರು" ಎಂದು ದೇಸಾಯಿ ಬರೆಯುತ್ತಾರೆ.

## ಸದ್ದಿಲ್ಲದ ಶೌರ್ಯ

ಬಾರ್ಡೋಲಿಯಲ್ಲಿ ಪಟೇಲರು ಮುನ್ನಡೆಸಿದ ರೈತ ಸತ್ಯಾಗ್ರಹಕ್ಕೂ ಮತ್ತು ಇಂದು ನಡೆಯುತ್ತಿರುವ ರೈತ ಹೋರಾಟಕ್ಕೂ ನಡುವೆ ಬಹುತೇಕ ಒಂದು ನೂರು ವರ್ಷಗಳ ಅಂತರವಿದೆ. ಆದರೂ ಈ ಎರಡರ ನಡುವೆ ಇರುವ ಸಮಾನತೆಗಳನ್ನು ಕಾಣದೆ ಇರಲಾಗದು. ಒಂದು ಕಡೆ ಈ ಸತ್ಯಾಗ್ರಹಕ್ಕೆ ಆಧಾರವಾಗಿರುವ ಮಹಿಳೆಯರು ಮತ್ತು ಚಳಿ ಮಳೆ ಬೇಸಿಗೆ ಮತ್ತು ಕರೋನಾ ಸಾಂಕ್ರಾಮಿಕ – ಹೀಗೆ ಎಲ್ಲವನ್ನೂ ಎದುರಿಸಿ ಚಳುವಳಿಯನ್ನು ಮುನ್ನಡೆಸುತ್ತಿರುವ ಸತ್ಯಾಗ್ರಹಿಗಳ ಸದ್ದಿಲ್ಲದ ಶೌರ್ಯವಿದ್ದರೆ, ಮತ್ತೊಂದು ಕಡೆ ಚಳುವಳಿಯನ್ನು ತಡೆಯಲು, ನಿಧಾನಗೊಳಿಸಲು, ಚಳುವಳಿಯನ್ನು ಒಡೆದು ನಾಯಕರ ಬಗ್ಗೆ ಸುಳ್ಳು ವದಂತಿಗಳನ್ನು ಹರಡುವ ಸರ್ಕಾರದ ಪ್ರಯತ್ನಗಳು.

ಹೀಗಾಗಿ, ೧೯೨೮ ರ ಜುಲೈ ೨೮ರ ಒಂದು ವರದಿಯಲ್ಲಿ ಬಾಂಬೆ ಸರ್ಕಾರವು "ಪಟೇಲರು ಗಾಂಧೀಜಿಯವರನ್ನು ಚಳುವಳಿಯಿಂದ ದೂರವಿಟ್ಟಿದ್ದಾರೆ. ಏಕೆಂದರೆ ರಕ್ತಪಾತಕ್ಕೆ ಹಿಂಜರಿಯುವುದು ಮತ್ತು ನೂಲುವುದು, ಅಸ್ಪೃಶ್ಯತಾ ನಿವಾರಣೆ ಮುಂತಾದ ವಿಚಾರಗಳಿಗೆ ಒತ್ತು ನೀಡಿ ಚಳುವಳಿಯನ್ನು ಮಸುಕುಮಾಡಿಬಿಡಬಹುದಾದ ಒಬ್ಬ ವ್ಯಕ್ತಿಯಿಂದ ಅವರು ನಿಯಂತ್ರಿಸಲ್ಪಡಲು ಬಯಸುವುದಿಲ್ಲ." ಎಂದು ಪ್ರತಿಪಾದಿಸುತ್ತದೆ. ಮುಂದುವರೆದು, "ಸ್ವತಃ ವಲ್ಲಭಭಾಯ್ ಅವರೇ ಬಾಟಲಿ ಪ್ರಿಯರು ಮತ್ತು ಹಲವಾರು ವಿಚಾರಗಳಲ್ಲಿ ರಾಸ್ಪುಟಿನ್ ಥರದವರು" ಎಂಬ ಅತ್ಯಂತ ಮಾನಹಾನಿಕರವಾದ ಟೀಕೆ ಮಾಡುತ್ತದೆ.

೧೯೨೦ರ ದಶಕದ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರದ ಜೊತೆ ಸಹಕಾರಿಗಳಾಗಿದ್ದವರಲ್ಲಿ ಬ್ರಾಹ್ಮಣ ರೆವೆನ್ಯೂ ಅಧಿಕಾರಿಗಳು ಮತ್ತು ಗುಜರಾತ್‌ನ ಹೊರಗಿನಿಂದ ಕರೆತರಲಾಗಿದ್ದ ಬಾಡಿಗೆ ಗೂಂಡಾಗಳು ಕೂಡ ಇದ್ದರು. ಈಗ ೨೦೨೦ ರಲ್ಲಿ ಮೊದಲನೆಯದಾಗಿ ರೈತರನ್ನು ದಮನ ಮಾಡುವಲ್ಲಿ ಮತ್ತು ಎರಡನೆಯದಾಗಿ ಅವರ ಸಂದೇಶವನ್ನು ವಿಕೃತಗೊಳಿಸುವಲ್ಲಿ, ಅವರ ನಾಯಕರ ತೇಜೋವಧೆ ಮಾಡುವಲ್ಲಿ ಪೊಲೀಸರು ಮತ್ತು ಗೋಧಿ ಮಾಧ್ಯಮವು ವಸಾಹತೋತ್ತರ ಸರ್ಕಾರಕ್ಕೆ ಸಹಕಾರಿಗಳಾಗಿವೆ.

ವಾಸ್ತವದಲ್ಲಿ ರೈತರ ವಿರುದ್ಧ ಬಗೆಬಗೆಯ–ನೀರಿನ ಫಿರಂಗಿಗಳು, ರಸ್ತೆಗಳ ಮೇಲೆ ಲೋಹದ ಮುಳ್ಳುಗಳನ್ನು ಅಳವಡಿಸುವುದು, ಅಂತರ್ಜಾಲವನ್ನು ಬಂದ್ ಮಾಡುವುದು, ದ್ವೇಷಪೂರಿತ ಅಪಪ್ರಚಾರ – ದಮನಕಾರಿ ವಿಧಾನಗಳನ್ನು ಬಳಸುವ ವಿಚಾರದಲ್ಲಿ ಮೋದಿ–ಶಾ ಜೋಡಿಯ ಆಡಳಿತವು ಬಿಳಿಯರ ಆಳ್ವಿಕೆಯನ್ನೂ ಮೀರಿಸಿದೆ.

## ಸತ್ಯ ಮತ್ತು ಅಹಿಂಸೆಗಳ ದಾರಿ

ವಲ್ಲಭಭಾಯ್ ಪಟೇಲ್ ಅವರ ಮೊದಲಿನ ಜೀವನಚರಿತ್ರಕಾರ ನರಹರಿ ಪಾರಿಖ್ ಅವರು, "ಸತ್ಯಕ್ಕಾಗಿ ನಿಮ್ಮ ಸಕಲವನ್ನೂ ಕಳೆದುಕೊಳ್ಳಲು ಸಿದ್ಧರಾಗಿರುವ ನೀವು ಅಂತಿಮವಾಗಿ ಗೆಲ್ಲಲೇಬೇಕು ಎಂಬುದನ್ನು ಜ್ಞಾಪಿಸಿಕೊಳ್ಳಿ. ಅಧಿಕಾರಿಗಳೊಂದಿಗೆ ಕೈಜೋಡಿಸಿರುವ ಜನ ತಮ್ಮ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡಬೇಕು," ಎಂಬುದಾಗಿ ಪಟೇಲರು ಹೇಳಿದ್ದನ್ನು ಉಲ್ಲೇಖಿಸುತ್ತಾರೆ. ಗಾಂಧೀಜಿಯವರ ಒಬ್ಬ ಅನುಯಾಯಿಯಾಗಿ ಪಟೇಲರು ಅಂತಿಮವಾಗಿ ಸತ್ಯ ಮತ್ತು ಅಹಿಂಸೆಯ ಬಲಗಳು ಸರ್ಕಾರವು ವಾಸ್ತವವನ್ನು ಮನಗಾಣುವಂತೆ ಮಾಡುತ್ತವೆ ಎಂದು ನಂಬಿದ್ದರು. ಒಂದು ಭಾಷಣದಲ್ಲಿ ಅವರು "ಸರ್ಕಾರದ ಧೋರಣೆ ಬದಲಾದಾಗ ಮಾತ್ರ ಒಂದು ತೃಪ್ತಿಕರವಾದ ತೀರ್ಮಾನ ದೊರೆಯಬಲ್ಲದು, ಒಮ್ಮೆ ಹೃದಯ ಪರಿವರ್ತನೆಯಾದರೆ, ಈಗ ಸರ್ಕಾರದ ಕ್ರಮಗಳನ್ನು ಪ್ರೇರೇಪಿಸುತ್ತಿರುವ ಕಹಿ ಮತ್ತು ದ್ವೇಷಗಳ ಸ್ಥಾನದಲ್ಲಿ ಕರುಣೆ ಮತ್ತು ಸಹಾನುಭೂತಿಗಳು ಇರುತ್ತವೆ" ಎಂದು ಹೇಳುತ್ತಾರೆ.

ಬ್ರಿಟಿಷರಿಗಿಂತಲೂ ಈಗಿನ ಸರ್ಕಾರಕ್ಕೆ ಕರುಣೆ ಮತ್ತು ಸಹಾನುಭೂತಿಗಳು ದೂರ ಎಂಬುದನ್ನು ಹಿಂದಿನ ಅನುಭವಗಳು ತೋರಿಸಿಕೊಟ್ಟಿದ್ದರೂ ಇಂದಿನ ರೈತ ನಾಯಕರು ನಂಬಿಕೆಯ ಸ್ಫೂರ್ತಿಯಿಂದ ಉತ್ಸಾಹಭರಿತರಾಗಿಯೇ ಮುನ್ನಡೆದಿದ್ದಾರೆ.

ಈ ಅಂಕಣವನ್ನು ನಾನು, ೧೯೩೧ರಲ್ಲಿ ಸರ್ದಾರ್ ಪಟೇಲರು ಮಾಡಿದ ಕಾಂಗ್ರೆಸ್ ಸಮಾವೇಶದ ಅಧ್ಯಕ್ಷೀಯ ಭಾಷಣದ ಕೆಲ ಸಾಲುಗಳನ್ನು ಉಲ್ಲೇಖಿಸುವ ಮೂಲಕ ಮುಗಿಸುತ್ತೇನೆ. ಗಾಂಧೀಜಿಯವರಿಂದ ಮುನ್ನಡೆಸಲ್ಪಟ್ಟ ರಾಷ್ಟ್ರೀಯ ಆಂದೋಲನದ ಬಗ್ಗೆ ಮಾತನಾಡುತ್ತಾ ಅವರು "ಸಾಮೂಹಿಕವಾಗಿ ಪಾಲಿಸಲ್ಪಡುವ ಅಹಿಂಸಾ ತತ್ವವು ಈಗ ಒಬ್ಬ ದೃಷ್ಟಾರನ ಅನುಪಯುಕ್ತ ಕನಸಲ್ಲ ಅಥವಾ ಅದೊಂದು ಮಾನವೀಯ ಬಯಕೆ ಮಾತ್ರವಲ್ಲ ಎಂಬುದಕ್ಕೆ ಸ್ಪಷ್ಟವಾದ ಸಾಕ್ಷಿಯನ್ನು ಭಾರತವು ಜಗತ್ತಿನ ಎದುರು ಇರಿಸಿದೆ. ಈಗ ಒಂದು ಗೀಳಾಗಿ ಹೋಗಿರುವ ಹಿಂಸೆಯ ಭಾರದಿಂದ ನರಳಾಡುತ್ತಿರುವ ಮಾನವಕೋಟಿಯ ಪಾಲಿಗೆ ಇದೊಂದು ಅಮಿತ ಸಾಧ್ಯತೆಗಳನ್ನುಳ್ಳ ದೃಢವಾದ ವಾಸ್ತವ. ನಮ್ಮ ರೈತರು ಬಹಳ ಜನ ಸಂದೇಹವಾದಿಗಳ ಹೆದರಿಕೆಯನ್ನು ಸುಳ್ಳು ಮಾಡಿರುವರು. ನಮ್ಮ ಚಳುವಳಿ ಅಹಿಂಸಾತ್ಮಕವಾಗಿತ್ತು ಎಂಬುದಕ್ಕೆ ಇದೇ ಸಾಕ್ಷಿ. ಅಹಿಂಸಾತ್ಮಕ ಹೋರಾಟಕ್ಕಾಗಿ ಅವರನ್ನು ಸಂಘಟಿಸುವುದು ಬಹಳ ಕಷ್ಟ ಎಂದು ಹೇಳಲಾಗುತ್ತಿತ್ತು. ನಿರೀಕ್ಷೆಗೂ ಮೀರಿದ ಮಟ್ಟದ ಸಹನೆ ಮತ್ತು ಶೌರ್ಯಗಳೊಂದಿಗೆ ಈಗ ಪರೀಕ್ಷೆಯನ್ನು ಗೆದ್ದಿರುವುದು ಅವರೇ. ಈ ಹೋರಾಟದಲ್ಲಿ ಮಹಿಳೆಯರು ಮತ್ತು ಮಕ್ಕಳೂ ಕೂಡ ತಮ್ಮ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಅಂತಃಸ್ಫೂರ್ತಿಯಿಂದಲೇ ಅವರು ಕರೆಗೆ ಓಗೊಟ್ಟಿದ್ದಾರೆ ಮತ್ತು ಒಂದು ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಈ ಪಾತ್ರವನ್ನು ಸರಿಯಾಗಿ ಅರ್ಥೈಸಲು ಸಾಧ್ಯವಾಗದಷ್ಟು ನಾವು ಅದಕ್ಕೆ ಹತ್ತಿರವಿದ್ದೇವೆ. ಅಹಿಂಸೆಯನ್ನು ಉಳಿಸಿ ಅದರ ಪರಿಣಾಮವಾಗಿ ಚಳುವಳಿಯ ಯಶಸ್ಸಿನ ದೊಡ್ಡ ಪಾಲನ್ನು ಮಹಿಳೆಯರು ಮತ್ತು ಮಕ್ಕಳಿಗೆ ನೀಡುವುದು ತಪ್ಪಲ್ಲ ಎಂದು ನಾನು ಬಾವಿಸುವೆ."



ತುಸುವೂ ಸಹಾನುಭೂತಿ ಇಲ್ಲದ, ಬಹುಶಃ ಯಾವ ಲಕ್ಷ್ಯವೂ ಇಲ್ಲದ ಒಂದು ಆಡಳಿತದ ವಿರುದ್ಧ ೨೦೨೧ ರಲ್ಲಿ ಮತ್ತೊಮ್ಮೆ ರೈತರು ಘನತೆಯುಳ್ಳ ಮತ್ತು ದೃಢ ನಿರ್ಧಾರದ ಪ್ರತಿರೋಧವನ್ನು ತೋರುತ್ತಿರುವಾಗ ೧೯೩೧ರ ಈ ಮಾತುಗಳು ಮನಮುಟ್ಟುತ್ತವೆ.

**(ಲೇಖಕರು ಖ್ಯಾತ ಇತಿಹಾಸಕಾರರು ಮತ್ತು ರಾಜಕೀಯ ವಿಶ್ಲೇಷಕರು)**

(ಕನ್ನಡಕ್ಕೆ: **ಎಂ ರಾಜು** ಕೃಪೆ: ***ಜನತಾ,*** ಅಕ್ಟೋ. ೧೭, ೨೦೨೧)

## ಅಗಲಿದ ಹಿರಿಯ ಗಾಂಧಿವಾದಿ ಎಸ್.ಎನ್. ಸುಬ್ಬರಾವ್



ಕಳೆದ ಅಕ್ಟೋಬರ್ ೨೭ರಂದು ನಿಧನರಾದ ಹಿರಿಯ ಗಾಂಧಿವಾದಿ ಎಸ್.ಎನ್. ಸುಬ್ಬರಾವ್ ಅವರಿಗೆ 'ಹೊಸ ಮನುಷ್ಯ' ತನ್ನ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸಬಯಸುತ್ತದೆ.

೧೯೨೯ರ ಫೆಬ್ರುವರಿ ೭ರಂದು ಬೆಂಗಳೂರಿನಲ್ಲಿ ಜನಿಸಿದ್ದ ಸುಬ್ಬರಾಯರು ಶಾಲಾ ವಿದ್ಯಾರ್ಥಿಯಾಗಿದ್ದ ತಮ್ಮ ೧೩ನೇ ವಯಸ್ಸಿನಲ್ಲೇ ಗಾಂಧಿ ವಿಚಾರಗಳಿಂದ ಪ್ರಭಾವಿತರಾಗಿ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿ 'ದಸ್ತಗಿರಿ'ಯಾಗಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಗಮನ ಸೆಳೆದವರು. ನಂತರ ಚಿತ್ರದುರ್ಗದಲ್ಲಿ ಎನ್.ಎಸ್. ಹರ್ಡೀಕರರ ಬಳಿ ರಾಷ್ಟ್ರೀಯ ಸೇವಾದಳದ ಗರಡಿಯಲ್ಲಿ ಪಳಗಿ ರಾಷ್ಟ್ರಮಟ್ಟದಲ್ಲಿ ಗಾಂಧಿವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಗಾಂಧಿ ಶಾಂತಿ ಪ್ರತಿಷ್ಠಾನ ಸೇರಿದಂತೆ ಹಲವು ಗಾಂಧಿ ಸಂಸ್ಥೆಗಳ ಒಡನಾಟ ಬೆಳೆಸಿಕೊಂಡವರು.

೧೯೬೯ರಲ್ಲಿ ಗಾಂಧಿ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಆರಂಭಿಸಲಾದ 'ಗಾಂಧಿ ದರ್ಶನ' ಎಂಬ ವಿಶೇಷ ರೈಲು ಯಾತ್ರೆಯ ನಿರ್ದೇಶಕರಾಗಿದ್ದ ಅವರು ಆ ಮೂಲಕ ಗಾಂಧಿ ತತ್ವಗಳನ್ನು ದೇಶದ ಮೂಲೆಮೂಲೆಗೂ ತಲುಪಿಸುವ ಕೆಲಸ ಮಾಡಿದ್ದರು. ೧೯೭೦ರಲ್ಲಿ ಮಧ್ಯಪ್ರದೇಶದ ಚಂಬಲ್ ಕಣಿವೆಯ ಜೌರಾ ಎಂಬಲ್ಲಿ ಮಹಾತ್ಮ ಗಾಂಧಿ ಸೇವಾ ಆಶ್ರಮವೊಂದನ್ನು ಸ್ಥಾಪಿಸಿ ಖಾದಿ ಗ್ರಾಮೋದ್ಯೋಗ ಚಟುವಟಿಕೆಗಳ ಮೂಲಕ ಗಾಂಧೀ ಭಾರತದ ಚಹರೆಗಳನ್ನು ಕಾಪಾಡಿಕೊಳ್ಳುತ್ತಾ ಬಂದವರು. ೧೯೭೨ರಲ್ಲಿ ಸಮಾಜವಾದಿ ಮತ್ತು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣರು, ಚಂಬಲ್ ಕಣಿವೆಯ ಕುಖ್ಯಾತ ಢಕಾಯಿತರ ಶರಣಾಗತಿಯನ್ನು ಸಾಧ್ಯ ಮಾಡಿದಾಗ ಅವರೆಲ್ಲರ ಪುನರ್ವಸತಿಯ ಜವಾಬ್ದಾರಿ ವಹಿಸಿಕೊಂಡವರು ಈ ಸುಬ್ಬರಾಯರೇ. ೧೯೭೧ರಲ್ಲಿ ರಾಷ್ಟ್ರೀಯ *ಯುವ ಯೋಜನೆ* ಎಂಬ ಅಧ್ಯಯನ ಮತ್ತು ತರಬೇತಿ ಕಾರ್ಯಕ್ರಮವನ್ನು ಆರಂಭಿಸಿದ ಇವರು ಈ ಯೋಜನೆಯ ಮೂಲಕ ರಾಷ್ಟ್ರಾದ್ಯಂತ, ವಿಶೇಷವಾಗಿ ದೇಶದ ಈಶಾನ್ಯ ಭಾಗಗಳಲ್ಲಿ ಹಾಗೂ ಜಮ್ಮು–ಕಾಶ್ಮೀರಗಳಲ್ಲಿ ನೂರಾರು ಶಿಬಿರಗಳ ಮೂಲಕ ರಾಷ್ಟ್ರೀಯ ಐಕ್ಯತೆ ಮತ್ತು ಕೋಮು ಸೌಹಾರ್ದದ ಸಂದೇಶಗಳನ್ನು ಬಿತ್ತುವ ಮಹತ್ತರ ಕಾರ್ಯ ಮಾಡಿದರು.

ಸದಾ ಖಾದಿಧಾರಿಯಾಗಿ ಬಹುಮಟ್ಟಿಗೆ ರೈಲುಗಳಲ್ಲೆ ಸಂಚರಿಸುತ್ತಾ ಸರಳ ಜೀವನ ನಡೆಸುತ್ತಾ ತೊಂಬತ್ತು ವರ್ಷಗಳ ತುಂಬು ಸಾರ್ಥಕ ಜೀವನ ನಡೆಸಿದ ಸುಬ್ಬರಾಯರು ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಸೇರಿ ಹಲವು ಗೌರವಗಳಿಂದ ಪುರಸ್ಕೃತರಾಗಿದ್ದರು.

**–ಸಂಪಾದಕ**

**ಕನ್ನಡದ ಹಿರಿಯ ಜಾನಪದ ವಿದ್ವಾಂಸ, ಸಂಶೋಧಕ ಮತ್ತು ಅಧ್ಯಾಪಕ ಜ್ಯೋತಿ ಹೊಸೂರ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ. –ಸಂ**

ಕಥೆ

# ನಿವಾಳಿಸಿಟ್ಟ ಮೊಟ್ಟೆ

ಮೂಲ: ಚಿನುಆ ಅಚಿಬೆ
ಕನ್ನಡಕ್ಕೆ: ಚನ್ನಪ್ಪ ಕಟ್ಟಿ


ಕಲೆ : ಗುಜ್ಜಾರ್

**ಜೂ**ಲಿಯಸ್ ಓಬಿ ತನ್ನ ಟೈಪ್‌ರೈಟರ್ ಕಡೆಗೆ ದಿಟ್ಟಿಸಿ ನೋಡುತ್ತ ಕುಳಿತಿದ್ದ. ಅವನ ಬಾಸ್ ಧಡೂತಿ ದೇಹದ ಮುಖ್ಯ ಕ್ಲರ್ಕ್ ಟೇಬಲ್ ಬಳಿ ಕುಳಿತು ಗೊರಕೆ ಹೊಡೆಯುತ್ತಿದ್ದ. ಕಚೇರಿಯ ಹೊರ ಭಾಗದಲ್ಲಿ ಹಸಿರು ಯುನಿಫಾರ್ಮ್‌ನಲ್ಲಿದ್ದ ಗೇಟ್‌ಕೀಪರ್ ತೂಕಡಿಸುತ್ತಿದ್ದ. ನೀವು ಅವನನ್ನು ಬೈಯುವಂತಿಲ್ಲ. ಒಂದು ವಾರದಿಂದ ಯಾವುದೇ ಗಿರಾಕಿ ಆ ಗೇಟ್ ಮೂಲಕ ಹಾಯ್ದು ಒಳಗೆ ಬಂದಿರಲಿಲ್ಲ. ದೈತ್ಯಾಕಾರದ ತೂಕದ ಯಂತ್ರದ ಮೇಲೆ ಖಾಲಿ ಬುಟ್ಟಿ ಇತ್ತು. ಯಂತ್ರದ ಸುತ್ತಲಿನ ಧೂಳಿನಲ್ಲಿ ಪಾಮ್ ಬೀಜಗಳು ಅನಾಥವಾಗಿ ಬಿದ್ದಿದ್ದವು. ನೊಣಗಳ ಸಾಮ್ರಾಜ್ಯ ಮಾತ್ರ ಅಲ್ಲಿ ನಡೆದಿತ್ತು.

ಜ್ಯೂಲಿಯಸ್ ಎದ್ದು ಕಿಡಕಿಯ ಕಡೆಗೆ ಹೋಗಿ ನಿಜೆರ ನದಿಯ ದಡದ ಮೇಲೆ ಬೆಳೆದುನಿಂತ ಮಾರುಕಟ್ಟೆಯ ಕಡೆಗೆ ನೋಡುತ್ತ ನಿಂತ. ಈ ಮಾರುಕಟ್ಟೆಯನ್ನು ನುಕ್ವ ಮಾರುಕಟ್ಟೆ ಎಂದು ಕರೆಯಲಾಗುತ್ತದೆಯಾದರೂ ಈಗ ಈಕ್, ಓಯೆ ಮತ್ತು ಎಫೋ ಎನ್ನುವ ಹೆಸರುಗಳಿಂದಲೂ ಕರೆಯುತ್ತಾರೆ.(ಕಥೆಯ ಕೊನೆಯಲ್ಲಿರುವ ಟಿಪ್ಪಣಿ–೧ ನೋಡಿ) ನಾಗರಿಕತೆಯ ಪ್ರವೇಶದೊಂದಿಗೆ ಈ ಊರು ಪಾಮ್ ಆಯಿಲ್‌ನ ರೇವುಪಟ್ಟಣವಾಗಿ ಬೆಳೆದ ನಂತರ ಈ ಹೆಸರಿನ ಮಾರುಕಟ್ಟೆಗಳು ಹೆಚ್ಚುವರಿಯಾಗಿ ಬಂದವುಗಳಾಗಿವೆ. ವಾರದ ನಾಲ್ಕೂ ದಿವಸಗಳಂದು ಸಂತೆ ನಡೆಯುತ್ತದೆಯಾದರೂ ನುಕ್ವ ದಿನದ ಸಂತೆಯು ಅತ್ಯಂತ ಭರಾಟೆಯಿಂದ ಕೂಡಿರುತ್ತದೆ. ಯಾಕೆಂದರೆ ಆ ಊರಿನ ಅಧಿದೇವತೆಯಾದವಳು ಅನಾದಿ ಕಾಲದಿಂದಲೂ ಆ ದಿನದಂದೇ ಬಂದು ಆ ಊರನ್ನು ತನ್ನ ಮಾಂತ್ರಿಕ ಶಕ್ತಿಯಿಂದ ಆಶೀರ್ವದಿಸುತ್ತಾಳೆ. ಆಸೆಗೆ ಬಿದ್ದ ಜನ ಬೇಕಾದಷ್ಟು ದಿನಗಳಂದು ಸಂತೆಯನ್ನು ಮಾಡಲಿ, ಅವಳು ಮಾತ್ರ ಆ ದಿನದಂದೇ ಆಶೀರ್ವದಿಸುತ್ತಾಳೆ. ಅವಳು ಮುದುಕಿಯ ರೂಪದಲ್ಲಿ ಬರುತ್ತಾಳೆ ಎಂದು ಅವರು ನಂಬಿದ್ದಾರೆ. ಕೋಳಿ ಕೂಗುವ ಮುನ್ನ, ಸಂತೆ ಜಾಗೆಯ ಮಧ್ಯದಲ್ಲಿ ಬಂದು ನಿಂತು ಅವಳು ತನ್ನ ಮಾಂತ್ರಿಕ ಚಾಮರವನ್ನು ನಾಲ್ಕೂ ದಿಕ್ಕಿಗೆ ಬೀಸುತ್ತಾಳೆ. ಮುಂಭಾಗಕ್ಕೆ, ಹಿಂಭಾಗಕ್ಕೆ, ಬಲಭಾಗಕ್ಕೆ ಮತ್ತು ಎಡಭಾಗಕ್ಕೆ ಚಾಮರ ಬೀಸಿ ದೂರದೂರಿನ ಗಂಡು ಹೆಣ್ಣುಗಳು ಸಂತೆಗೆ ಬರುವಂತೆ ಸೆಳೆಯುತ್ತಾಳೆ. ಜನರು ತಮ್ಮ ಭೂಮಿಯಲ್ಲಿ ಬೆಳೆದ ಉತ್ಪನ್ನಗಳಾದ ಪಾಮ್ ಎಣ್ಣೆ, ಪಾಮ್ ಬೀಜಗಳು, ಕೋಲಾ ಬೀಜಗಳು, ಮರಗೆಣಸು, ಹೆಣೆದ ಚಾಪೆಗಳು, ಬುಟ್ಟಿಗಳು ಹಾಗೂ ಮಣ್ಣಿನ ಮಡಿಕೆಗಳನ್ನು ತೆಗೆದುಕೊಂಡು ಇಲ್ಲಿಗೆ ಬರುತ್ತಾರೆ. ಪ್ರತಿಯಾಗಿ ಬಣ್ಣದ ಬಟ್ಟೆಗಳು, ಹೊಗೆಯಾಡಿಸಿದ ಮೀನು, ಲೋಹದ ತಟ್ಟೆಗಳು ಮತ್ತು ಲೋಹದ ಪಾತ್ರೆಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹೀಗೆ ಬರುವವರು ಕಾಡುವಾಸಿ ಜನರು. ಹಿರಿದಾದ ನದಿಗಳ ದಂಡೆಯ ಮೇಲೆ ವಾಸಿಸುವ ಇನ್ನೊಂದಿಷ್ಟು ಜನರೂ ಸಂತೆಗೆ ಬರುತ್ತಾರೆ. ಅವರು ಸುವರ್ಣಗಡ್ಡೆ ಮತ್ತು ಮೀನುಗಳನ್ನು ತೆಗೆದುಕೊಂಡು ದೋಣಿಯಲ್ಲಿ ಬರುತ್ತಾರೆ. ಕೆಲವೊಮ್ಮೆ ದೊಡ್ಡ ದೋಣಿಯನ್ನು ತೆಗೆದುಕೊಂಡು ಒಂದು ಡಜನ್ನಿನಷ್ಟು ಒಂದೊಂದು ಸಾರಿ ಅದಕ್ಕೂ ಅಧಿಕ ಸಂಖ್ಯೆಯ ಜನರು ಬರುತ್ತಾರೆ. ಕೆಲವೊಮ್ಮೆ ಒಬ್ಬನೇ ಒಬ್ಬ ಮೀನುಗಾರ ತನ್ನ ಮಡದಿಯೊಂದಿಗೆ ಚಿಕ್ಕ ದೋಣಿಯಲ್ಲಿ ಭರದಿಂದ ಹರಿಯುವ ಅನಂಬರ ನದಿಯನ್ನು ದಾಟಿ ಬರುತ್ತಾನೆ. ಹಾಗೆ ಬಂದವರೆಲ್ಲ ತಮ್ಮ ದೋಣಿಗಳಿಗೆ ನದಿಯ ದಂಡೆಯಲ್ಲಿ ಲಂಗರು ಹಾಕಿ ನಿಲ್ಲಿಸುತ್ತಾರೆ. ಅವರು ತಾವು ತಂದ ಮೀನುಗಳನ್ನು ಬಹಳಷ್ಟು ಚೌಕಾಸಿಯ ನಂತರ ಮಾರಾಟ ಮಾಡುತ್ತಾರೆ. ಮೀನುಗಾರನ ಹೆಂಡತಿ ನದಿಯ ದಿಬ್ಬಿಯನ್ನು ಏರಿ ಸಂತೆಯ ಕೇಂದ್ರದ ಭಾಗಕ್ಕೆ ಬಂದು ಉಪ್ಪು ಎಣ್ಣೆ ಕೊಳ್ಳುತ್ತಾಳೆ. ಧಾರಣೆ ಘಟಾಯಿಸಿದರೆ ಒಂದು ಮೀಟರ್ ಬಟ್ಟೆಯನ್ನೂ ಖರೀದಿಸುತ್ತಾಳೆ. ಅವರೆಕಾಳುಗಳಿಂದ ತಯಾರಿಸಿದ ಕೇಕ್ ಮತ್ತು ಇಗಾರಾ ಮಹಿಳೆಯರು ತಯಾರಿಸಿದ ಮಾಯಿ ಮಾಯಿ ತಿನಿಸನ್ನು ತನ್ನ ಮಕ್ಕಳಿಗಾಗಿ ಖರೀದಿಸುತ್ತಾಳೆ. ಸಂಜೆಯಾಗುತ್ತಿದ್ದಂತೆ ಅವರು ತಮ್ಮ ತಮ್ಮ ಹುಟ್ಟುಗಳನ್ನು ತೆಗೆದುಕೊಂಡು ಮಿನುಗುವ ನದಿಯ ನೀರಿನ ಮೇಲೆ ತಮ್ಮ ತಮ್ಮ ದೋಣಿಗಳನ್ನು ನಡೆಯಿಸುತ್ತ ಹೋಗುತ್ತಾರೆ. ಹಾಗೆ ಹೊರಟ ದೋಣಿಗಳು ದೂರ ದೂರ ತೇಲುತ್ತ ನದಿ ನೀರಿನ ಮುಖದ ಮೇಲೆ ಕಪ್ಪು ಚಂದ್ರಾಕೃತಿಯ ರೂಪ ಪಡೆಯುತ್ತವೆ. ದೂರದಲ್ಲಿ ನದಿ ಮೇಲಿನ ದೋಣಿ ಹಾಗೂ ಅದರ ನೀರಿನಲ್ಲಿ ಕಾಣುವ ಅದರ ಬಿಂಬ ಸೇರಿ ಎರಡೆರಡು ದೋಣಿಗಳು ಹಿಂದಕ್ಕೆ ಮುಂದಕ್ಕೆ ಚಲಿಸುತ್ತಿರುವಂತೆ ಕಾಣಿಸುತ್ತದೆ. ಆಗಿನ ಕಾಲದಲ್ಲಿ ಉಮರು ಎನ್ನುವ ಈ ಊರು ಇಗ್ಬೊ ಮತ್ತು ಓಲು ಜನರು ಸೇರುವ ಜಾಗೆಯಾಗಿತ್ತು. ಕಾಡಿನಿಂದ ಬಂದವರನ್ನು ಇಗ್ಬೊ ಎಂದು ಕರೆಯುತ್ತಿದ್ದರು. ಈ ಇಗ್ಬೊ ಜನರು ನದಿಯಾಚೆಯಿಂದ ಬಂದ ಜನರನ್ನು ಓಲು ಎಂದು ಕರೆಯುತ್ತಿದ್ದರು. ಈ ಎರಡೂ ಪಂಗಡಗಳ ಆಚೆಯೂ ಜಗತ್ತು ಅಪರಿಮಿತವಾಗಿ ಚಾಚಿಕೊಂಡಿತ್ತು.

ಜ್ಯೂಲಿಯಸ್ ಓಬಿಯು ಉಮರು ಊರಿನವನಾಗಿರಲಿಲ್ಲ. ಅನೇಕ ಜನರು ಈ ಊರಿಗೆ ಬಂದಿರುವಂತೆ ಅವನು ಕುರುಚಲು ಕಂಟಿಗಳ ನಡುಗಡ್ಡೆಯಂತಹ ಹಳ್ಳಿಯಿಂದ ಬಂದಿದ್ದಾನೆ. ಮಿಶನ್ ಶಾಲೆಯಲ್ಲಿ ಆರನೆಯ ತರಗತಿವರೆಗೆ ಓದಿಕೊಂಡಿದ್ದ ಅವನು ಉಮರು ಊರಿನಲ್ಲಿ ಸ್ಥಾಪಿತವಾಗಿರುವ ಯುರೋಪಿಯನ್ ಕಂಪನಿಯ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಆ ಕಂಪನಿಯವರು ತಮ್ಮ ಮನಸ್ಸಿಗೆ ಬಂದ ದರದಲ್ಲಿ ಪಾಮ್ ಬೀಜಗಳನ್ನು ಖರೀದಿಸುತ್ತಾರೆ ಮತ್ತು ಹಾಗೆಯೆ ತಮ್ಮ ಮನಸ್ಸಿಗೆ ಬಂದ ದರದಲ್ಲಿ ಬಟ್ಟೆ ಮತ್ತು ಲೋಹದ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಅವರು ತಮ್ಮ ಕಚೇರಿಯನ್ನು ಮಾರುಕಟ್ಟೆಯ ಸಮೀಪದಲ್ಲಿಯೇ ಸ್ಥಾಪಿಸಿರುವುದರಿಂದ ಜ್ಯೂಲಿಯಸ್ ಪ್ರಾರಂಭಿಕ ಎರಡು ಮೂರು ವಾರಗಳಲ್ಲಿಯೇ ಬಿರುಸಿನ ಚಟುವಟಿಕೆಗಳ ಮಧ್ಯದಲ್ಲಿಯೂ ಹೇಗೆ ಕೆಲಸ ಮಾಡಬೇಕೆಂಬುದನ್ನು ಕಲಿತುಕೊಂಡ. ಕಚೇರಿಯ ಮುಖ್ಯ ಕ್ಲರ್ಕ್ ಬೇರೆ ಕೆಲಸದ ನಿಮಿತ್ಯ ಹೊರಗೆ ಹೋದಾಗ ಕೆಲವೊಮ್ಮೆ ಕಿಡಕಿಯವರೆಗೆ ಬಂದು ನಿಂತು ಹುತ್ತದಲ್ಲಿ ಬುದುಗುಡುತ್ತ ಚಲಿಸುವ ಇರುವೆಗಳ ಹಾಗೆ ಕಾಣುವ ಜನರನ್ನು ನೋಡುತ್ತ ನಿಲ್ಲುತ್ತಿದ್ದ. ಹಿಂದಿನ ದಿವಸ ಏನೂ ಗದ್ದಲವಿಲ್ಲದಂತೆ ಇರುತ್ತಿದ್ದ ಆ ಜಾಗೆ ಸಂತೆಯ ದಿವಸ ತುಂಬಿ ಹೋಗುವದನ್ನು ಅವನು ಗಮನಿಸುತ್ತಿದ್ದ. ಈ ಮಾರುಕಟ್ಟೆಗೆ ಜಗತ್ತಿನ ಬೇರೆ ಬೇರೆ ಭಾಗಗಳಿಂದ ವಾರವಾರವೂ ಬರಲಿರುವ ಇನ್ನೂ ಇನ್ನೂ ಜನರು ಇದ್ದಾರೆ ಅನ್ನಿಸುತ್ತಿತ್ತು ಅವನಿಗೆ. ಈ ಮಾರುಕಟ್ಟೆಗೆ ಬರುವವರೆಲ್ಲ ಮನುಷ್ಯರೇ ಎಂದು ಆ ಊರಿನ ಜನರು ಭಾವಿಸುವುದಿಲ್ಲ. ಒಂದು ಸಾರಿ ಅವನ ಪ್ರೇಯಸಿಯಾದ ಜೆನೆಟ್‌ಳ ತಾಯಿ ಮಾ ಕೂಡಾ ಹಾಗೆಯೇ ಹೇಳಿದ್ದಳು–

'ಈ ಮಾರುಕಟ್ಟೆಯಲ್ಲಿ ಜನರ ನೂಕು ನುಗ್ಗಲಿನಲ್ಲಿ ತಳ್ಳಿಸಿಕೊಂಡು ಒತ್ತಿಸಿಕೊಂಡು ಬರುವ ಹರೆಯದ ಚೆಂದನೆಯ ಹೆಂಗಸರೆಲ್ಲ ನಿನ್ನ ನನ್ನಂತೆ ಸಹಜ ಮನುಷ್ಯರಲ್ಲ. ಅವರೆಲ್ಲ ನೀರಿನ ಆಳದಲ್ಲಿರುವ ನಗರಗಳಿಂದ ಬರುವ ಮಮ್ಮಿ ವೊಟಾಗಳು. (ಕೊನೆಯಲ್ಲಿರುವ ಟಿಪ್ಪಣಿ–೨ ನೋಡಿ) ನೀನು ಅವರನ್ನು ಮಹಾ ಚೆಲುವೆಯರು ಎಂದು ಬೇಕಾದರೆ ಕರೆಯಬಹುದು. ಅವರ ಚೆಲುವು ಪರಿಪೂರ್ಣವಾದುದು ಮತ್ತು ತಣ್ಣಗೆ ಇರುವಂತಹುದಾಗಿದೆ. ಕಣ್ಣಂಚಿನಲ್ಲಿ ಹೊಳೆಯುವ ಆ ಚೆಲುವೆಯನ್ನು ನೋಡಿ ನೀನು ಇನ್ನಷ್ಟು ಕಣ್ಣು ತುಂಬಿಕೊಳ್ಳಬೇಕು ಎಂದು ಕಣ್ಣು ರೆಪ್ಪೆ ಬಡಿಯುವಷ್ಟರಲ್ಲಿ ಅವಳು ಗುಂಪಿನಲ್ಲಿ ಮಾಯವಾಗಿ ಬಿಟ್ಟಿರುತ್ತಾಳೆ.'

ಜ್ಯೂಲಿಯಸ್ ಕಿಡಕಿಯ ಬದಿಗೆ ನಿಂತು ಇದನ್ನೆಲ್ಲ ನೆನಪಿಸಿಕೊಳ್ಳುತ್ತ ಮೌನವಾಗಿ ಮಾರುಕಟ್ಟೆಯ ಕಡೆಗೆ ನೋಡುತ್ತ ನಿಂತಿದ್ದ. ಅದು ಖಾಲಿ ಖಾಲಿಯಾಗಿರುವುದನ್ನು ಅವನು ಗಮನಿಸಿದ. ಸದಾ ಗೌಜು ಗದ್ದಲಗಳಿಂದ ತುಂಬಿ ತುಳುಕುತ್ತಿದ್ದ ಈ ಮಾರುಕಟ್ಟೆ ಹೀಗೆ ಹಿಂಡಿ ಹಿಪ್ಪಿಯಾದಂತೆ ಖಾಲಿಯಾಗಿಬಿಡುತ್ತದೆ ಎಂದು ಯಾರು ನಂಬಲು ಸಾಧ್ಯ?

ಇಷ್ಟು ಸಾಕಾಗಲಿಲ್ಲವೆನ್ನುವಂತೆ ಶಾಲೆಗಳು ಮತ್ತು ಚರ್ಚುಗಳ ಪ್ರೇರಣೆಯಿಂದ ಈ ಊರಿನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಹೊರಗಿನಿಂದ ಬಂದ ಜನರ ಹಾಗೆ ಬೇಜವಾಬ್ದಾರಿಯಿಂದ ನಡೆದುಕೊಳ್ಳತೊಡಗಿದರು. ಅವರು ತಮ್ಮ ಹಳೆಯ ಹೊಣೆಗಾರಿಕೆಯನ್ನು ನಿರ್ಲಕ್ಷ್ಯ ಮಾಡಿದರು. ಮೋಜು ಮಸ್ತಿಗಳಲ್ಲಿ ತೊಡಗಿದರು.

ಊರಿನ ಸ್ಥಿತಿ ಹೀಗಿರುವಾಗ ಕಿಟಿಕ್ವಾ ಎನ್ನುವ ಸಿಡುಬು ರೋಗ ಇದನ್ನೆಲ್ಲ ನೋಡಲು ಎಂಬಂತೆ ಬಂದಿತು. ಈ ಊರಿನ ದೇವತೆಗಳಿಗೆ ಮಣ್ಣಿನ ಮಕ್ಕಳು ಬಲಿಯ ಮೂಲಕ ಋಣಸಂದಾಯ ಮಾಡಬೇಕೆಂಬ ಬೇಡಿಕೆಯನ್ನು ಇಡಲು ಬಂದಿತು. ತಾನು ಜನರಲ್ಲಿ ಭೀತಿಯನ್ನು ಹುಟ್ಟಿಸಬಲ್ಲೆ ಎನ್ನುವ ಆತ್ಮವಿಶ್ವಾಸದೊಂದಿಗೆ ಆ ಸಿಡುಬು ಬಂದಿತು. ಅದು ಕೇಡಿನ ದೇವತೆಯಾಗಿತ್ತು. ತಾನು ಸೃಷ್ಟಿಸಬಲ್ಲ ಕೇಡಿನ ಬಗೆಗೆ ಅದು ಜಂಬ ಕೊಚ್ಚಿಕೊಳ್ಳುತ್ತಿತ್ತು. ಸಿಡುಬು ರೋಗಕ್ಕೆ ಬಲಿಯಾದವರು ಮನ ನೊಂದುಕೊಳ್ಳದಿರಲಿ ಎಂದು ಅದು ತಾನು ಬಲಿ ತೆಗೆದುಕೊಳ್ಳಲಿರುವ ವ್ಯಕ್ತಿಯ ಮನೆಗೆ ಅಲಂಕಾರ ಮಾಡುತ್ತಿತ್ತು.

ಆದರೆ ಎರಗಿ ಬಂದಿರುವ ಸಿಡುಬು ರೋಗದ ಶಕ್ತಿಯೇ ಅಷ್ಟು ಭೀಕರವಾದುದು. ಸಿಡುಬು ರೋಗದಂತಹ ದೈವಕ್ಕೆ ಮಾತ್ರ ಈ ಮಾರುಕಟ್ಟೆಗೆ ಬರುವ ಜನರನ್ನು ಬಳಿದು ಹಾಕುವ ಶಕ್ತಿ ಮತ್ತು ಇಡೀ ಮಾರುಕಟ್ಟೆಯನ್ನು ನೊಣಗಳ ಆಧಿಪತ್ಯಕ್ಕೆ ಬಿಟ್ಟುಕೊಡುವ ಶಕ್ತಿ ಇದೆ.

ಉಮರು ಒಂದು ಕಾಲದಲ್ಲಿ ಚಿಕ್ಕ ಹಳ್ಳಿಯಾಗಿದ್ದಾಗ ನುಕ್ವ ಮಾರುಕಟ್ಟೆಯ ದಿನದಂದು ಮಾರುಕಟ್ಟೆಯನ್ನು ಬಡ ಶಾಲಾ ಹುಡುಗನೊಬ್ಬ ಕಸಗುಡಿಸಿ ಸ್ವಚ್ಛಗೊಳಿಸುತ್ತಿದ್ದ. ಆದರೆ ಇಂದು ಅದು ಅಭಿವೃದ್ಧಿ ಆಗುತ್ತ ಆಗುತ್ತ ಈ ಹಳ್ಳಿಯು ಸದಾ ಚಟುವಟಿಕೆಗಳಿಂದ ತುಂಬಿದ, ವಿಸ್ತಾರವಾಗಿ ಹರಡಿಕೊಂಡ, ಗದ್ದಲದ ಗೂಡಾದ ಮತ್ತು ಕೊಳಕು ಕೊಳಕಾದ ರೇವುಪಟ್ಟಣವಾಗಿ ಪರಿವರ್ತನೆಯಾಗಿದೆ. ಅಪರಿಚಿತರು ಬಂದು ಸೇರುವ ಈ 'ನೋ ಮ್ಯಾನ್ಸ್ ಲ್ಯಾಂಡ್'ನಲ್ಲಿ ಸ್ಥಳೀಯ ಮಣ್ಣಿನ ಮಕ್ಕಳಿಗಿಂತ ಹೊರಗಿನಿಂದ ಬಂದವರ ಸಂಖ್ಯೆಯೇ ಜಾಸ್ತಿಯಾಗಿದೆ. ಸ್ಥಳೀಯರಿಗೆ, ತಾವು ಸಲ್ಲಿಸಿದ ಪ್ರಾರ್ಥನೆಯ ಫಲವು ಹೀಗೆ ತಿರುವು ಮುರುವಾಗಿರುವ ಕುರಿತು ತಲೆ ಅಲ್ಲಾಡಿಸುವುದನ್ನು ಬಿಟ್ಟರೆ ಬೇರೇನನ್ನೂ ಮಾಡಲು ಬರದಂತಾಗಿದೆ. ತಮ್ಮ ಊರು ಬೆಳೆಯಲಿ ಮತ್ತು ಸಮೃದ್ಧಿ ಹೊಂದಲಿ ಎಂದು ಅವರು ಪ್ರಾರ್ಥಿಸಿದ್ದು ನಿಜ. ಅವರ ಪ್ರಾರ್ಥನೆಯಂತೆ ಊರು ಬೆಳೆಯಿತು ಕೂಡಾ. ಆದರೆ ಬೆಳವಣಿಗೆಯಲ್ಲಿ ಒಳ್ಳೆಯ ಬೆಳವಣಿಗೆ ಮತ್ತು ಕೆಟ್ಟ ಬೆಳವಣಿಗೆಗಳು ಇರುತ್ತವೆ. ನಮ್ಮ ಹೊಟ್ಟೆ ನಾವು ತಿನ್ನುವ ಆಹಾರ ಮತ್ತು ಕುಡಿಯುವ ದ್ರವದಿಂದ ಮಾತ್ರ ಉಬ್ಬುವುದಿಲ್ಲ. ಉಬ್ಬುವಿಕೆ ಅಸಹನೀಯವಾದ ರೋಗದ ಲಕ್ಷಣವೂ ಆಗಿರಬಹುದು. ಅದು ಸಾಯುವ ವಯಸ್ಸಿಗಿಂತ ಮುಂಚೆಯೇ ನಮ್ಮನ್ನು ಗೋರಿಗೆ ಕಳುಹಿಸಿಬಿಡಬಹುದು.

ಉಮರುವಿಗೆ ಹೊರಗಿನಿಂದ ಬಂದವರು ವ್ಯಾಪಾರ ಮತ್ತು ಹಣ ಮಾಡಲು ಬಂದವರಾಗಿದ್ದರು. ಅವರೇನು ಊರು ಉದ್ಧಾರ ಮಾಡಲು ಬಂದವರಲ್ಲ. ಅವರ ಉದ್ಧಾರದ ಕೆಲಸಗಳು ಅವರ ನಿಜವಾದ ಮೂಲ ಊರುಗಳಲ್ಲಿ ಸಾಕಷ್ಟಿದ್ದವು.

ಇಷ್ಟು ಸಾಕಾಗಲಿಲ್ಲವೆನ್ನುವಂತೆ ಶಾಲೆಗಳು ಮತ್ತು ಚರ್ಚುಗಳ ಪ್ರೇರಣೆಯಿಂದ ಈ ಊರಿನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಹೊರಗಿನಿಂದ ಬಂದ ಜನರ ಹಾಗೆ ಬೇಜವಾಬ್ದಾರಿಯಿಂದ ನಡೆದುಕೊಳ್ಳತೊಡಗಿದರು. ಅವರು ತಮ್ಮ ಹಳೆಯ ಹೊಣೆಗಾರಿಕೆಯನ್ನು ನಿರ್ಲಕ್ಷ್ಯ ಮಾಡಿದರು. ಮೋಜು ಮಸ್ತಿಗಳಲ್ಲಿ ತೊಡಗಿದರು.

ಊರಿನ ಸ್ಥಿತಿ ಹೀಗಿರುವಾಗ ಕಿಟಿಕ್ವಾ ಎನ್ನುವ ಸಿಡುಬು ರೋಗ ಇದನ್ನೆಲ್ಲ ನೋಡಲು ಎಂಬಂತೆ ಬಂದಿತು. ಈ ಊರಿನ ದೇವತೆಗಳಿಗೆ ಮಣ್ಣಿನ ಮಕ್ಕಳು ಬಲಿಯ ಮೂಲಕ ಋಣಸಂದಾಯ ಮಾಡಬೇಕೆಂಬ ಬೇಡಿಕೆಯನ್ನು ಇಡಲು ಬಂದಿತು. ತಾನು ಜನರಲ್ಲಿ ಭೀತಿಯನ್ನು ಹುಟ್ಟಿಸಬಲ್ಲೆ ಎನ್ನುವ ಆತ್ಮವಿಶ್ವಾಸದೊಂದಿಗೆ ಆ ಸಿಡುಬು ಬಂದಿತು. ಅದು ಕೇಡಿನ ದೇವತೆಯಾಗಿತ್ತು. ತಾನು ಸೃಷ್ಟಿಸಬಲ್ಲ ಕೇಡಿನ ಬಗೆಗೆ ಅದು ಜಂಬ ಕೊಚ್ಚಿಕೊಳ್ಳುತ್ತಿತ್ತು. ಸಿಡುಬು ರೋಗಕ್ಕೆ ಬಲಿಯಾದವರು ಮನನೊಂದುಕೊಳ್ಳದಿರಲಿ ಎಂದು ಅದು ತಾನು ಬಲಿ ತೆಗೆದುಕೊಳ್ಳಲಿರುವ ವ್ಯಕ್ತಿಯ ಮನೆಗೆ ಅಲಂಕಾರ ಮಾಡುತ್ತಿತ್ತು. ಆ ಕಾರಣಕ್ಕಾಗಿ ಈ ಊರಿನಲ್ಲಿ ಸಿಡುಬು ರೋಗ ಬಂದು ವ್ಯಕ್ತಿಯೊಬ್ಬ ಸತ್ತರೆ ಅವನಿಗಾಗಿ ಯಾರೂ ರೋದಿಸುವ ಹಾಗಿಲ್ಲ. ಸಿಡುಬು ತನ್ನ ಆಗಮನದ ಮೂಲಕ ನೆರೆಹೊರೆಯ ಜನರು ಮತ್ತು ನೆರೆ ಹಳ್ಳಿಯ ಜನರು ಈ ಊರಿಗೆ ಬಂದು ಹೋಗದ ಹಾಗೆ ತಡೆಯೊಡ್ಡಿತು. 'ಆ ಊರಿಗೆ ಸಿಡುಬು ಬಂದಿದೆ' ಎಂದು ಜನರು ಮಾತನಾಡಿಕೊಳ್ಳಲು ಪ್ರಾರಂಭಿಸಿದರು. ತಕ್ಷಣವೇ ನೆರೆ ಹೊರೆಯವರ ಸಂಚಾರ ನಿಂತು ಹೋಯಿತು.

ಜ್ಯೂಲಿಯಸ್, ತಾನು ಮದುವೆಯಾಗಲಿರುವ ಜೆನೆಟ್‌ಳನ್ನು ಒಂದು ವಾರದಿಂದ ಭೆಟ್ಟಿಯಾಗಲು ಸಾಧ್ಯವಾಗದ ಕಾರಣದಿಂದ ದುಃಖಿತನಾಗಿದ್ದ ಹಾಗೂ ವ್ಯಾಕುಲಗೊಂಡಿದ್ದ. ಜೆಹೋವಾ ದೇವರ ಶಕ್ತಿಯಿಂದ ಈಗ ಬಂದಿರುವ ಸಿಡುಬು ರೋಗವು ದೂರವಾಗುವವರೆಗೆ ಹೊರಗೆ ಬಂದು ಜನರೊಂದಿಗೆ ಬೆರೆಯಬೇಡವೆಂದು ಜೆನೆಟ್‌ಳ ತಾಯಿ ಮಾ ಅವನಿಗೆ ನಯವಾಗಿ ವಿವರಿಸಿ ಹೇಳಿದ್ದಳು. (ಮಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಶ್ರದ್ಧಾಳುವಾಗಿದ್ದಳು. ಸಿಎಮ್‌ಎಸ್ ಚರ್ಚಿನ ಗಾಯಕರ ತಂಡದಲ್ಲಿ ಜ್ಯೂಲಿಯಸ್‌ನು ಹಾಡುವುದನ್ನು ನೋಡಿದ ಮಾ ತನ್ನ ಮಗಳು ಅವನನ್ನು ಮದುವೆಯಾಗುವುದಕ್ಕೆ ಒಪ್ಪಿಗೆ ನೀಡಿದ್ದಳು.)

'ನೀನು ನಿನ್ನ ಕೋಣೆಯನ್ನು ಬಿಟ್ಟು ಹೊರಗೆಲ್ಲೂ ಹೋಗಬೇಡ,' ಮೆಲ್ಲನೆಯ ಧ್ವನಿಯಲ್ಲಿ ಅವಳು ಹೇಳಿದ್ದಳು. ಯಾಕೆಂದರೆ ಯಾವುದೇ ತೆರನಾದ ಗದ್ದಲ ಮತ್ತು ಅಬ್ಬರವೆಂದರೆ ಸಿಡುಬು ರೋಗಕ್ಕೆ ಆಗಿಬರುವುದಿಲ್ಲ. 'ಓಣಿಯಲ್ಲಿ ತಿರುಗಾಡುವಾಗ ನೀನು ಯಾರನ್ನು ಭೆಟ್ಟಿಯಾಗುವೆಯೋ ನಿನಗೇ ಗೊತ್ತಿಲ್ಲ. ಅಲ್ಲಿ ಕಾಣುತ್ತದೆಯಲ್ಲಾ, ಆ ಮನೆಯವರಿಗೆ ಸಿಡುಬು ರೋಗ ಬಂದಿದೆ,' ಅವಳು ಧ್ವನಿಯನ್ನು ಇನ್ನೂ ಕೆಳಗೆ ಇಳಿಸಿ ಆ ಮನೆಯ ಕಡೆಗೆ ಆತಂಕದಿಂದ ಕೈಮಾಡಿ ತೋರಿಸಿದಳು. ಆ ಮನೆ ರಸ್ತೆಯ ಆ ಬದಿಗೆ ಇತ್ತು. ಆ ಮನೆಯ ಬಾಗಿಲಿಗೆ ಪಾಮ್ ಮರದ ಹಳದಿ ಗರಿಗಳನ್ನು ಇಟ್ಟು ನಿರ್ಬಂಧಿಸಲಾಗಿತ್ತು. 'ಆ ಸಿಡುಬು ದೇವತೆಯಾದ ಕಿಟಿಕ್ವಾ ಈಗಾಗಲೇ ಒಂದು ಮನೆಯನ್ನು ಹಾಗೆ ಅಲಂಕರಿಸಿದ್ದಾನೆ. ಆ ಮನೆಯ ಸುತ್ತಲಿನವರನ್ನು ಸರಕಾರಿ ಲಾರಿಗಳಲ್ಲಿ ತುಂಬಿ ಇಂದು ದೂರ ಸಾಗಿಸಲಾಗಿದೆ.'

***

ಜೆನೆಟ್ ಜ್ಯೂಲಿಯಸ್‌ನೊಂದಿಗೆ ಒಂದಿಷ್ಟು ದಾರಿ ಕ್ರಮಿಸಿ ನಿಂತಳು. ಅವನೂ ಅಲ್ಲಿಯೇ ನಿಂತ. ಮಾತನಾಡಲು ಯಾವುದೇ ವಿಷಯಗಳು ಉಳಿದಿರಲಿಲ್ಲವಾದರೂ ಅವರಿಬ್ಬರು ಒಂದಿಷ್ಟು ಕಾಲಹರಣ ಮಾಡಿದರು. ನಂತರ ಅವಳು ಅವನಿಗೆ ಶುಭರಾತ್ರಿ ಕೋರಿದಳು. ಅವನೂ ಶುಭರಾತ್ರಿ ಕೋರಿದ. ಅವರು ಒಬ್ಬರಿಗೊಬ್ಬರು ಕೈ ಕುಲುಕಿದರು. ಹಾಗೆ ಕುಲುಕುವುದು ಅತ್ಯಂತ ವಿಲಕ್ಷಣವಾದುದಾಗಿತ್ತು. ಹೀಗೆ ವಿದಾಯ ಹೇಳುವುದು ಒಂದಿಷ್ಟು ಹೊಸತು ಎನ್ನುವ ಹಾಗೆ, ಅದು ತೀರಾ ಗಂಭೀರವಾದುದು ಎನ್ನುವ ಹಾಗೆ ಅವರು ಶುಭರಾತ್ರಿ ಹೇಳಿದರು.

ಅವನು ನೇರವಾಗಿ ಮನೆಗೆ ಹೋಗಲಿಲ್ಲ. ಒಬ್ಬಂಟಿಯಾದರೂ ಪರವಾಯಿಲ್ಲ, ಇಂದಿನ ವಿಲಕ್ಷಣವಾದ ಈ ವಿದಾಯದ ಅನುಭವಕ್ಕೆ ಅಂಟಿಕೊಂಡೇ ಇರಬೇಕು ಅನ್ನಿಸಿತ್ತು ಅವನಿಗೆ. ಒಂದಿಷ್ಟು ಶಿಕ್ಷಣ ಪಡೆದವನಾದ್ದರಿಂದ ರಾತ್ರಿ ಸಂಚಾರದಲ್ಲಿ ಪ್ರೇತಗಳು ಎದುರಾಗಬಹುದು ಎನ್ನುವ ಭೀತಿ ಇರಲಿಲ್ಲ. ಅವನು ನದಿಯ ದಡದ ಕಡೆಗೆ ಹೋಗಿ ಅತ್ತಿಂದಿತ್ತ ಇತ್ತಿಂದತ್ತ ಅಡ್ಡಾಡ ತೊಡಗಿದ. ಹಾಗೆ ಅವನು ಬಹಳ ಹೊತ್ತು ತಿರುಗಾಡಿದ. ರಾತ್ರಿ ಮುಖವಾಡ ಧರಿಸಿದವರ ಕಟ್ಟಿಗೆಯ ಕಟಕಟ ಸಪ್ಪಳ ಕೇಳಿಸಿದಾಗಲೂ ಅವನು ಅಲ್ಲಿಯೇ ಅಲೆದಾಡುತ್ತಿದ್ದ. ತಕ್ಷಣವೆ ಒಂದಿಷ್ಟು ಓಡಿದಂತೆ, ಒಂದಿಷ್ಟು ನಡೆದಂತೆ ಮಾಡುತ್ತ ಅವನು ಮನೆಯ ಕಡೆಗೆ ಹೊರಟ. ಯಾಕೆಂದರೆ ರಾತ್ರಿ ಮುಖವಾಡ ಧರಿಸಿ ಬರುವವರು ನಿಜವಾದ ಮನುಷ್ಯರಾಗಿರುತ್ತಾರೆ. ಜನರು ಮೂಢವಾಗಿ ನಂಬಿರುವಂತೆ ಅವರು ಪ್ರೇತಗಳಲ್ಲ. ಅವರು ತಮ್ಮ ಮೋಜಿಗಾಗಿ ರಾತ್ರಿಯನ್ನೇ ಆಯ್ದುಕೊಂಡಿರುತ್ತಾರೆ. ಯಾಕೆಂದರೆ ಅವರು ರಾತ್ರಿ ಹಾರಾಡುವ ಬಾವಲಿಗಳಿಗಿಂತ ಕುರೂಪಿಗಳಾಗಿರುತ್ತಾರೆ.

ಅವಸರದಲ್ಲಿ ಹೊರಟಿರುವಾಗಲೆ ಎಂಥದೋ ಒಂದು ವಸ್ತುವಿನ ಮೇಲೆ ಅವನು ಕಾಲಿಟ್ಟ. ಆ ವಸ್ತುವು ದ್ರವವನ್ನು ಚಿಲ್ಲನೆ ಸಿಡಿಸುತ್ತ ಒಡೆದುಹೋಯಿತು. ಅವನು ಥಟ್ಟನೆ ನಿಂತು ಬಾಗಿ ಫುಟ್‌ಪಾತ್ ಕಡೆಗೆ ನೋಡಿದ. ಚಂದ್ರನಿನ್ನೂ ಮೂಡಿರಲಿಲ್ಲ. ಆದರೆ ಆಕಾಶದಲ್ಲಿ ಮಂದವಾದ ಬೆಳಕಿತ್ತು. ಚಂದ್ರ ಮೂಡಿಬರುವುದು ಇನ್ನೇನು ತಡವಿಲ್ಲ ಎನ್ನುವುದನ್ನು ಅದು ಸೂಚಿಸುತ್ತಿತ್ತು. ನಿವಾಳಿಸಿಟ್ಟ ಮೊಟ್ಟೆಯನ್ನು ತಾನು ತುಳಿದಿರುವೆ ಎಂದು ಆ ಅರೆ ಬೆಳಕಿನಲ್ಲಿ ಕಂಡ. ಯಾರೋ ದುರ್ದೈವದ ದಬ್ಬಾಳಿಕೆಗೆ ತುತ್ತಾದವರು ಆಹುತಿಯನ್ನು ನೀಡಿ ಕೂಡು ದಾರಿಯಲ್ಲಿ ಮುಸ್ಸಂಜೆಯ ಮಂದ ಬೆಳಕಿನಲ್ಲಿ ಇಟ್ಟುಹೋಗಿದ್ದಾರೆ ಅಂದುಕೊಂಡ. ಅಂಥ ವಸ್ತುವನ್ನು ಅವನು ತುಳಿದುಬಿಟ್ಟಿದ್ದ. ಆ ಮೊಟ್ಟೆಯ ಸುತ್ತಲೂ ಪಾಮ್ ಮರದ ಗರಿಗಳಿದ್ದವು. ಇದೆಲ್ಲಾ ಆ ಮನೆಯಲ್ಲಿರುವ ಭೀಕರವಾದ ಕಲಾವಿದನ ಹುಚ್ಚಾಟಿಕೆ ಎಂದು ಬೇರೆಯದೇ ರೀತಿಯಲ್ಲಿ ಅವನು ವಿಶ್ಲೇಷಿಸಿಕೊಂಡ. ಅವನು ತನ್ನ ಅಂಗಾಲನ್ನು ದಾರಿಯ ಉಸುಕಿನ ಮೇಲೆ ಒರೆಯಿಸಿಕೊಂಡ. ಅಸ್ಪಷ್ಟವಾದ ಚಿಂತೆಯನ್ನು ಮನಸ್ಸಿನಲ್ಲಿ ತುಂಬಿಕೊಂಡು ಅವನು ಅವಸರದಲ್ಲಿ ಹೊರಟ. ಆದರೆ ಈಗ ಅವಸರವು ಯಾವುದೇ ಉಪಯೋಗಕ್ಕೆ ಬರುವಂಥದ್ದಾಗಿರಲಿಲ್ಲ. ಕ್ಷಿಪ್ರ ನಡಿಗೆಯ ಮುಖವಾಡಧಾರಿಗಳು ಆಗಲೆ ರಸ್ತೆಗೆ ಇಳಿದಾಗಿತ್ತು. ಕೆಲವೆ ಕ್ಷಣಗಳಲ್ಲಿ ಮೂಡಲಿರುವ ಚಂದ್ರನ ಬೆಳಕಿನ ಭಯವು ಅವರನ್ನು ಅವಸರಿಸಿದಂತೆ ತೋರುತ್ತಿತ್ತು. ಉರಿಯುವ ಕತ್ತಿಯ ಹಾಗೆ ಆ ಗುಂಪಿನ ಧ್ವನಿಯು ಸ್ಪಷ್ಟವಾಗುತ್ತ ಮತ್ತು ಜೋರಾಗುತ್ತ ಬಂದಿತು. ಅವರು ಇಲ್ಲಿಗೆ ಬರಬೇಕಾದರೆ ಇನ್ನೂ ಸಾಕಷ್ಟು ಸಮಯ ಬೇಕಾಗಬಹುದು. ಆದರೆ ಅವರ ವೇಗದ ಓಟದ ಕಾರಣದಿಂದ ದೂರವೆನ್ನುವುದು ಕರಗಿಹೋಗುವಂತಿತ್ತು. ಅವನು ನೇರವಾಗಿ ರಸ್ತೆಯ ಬದಿಯಿರುವ ಸುವರ್ಣಗಡ್ಡೆಗಳ ಹೊಲದತ್ತ ಹೋದ. ಅಲ್ಲಿ ದೊಡ್ಡ ದೊಡ್ಡ ಎಲೆಗಳ ಮರೆಯಲ್ಲಿ ಅವನು ಬಕ್ಕಬರಲು ಬಿದ್ದುಕೊಂಡ. ಹೀಗೆ ಮಾಡುವಷ್ಟರಲ್ಲಿ ಭೂತದ ಕೈಯಲ್ಲಿನ ದಂಡದ ಲಟಲಟವೆನ್ನುವ ಶಬ್ದ ಕೇಳಿಸಿತು. ಗುಡುಗಿನ ಅಬ್ಬರದ ಪ್ರವಾಹದಂತಹ ಗೂಢ ಭಾವ ತುಂಬಿದ ಮಾತುಗಳನ್ನು ಕೇಳಿಸಿಕೊಂಡ. ಅವನ ಮೈಯೆಲ್ಲ ಕಂಪಿಸಿತು. ಆ ಮಾತುಗಳು ಅವನ ಮೇಲೆ ಬಿದ್ದು ಬಿದ್ದು ಅವನ ಮುಖವು ಒದ್ದೆ ನೆಲದಲ್ಲಿ ತಳ್ಳಿಸಿಕೊಂಡಂತಾಗುತ್ತಿತ್ತು. ಈಗ ಅವನಿಗೆ ಅವರು ನಡೆದು ಬರುವ ಹೆಜ್ಜೆಯ ಸಪ್ಪಳ ಕೇಳಿಸತೊಡಗಿತು. ಇಪ್ಪತ್ತರಷ್ಟು ಕೇಡಿಗರು ಒಟ್ಟಿಗೆ ಓಡಿದರೆ ಉಂಟಾಗುವ ಗದ್ದಲದಂತೆ ಆ ಸಪ್ಪಳವಿತ್ತು. ಭೀತಿಯಿಂದ ಅವನು ಮೈಯೆಲ್ಲ ಬೆವೆತುಹೋದ. ಅಲ್ಲಿಂದ ಎದ್ದು ಓಡಿಹೋಗುವುದು ಅವನಿಗೆ ಅನಿವಾರ್ಯವಾಯಿತು. ಸುದೈವವಶಾತ್ ಆತ ತನ್ನ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿರಲಿಲ್ಲ. ನೆಲ ಮುಗಿಲುಗಳನ್ನು ಆವರಿಸಿಕೊಂಡಿದ್ದ ಕೋಲಾಹಲವು–ಗುಡುಗು, ಧಾರಾಕಾರ ಸುರಿವ ಮಳೆ, ಭೂಕಂಪನ, ನೆರೆಹಾವಳಿ ಎಲ್ಲವೂ–ಮರೆಯಾಗಿ ರಸ್ತೆಯನ್ನು ದಾಟಿಹೋಗಿ ದೂರದ ರಸ್ತೆಯ ಆ ಬದಿಯಲ್ಲಿ ಕಾಣಿಸಿಕೊಂಡಿತು.

ಮರುದಿವಸ ಮುಂಜಾನೆ ಊರಿನ ಮಣ್ಣಿನ ಮಗನಾದ ಕಚೇರಿಯ ಮುಖ್ಯ ಕ್ಲರ್ಕ್ ತುಂಬಾ ಕಹಿಯಾದ ಮಾತುಗಳನ್ನು ಆಡಿದ. ಅವನ ಮಾತುಗಳು ನಿನ್ನೆ ರಾತ್ರಿ ಊರಿನ ತಲೆಹೋಕ ಯುವಕರು ಕಿಟಿಕ್ವಾನು ಸಿಟ್ಟಿಗೇಳತ್ತಾನೆ ಎಂದು ಗೊತ್ತಿದ್ದರೂ ಹಿರಿಯರ ಮಾತುಗಳನ್ನು ಧಿಕ್ಕರಿಸಿ ಮುಖವಾಡ ಧರಿಸಿ ಕ್ಷಿಪ್ರಹೆಜ್ಜೆ ಹಾಕುವ ಮೂಲಕ ಕಿಟಿಕ್ವಾನನ್ನು ಕೆಣಕಿದರು ಎಂದು ಹೇಳಿದ.

ಆದರೆ, ಆ ಅವಿಧೇಯ ಯುವಕರ ಮೇಲೆ ಕಿಟಿಕ್ವಾನ ಶಕ್ತಿಯು ಯಾವುದೇ ತೆರನಾದ ಪ್ರಭಾವ ಬೀರಲಿಲ್ಲ ಎನ್ನುವುದು ಜನರು ಆಡಿಕೊಳ್ಳುವ ಮಾತಾಗಿತ್ತು. ಅದೆಲ್ಲ ಜನರ ನಂಬಿಕೆ ಅಷ್ಟೆ ಎನ್ನುವಂತಿಲ್ಲ. ಯಾಕೆಂದರೆ ಕೆಲವೇ ದಿನಗಳಲ್ಲಿ ಖಂಡಿತವಾಗಿಯೂ ಅವರು ಕಿಟಿಕ್ವಾನ ಸಿಟ್ಟಿನ ದರ್ಶನವನ್ನು ಮಾಡಿಕೊಳ್ಳಲಿದ್ದಾರೆ.

***

# ನವಿಲುಗರಿ

## ಅರಿ ಮತ್ತು ಸರಿ

'ಅರಿ' ಎನ್ನುವಲ್ಲೇ ಪದಾರ್ಥ ದ್ವಂದ್ವ,
'ಸರಿ' ಎಂದು ಹೇಳಬಹುದೇ?
ಇದೆಂದಿಗೂ ಸರಿಯಲ್ಲ.
ಅರಿತ ಮೇಲೆ ವೈರತ್ವಕ್ಕೆ ಇಂಬಿಲ್ಲ
ಅರಿತು ಬೆರೆಯುವ ಸೊಗಸಿಗೆ ವಿವರ ಬೇಕಿಲ್ಲ.
ಮತ್ತಿನ್ನು ಅರಿತು ಸರಿಯುವ
ನೋವು ಅರಿತವಗೆ
ಸಹನೀಯವಂತೂ ಅಲ್ಲವೇ ಅಲ್ಲ!

ಅರಿವನ್ನು ಬೆಚ್ಚಗೆ ಎದೆಯೊಳಗೆ ಇಳಿಸಿಕೊಳ್ಳುತ್ತಾ
ಲವಲವಿಕೆಯ ಹಾಸಿಗೆಯಲ್ಲಿ
ಹಗುರ ಪವಡಿಸುವ ಮನಸ್ಸು
ಮರುಗಳಿಗೆ ಎದುರು ನೋಡುವುದು
ಅದೇ ಅರಿವಿನ ಬತ್ತಿ
ಹೊಸೆವ ಹಸನು ಪ್ರೀತಿಗಾಗಿ
ಚಿಟಿಕೆಯಷ್ಟು ಕನಸ ಕಡಕ್ಕಾಗಿ.

ಆದರೇಕೆ ಅನುದಿನದ ಅರಿವಿನ
ನಾದದಲ್ಲಿ ಅಪಲಾಪದ ರಾಗ ಹೊಮ್ಮುತ್ತಿದೆ
ಅರಿವಿನ ರಾಗವೂ ಉಗ್ಗಡಿಸುತ್ತಿದೆ
ಅರಿವಿನ ತಾಣವೂ ಮಗ್ಗಲು
ಬದಲಾಯಿಸುವಂತಿದೆ.
ಕೊಳಲ ಅರಿವಿನ ಕಂಠ ಅಪಶೃತಿ
ಹೊಮ್ಮಿಸುವುದ ತಾಲೀಮು ನಡೆಸುತ್ತಿದೆ.
ಅರಿವಿನ ಕಣ್ಣಲ್ಲಿ ಮಸುಕಾಗುತ್ತಿದೆ
ಇರುವಿಕೆಯ ಅರಿವು.


ಇಹಪರದ ನಡುವೆ ಬಯಕೆ ಕೋರಿಕೆ ಕನವರಿಕೆ
ಕಾಣಲಾಗದ್ದ ಕಾಣುವ ಬಯಕೆ
ಕಂಡಿದ್ದ ಉಂಡಿದ್ದ ಮನಗಂಡೆನೆಂದುಕೊಂಡಿದ್ದ
ಖಂಡಿಸುವ ಹಲಬುವಿಕೆ.

ಸೋಗಿನ ಅರಿವಿರಬಹುದೇ?
ಸೊಗಸಾಗಿ ಹೆಣೆದ ಬದ್ಧತೆಯ ಪ್ರ-
ಬುದ್ಧನ ಚಿತ್ರಪಟ ಚಂಚಲಚಿತ್ತದ ಎದೆಯೊಳಗೆ.

'ಇರುವೆ' ಎನ್ನುವ
ಮರುಕ್ಷಣದಿ 'ಸರಿವೆ'ನೆಂಬ
ಇರದುದರೆಡೆಗೆ ತುಡಿಯುವ
ಅರಿವೆಂಬ ಹರಕು ಅರಿವೆಯ ತೊಟ್ಟು
ಅನವರತ ಇರಿವ, ಕೊರೆವ, ಸರಿವ, ಅರಿಯ
ಸಹಿಸುವುದೇ ಬದುಕೇ?



**-ನಾಗರೇಖಾ ಗಾಂವಕರ್**



ಚಿತ್ರಗಳು : ವಿಜಯಶ್ರೀ ಹಾಲಾಡಿ

## ತಂದೆ ಮತ್ತು ಮಗ



ತಂದೆ ಕೈ ಬಿಡದೆ ನಡೆಸಿದ ಮಗುವ
ನಂದನಾಳಿಗಳಲ್ಲಿ ಕೊರಕಲಲ್ಲಿ.
ಮುಂದೆ ಹೊಗೆ ನಗರ; ಅಲ್ಲಿಯೂ ಕೈ ಬಿಡದೆ
ಎಂದೆಂದು ಕಾಯುವನು ಗಲ್ಲಿಯಲ್ಲಿ.

ತಾಯಂಥ ತೋಪುಗಳ ನೆರಳಲ್ಲಿ ಹೂವುಗಳು
ಪಕಳೆ ಪಕಳೆಯ ಕಿತ್ತು ಚಲ್ಲವರಿದ.
ಹಾದಿ ತೋರುವ ದೆಸೆಗೆ ನೋಟ ನೆಡಿಸಿದ;
ಮೇಲೆ ಅತ್ತಿತ್ತ ನೋಟಗಳ ಮನ್ನಾಗೈದ.
ದಟ್ಟ ಹಲಸಿನ ಮರದ ಬುಡದಲ್ಲಿ ಸುತ್ತಿದ್ದ
ಹೆಬ್ಬಾವುಗಳ ತೋರಿ ಬೆಚ್ಚಿಸಿದನು.

ಚೆಲ್ಲಿದ್ದ ಅಂಗನೆಯರಂಗರಚನಾ ಶಾಸ್ತ್ರ ಕಲಿಸಿ
ಚಿತ್ತಗಳಿಂದ ಶಿಕ್ಷಿಸಿದನು.
ಜೇನು ದುಂಬಿಗಳನು ಮಗನತ್ತ ಛೂ ಬಿಟ್ಟು
ಏನೂ ಆಗದ ಹಾಗೇ ತಲೆಗಾಯ್ದನು.
ತನ್ನ ಕಣ್ಣಿಗೆ ಮಬ್ಬು ಬಂತೆಂದು ಕನ್ನಡಕ
ನಿನ್ನ ರೋಮಕೂಪಗಳಲಿ ಧರಿಸೆಂದನು.

ಮೈಯೆಲ್ಲಾ ಕಣ್ಣಾದ ಮಗನಿಗೆಲ್ಲೆಲ್ಲೂ ಸೊರಗಿ
ಸಾಯುವ ತಂದೆ ಮುಂದೆ ಬಂದ,
ಕೈಯಾರ ಕೊಂದ ಮಗ ತನ್ನ ತಂದೆಯನ್ನು;
ಎಲ್ಲಿ ನೋಡಿದರಲ್ಲಿ ಕಳೆದ ರುಂಡ.

ಮಗನು ತಂದೆಯನು ತಿಂದು ತಂದೆಯೇ ತಾನಾಗಿ
ನಗುವ ನಂದನ ಕೊರಕಲಲ್ಲಿ
ಭುಗಿಲೆದ್ದ ನಗರದಲ್ಲಿ ಗಗನದಲ್ಲಿ ಮಗನ
ಕೈ ಹಿಡಿದು ನಡೆಸುವನು ಹಿಂದಕೆಲ್ಲಿ?

**-ಎಚ್. ಎಸ್. ಶಿವಪ್ರಕಾಶ್**

**(ಇವರ ಇತ್ತೀಚಿನ 'ಹೋಗಿ ಬನ್ನಿ ಋತುಗಳೇ'-ನಾಲ್ಕು ದಶಕದ ಕವಿತೆಗಳು-ಸಂಕಲನದಿಂದ)**






---

ದಿನಗಳು ಗತಿಸಿದಂತೆ ಆಳವಾಗುತ್ತ ಹೋಗುತ್ತಿದೆ. ಕಾಲದ ಈ ದಂಡೆಯ ಮೇಲೆ ಜ್ಯೂಲಿಯಸ್ ನಿಂತಿದ್ದಾನೆ. ಭೀಕರ ಕಲಾವಿದನ ಹುಚ್ಚಾಟಿಕೆಯಿಂದ ಆ ಕಡೆಯ ದಂಡೆಯ ಮೇಲೆ ಜೆನೆಟ್ ಮತ್ತು ಮಾ ತಿರುಗಿ ಬಾರದವರಂತೆ ನಿಂತಿದ್ದಾರೆ.

**ಟಿಪ್ಪಣಿಗಳು:**

೧ ನುಕ್ವ, ಈಕ್, ಓಯೆ ಮತ್ತು ಎಫೋ- ಇವು ಇಗ್ಬೊ ಜನರಲ್ಲಿ ವಾರದ ನಾಲ್ಕು ದಿನಗಳ ಹೆಸರು. ಅವರು ವಾರದಲ್ಲಿ ನಾಲ್ಕು ದಿನಗಳ ಲೆಕ್ಕ ಮಾಡುತ್ತಾರೆ. ಆಯಾ ವಾರದ ಆಧಾರದ ಮೇಲೆ ಮಾರುಕಟ್ಟೆಗಳನ್ನು ಆಯಾ ಹೆಸರುಗಳಿಂದ ಕರೆಯುತ್ತಾರೆ.

೨ ಮಮ್ಮಿ ವೊಟಾ: ಮತ್ಸ್ಯಕನ್ನೆಯ ಹಾಗೆ ಕಾಣಿಸುವ ಚೆಲುವಾದ ಸ್ತ್ರೀ ದೇವತೆ. ಆಫ್ರಿಕಾ ದೇಶದ ಜನರ ನಂಬಿಕೆಯ ಪ್ರಕಾರ ಅವಳೊಬ್ಬ ಜಲದೇವತೆ. ಅವಳು ಸಿರಿಸಂಪತ್ತನ್ನು ನೀಡುವ ದೇವತೆ. ಈ ಅರ್ಥದಲ್ಲಿ ಅವಳು ಬಂಡವಾಳಶಾಹಿಗಳ ದೇವತೆ. ಅವಳ ಸುತ್ತಲೂ ಚಿತ್ರಕಲೆಯ ದೊಡ್ಡ ಜಾಲವೇ ಹೆಣೆದುಕೊಂಡಿದೆ. ಅವಳನ್ನು ಅನೇಕ ವಿನ್ಯಾಸಗಳಲ್ಲಿ ಕಲಾವಿದರು ರೇಖಿಸಿದ್ದಾರೆ.



**(ಬೂಕರ್ ಪ್ರಶಸ್ತಿ ಪುರಸ್ಕೃತ Things fall apart ಕಾದಂಬರಿಯ ಲೇಖಕ, ವಿಶ್ವಪ್ರಸಿದ್ಧನಾದ ನೈಜೀರಿಯಾದ ಚಿನುಅ ಅಚಿಬೆ(೧೯೩೦-೨೦೧೩), ಆಧುನಿಕ ಆಫ್ರಿಕನ್ ಸಾಹಿತ್ಯದ ದೊಡ್ಡ ಹೆಸರು)**

# ಸಾವಿನ ಆಘಾತ, ಪ್ರಶಸ್ತಿ ರಾಜಕಾರಣ, ರಾಜ್ಯೋತ್ಸವದ ಅಪದ್ಧಗಳು ಇತ್ಯಾದಿ; ಕೆಲ ಬಿಡಿ ಟಿಪ್ಪಣಿಗಳು

## ಅಪ್ಪು ಸಾವಿನ ಆಘಾತ



**ಅ**ಪ್ಪು ಎಂದು ತಮ್ಮ ತಂದೆ ರಾಜ್‌ಕುಮಾರ್‌ರಿಂದಲೂ, ತಮ್ಮ ಅಪಾರ ಸಂಖ್ಯೆಯ ಅಭಿಮಾನಿಗಳಿಂದಲೂ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಪುನೀತ್ ರಾಜ್‌ಕುಮಾರ್ ತಮ್ಮ ೪೬ರ ಹರೆಯದಲ್ಲೇ ನಮ್ಮನ್ನಗಲಿ ಹೋಗಿದ್ದಾರೆ. ಚಲನಚಿತ್ರ ರಂಗಕ್ಕೆ ಬೇಕಾದ ದೇಹ ಸೌಂದರ್ಯಕ್ಕಾಗಿ ಮಿತಿ ಇಲ್ಲದ ಅಂಗಸಾಧನೆಯ ಕಸರತ್ತುಗಳೇ ಇಂತಹ ಹಠಾತ್ ಹೃದಯಾಘಾತಗಳಿಗೆ ಕಾರಣವೆಂದು ಹೇಳಲಾಗುತ್ತಿದೆ. ಅದೇನೇ ಇರಲಿ, ರಾಜ್‌ಕುಮಾರ್ ಮೇಲಿನ ಕನ್ನಡ ಜನತೆಯ ಅಭಿಮಾನ ಮತ್ತೆ ಮರುಕಳಿಸಲು ಒದಗಿದ ಅವಕಾಶವೋ ಎಂಬಂತೆ ಪುನೀತ್ ಸಾವಿನ ಬಗ್ಗೆ ಉರುಳುರುಳಿ ಬಂದ ದುಃಖಸಾಗರದ ಅಲೆಗಳು ಒಂದು ತಿಂಗಳ ನಂತರವೂ ಅಡಗಿಲ್ಲ. ಇದಕ್ಕೆ ಅವರ ಸಾವು ಅಕಾಲಿಕ ಮತ್ತು ಅನಿರೀಕ್ಷಿತ ಎಂಬುದು ಎಷ್ಟು ಕಾರಣವೋ ಅಷ್ಟೇ ಕಾರಣ ಬಾಲ ನಟನಾಗಿದ್ದ ಕಾಲದಿಂದಲೇ ಹೊಮ್ಮತೊಡಗಿದ ಅವರ ಅನನ್ಯ ಅಭಿನಯ ಪ್ರತಿಭೆ, ಜೊತೆಗೆ ಅವರ ತಂದೆಯಿಂದ ಪಡೆದ ಬಳುವಳಿಯಂತಿದ್ದ ಅವರ ಸೌಜನ್ಯಪೂರ್ಣವಾದ ವ್ಯಕ್ತಿತ್ವ ಮತ್ತು ಸಾರ್ವಜನಿಕ ಹಿತ ಕುರಿತ ಅಪಾರ ಮತ್ತು ವೈವಿಧ್ಯಮಯ ಕಾಳಜಿ. ರಾಜ್‌ಕುಮಾರ್ ಪರಂಪರೆಯ ನಿಜವಾದ ಮತ್ತು ಪರಿಪೂರ್ಣ ವಾರಸುದಾರರಂತಿದ್ದ ಅಪ್ಪು ಅವರ ಸಾವು ಕನ್ನಡ ಚಿತ್ರರಂಗದಲ್ಲಿ ಮಾತ್ರವಲ್ಲ, ಕನ್ನಡ ಸಮಾಜಕ್ಕೆ ಆಗಿರುವ ಆಘಾತ ಎಂದು ನಿಸ್ಸಂಶಯವಾಗಿ ಹೇಳಬಹುದು. ಎಲ್ಲ ಸರಿ, ಆದರೆ ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಕರ್ನಾಟಕ ರತ್ನ' ಪ್ರಶಸ್ತಿ ಘೋಷಣೆ? ಇದೊಂದು ಬಿಕ್ಕಟ್ಟಿನಲ್ಲಿರುವ ಸರ್ಕಾರವೊಂದರ ಮುಖ್ಯಮಂತ್ರಿಗಳು ಒತ್ತಡಕ್ಕೆ ಸಿಕ್ಕಿ ಸುಲಭ ಜನಪ್ರಿಯತೆಗಾಗಿ ಮಾಡಿದ ಘೋಷಣೆಯಂತೆ ಕಾಣುತ್ತದೆ. ಅವರು ಈ ಘೋಷಣೆ ಮಾಡಿದ ಸಂದರ್ಭವೂ ಈ ಮಾತಿಗೆ ಪುಷ್ಠಿ ನೀಡುವಂತಿದೆ.

## ಪದ್ಮ ಪ್ರಶಸ್ತಿಗಳ ರಾಜಕಾರಣ



**ಪ್ರ**ಶಸ್ತಿ ಕುರಿತು ಮಾತಾಡುತ್ತಿರುವಾಗಲೇ ಇನ್ನೂ ಒಂದೆರಡು ಪ್ರಶಸ್ತಿಗಳ ಬಗ್ಗೆ ಮಾತಾಡಬಹುದು. ಭಾರತ ಸರ್ಕಾರ ನೀಡುವ ಪದ್ಮ ಪ್ರಶಸ್ತಿಗಳು ಇನ್ನೂ ಸಾಕಷ್ಟು ಘನತೆ-ಗೌರವಗಳನ್ನು ಉಳಿಸಿಕೊಂಡಂಥವು ಎನ್ನಬಹುದು. ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಬಹುತೇಕ ಖ್ಯಾತರಿಗೆ, ಪ್ರತಿಷ್ಠಿತರಿಗೆ ಈ ಪ್ರಶಸ್ತಿಗಳನ್ನು ನೀಡುತ್ತಿದ್ದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗಳ ಮೂಲೆ ಮುಡುಕುಗಳನ್ನು ಹುಡುಕಿ ಜನಸಾಮಾನ್ಯರ ನಡುವಿನ ಸಾಧಕರಿಗೂ ಪ್ರಶಸ್ತಿಗಳನ್ನು ಕೊಡುತ್ತಿದೆ ಎಂಬ ಮಾತಿಗೆ ಹಲವು ಉದಾಹರಣೆಗಳಿವೆ. ಆದರೆ ಅದೇ ವೇಳೆ ಕೇವಲ ರಾಜಕೀಯ ಪರಿಗಣನೆಯ ಆಧಾರದ ಮೇಲೂ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎನ್ನಲೂ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಉದಾ: ಈ ಬಾರಿ ನೋಡಿ, ೧೯೪೭ರಲ್ಲಿ ದೊರೆತ ಸ್ವಾತಂತ್ರ್ಯ ಭಿಕ್ಷೆ ರೂಪದ ಸಾತಂತ್ರ್ಯ ಎನ್ನುತ್ತಾ ನಮ್ಮ ರಾಷ್ಟ್ರೀಯ ಹೋರಾಟದ ಐತಿಹಾಸಿಕತೆ ಮತ್ತು ಘನತೆ-ಗೌರವಗಳನ್ನೇ ನಾಶ ಮಾಡಹೊರಟ



ಅಪ್ಪಟ ಹಿಂದುತ್ವವಾದಿ ನಟಿ ಕಂಗನಾ ರಾನಾವತ್‌ಗೆ ನೀಡಲಾಗಿದೆ. ಜೊತೆಗೆ ಕನ್ನಡ ಪತ್ರಿಕೋದ್ಯಮದ ರುಚಿಯನ್ನೇ ನಿರ್ಣಾಯಕವಾಗಿ ಕೆಡಿಸಿದ ಮತ್ತು ಹವಾ ನೋಡಿ ಪಕ್ಷ ಬದಲಾಯಿಸುವ ರಾಜ್ಯದ ಉದ್ಯಮಿ ವಿಜಯ ಸಂಕೇಶ್ವರ ಅವರಿಗೆ!

## ರಾಜ್ಯೋತ್ಸವದ ಅಪದ್ಧಗಳು

**ಕ**

ಇನ್ನು ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿಗಳ ಪೈಕಿ ಎದ್ದು ಕಾಣುವ ಹೆಸರುಗಳೆಂದರೆ ಸಾಹಿತ್ಯ ಸಾಧನೆಗಾಗಿ ಈ ಪ್ರಶಸ್ತಿ ಪಡೆದಿರುವವರ ಹೆಸರುಗಳು. ಇವರು ಎಲ್ಲಿ, ಏನು ಬರೆದಿದ್ದಾರೋ ಯಾರಿಗಾದರೂ ಗೊತ್ತಿದ್ದರೆ ಹೇಳಬೇಕು!

ರಾಜ್ಯೋತ್ಸವದ ತಿಂಗಳು ನವೆಂಬರ್ ಮುಗಿದಿದೆ. ಆದರೂ ಕನ್ನಡ ನಾಡು ನುಡಿ ಮತ್ತು ಜನರ ಉನ್ನತಿ ಕುರಿತ ಬುರುಗು ಮಾತುಗಳು ಕೊನೆಯಿಲ್ಲದೆ ಸಾಗಿವೆ. ಕನ್ನಡ ಭಾಷೆಗೆ ಪ್ರಾಥಮಿಕ ಶಿಕ್ಷಣದ ಮಾಧ್ಯಮವಾಗಿರುವ ಅರ್ಹತೆಯೇ ಇಲ್ಲವೆಂದು ಸರ್ಕಾರ ಮತ್ತು ಜನ ಇಬ್ಬರೂ ದಿನೇ ದಿನೇ ತಮ್ಮ ನಡೆ ನುಡಿಗಳ ಮೂಲಕ ಸಾಬೀತುಪಡಿಸುತ್ತಿರುವಾಗ ಇಂಜಿನಿಯರಿಂಗ್ ವ್ಯಾಸಂಗವನ್ನು ಕನ್ನಡ ಮಾಧ್ಯಮದ ಮೂಲಕವೂ ಆರಂಭಿಸುವ ಪ್ರಸ್ತಾಪವೊಂದನ್ನು ತೇಲಿಬಿಡಲಾಗಿದೆ. ಕನ್ನಡ ಭಾಷೆಯನ್ನೇ ಸರಿಯಾಗಿ ಕಲಿಯಲು ಅವಕಾಶ ನಿರಾಕರಿಸಲ್ಪಟ್ಟಿರುವ ಇಂದಿನ ವ್ಯವಸ್ಥೆಯಲ್ಲಿ ಉನ್ನತ ವ್ಯಾಸಂಗವನ್ನು ಅಂತಹ ಕನ್ನಡದ ಮೂಲಕ ಹೇಗೆ ಕಲಿಸಲು ಸಾಧ್ಯ? ಎಂದು ಯಾರಾದರೂ ಯೋಚಿಸಿದ್ದಾರೆಯೇ?



**ಇ**ನ್ನು ರಾಜ್ಯೋತ್ಸವ ಸಂಬಂಧಿ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ತೇಲಿಬಿಟ್ಟಿರುವ, ರಾಜ್ಯದಲ್ಲಿ ಕನ್ನಡಿಗರಿಗೇ ಶೇ ೭೫ರವರೆಗೆ ಉದ್ಯೋಗ ಮೀಸಲಾತಿ ಎಂಬ ಗಾಳಿ ತುಂಬಿದ ಬಲೂನು. ಮುವ್ವತ್ತು ನಲವತ್ತು ವರ್ಷಗಳ ಹಿಂದೆ ಇಂತಹುದೇ ಗುರಿಯ ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳೇ ದಿಕ್ಕಾಪಾಲಾಗಿರುವಾಗ ಈಗ ಕನ್ನಡಿಗರ ಮೂಗಿಗೆ ತುಪ್ಪ ಹಚ್ಚುವ ಮತ್ತೊಂದು ಪ್ರಯತ್ನವಿದು. ಮುಖ್ಯಮಂತ್ರಿಯಾದಿಯಾಗಿ ನಮ್ಮೆಲ್ಲ ರಾಜಕಾರಣಿಗಳಿಗೆ ಮತ್ತು ಸಂವಿಧಾನ ಬಲ್ಲ ಜನರಿಗೆ ಗೊತ್ತಿದೆ, ನಮ್ಮ ಸಂವಿಧಾನದಲ್ಲಿ ಮೂಲಭೂತ ಅಸ್ತಿತ್ವ ಹೊಂದಿರುವುದು ರಾಷ್ಟ್ರವೆಂಬ ವಿದ್ಯಮಾನ ಮಾತ್ರ. ರಾಜ್ಯಗಳ ಒಕ್ಕೂಟ ಎಂಬುದು ಪೂರ್ಣ ಸಾಂವಿಧಾನಿಕ ಬಲವಿಲ್ಲದ ಒಂದು ತಾಂತ್ರಿಕ ವರ್ಣನೆ ಮಾತ್ರ. ಹಾಗಾಗಿ ಕರ್ನಾಟಕ ಮತ್ತು ಕನ್ನಡ ಎಂಬವು ಸಾಂವಿಧಾನಿಕವಾಗಿ ಸ್ವಯಂಪೂರ್ಣ ಅರ್ಥಗಳನ್ನು ಹೊಂದಿಲ್ಲ. ಅದರೆ ಅವು ಭಾರತ ಎಂಬ ವಿದ್ಯಮಾನಕ್ಕೆ ಸಂಬಂಧಿಸಿದ ಎಲ್ಲ ಸಾಂವಿಧಾನಿಕ ವಿಧಿ ವಿಧಾನಗಳಿಗೂ ವಿಧೇಯವಾಗಿರಬೇಕಾಗುತ್ತದೆ. ಭಾರತದ ಯಾವ ಪ್ರಜೆಯಾದರೂ ಭಾರತದ ಯಾವುದೇ ಭಾಗದಲ್ಲಿ ನೆಲಸುವ ಹಕ್ಕು ಹೊಂದಿದ್ದಾನೆ ಎಂದ ಮೇಲೆ ಕರ್ನಾಟಕ, ಕನ್ನಡ ಮತ್ತು ಕನ್ನಡಿಗ ಎಂಬ ವಿದ್ಯಮಾನಗಳು ಭಾರತ ಎಂಬ ವಿದ್ಯಮಾನದ ಬಾಲಂಗೋಚಿಗಳಾಗಿರಬಹುದೇ ಹೊರತು ಅವುಗಳಿಗೆ ಯಾವುದೇ ನೆಲೆಯ ಪರಮಾಧಿಕಾರವಿರಲು ಸಾಧ್ಯವಿಲ್ಲ. ಇದೇ ಕಾರಣದಿಂದಲ್ಲವೇ, ಕರ್ನಾಟಕದ ಮಕ್ಕಳಿಗೆಲ್ಲ ಪ್ರಾಥಮಿಕ ಶಿಕ್ಷಣವನ್ನಾದರೂ ಕನ್ನಡದಲ್ಲಿ ಕಲಿಸಬೇಕೆಂಬ ಕರ್ನಾಟಕ ಸರ್ಕಾರದ ಪ್ರಯತ್ನ ನಮ್ಮ ನ್ಯಾಯಾಂಗದ ಯಾವ ಮಟ್ಟದಲ್ಲೂ ಊರ್ಜಿತವಾಗದೇ ಹೋಗಿರುವುದು? ಇದೇ ಅಲ್ಲವೇ ಈಗ ರಾಜ್ಯದ ಶಿಕ್ಷಣ ಕ್ರಮದಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿಯಾದರೂ ಕಲಿಸುವ ಕರ್ನಾಟಕ ಸರ್ಕಾರದ ಪ್ರಯತ್ನ ಕನ್ನಡಿಗರಿಂದಲೇ ನ್ಯಾಯಾಲಯದಲ್ಲಿ ಪ್ರಶ್ನಿತವಾಗಿ, ನ್ಯಾಯಾಲಯ ಇದು ರಾಜಕಾರಣ ಎಂದು ಟೀಕಿಸಿರುವುದು?

ಆದ್ದರಿಂದ ಎಲ್ಲಿಯವರೆಗೆ ಭಾರತವನ್ನು ಸಾಂವಿಧಾನಿಕವಾಗಿ ಪೂರ್ಣಪ್ರಮಾಣದಲ್ಲಿ ರಾಜ್ಯಗಳ ಒಕ್ಕೂಟವನ್ನಾಗಿ ಮಾಡುವ ಸಂವಿಧಾನದ ಒಂದು ಮೂಲಭೂತ ತಿದ್ದುಪಡಿಯಾಗುವುದಿಲ್ಲವೋ ಅಲ್ಲಿಯವರೆಗೆ ಕನ್ನಡ-ಕರ್ನಾಟಕ-ಕನ್ನಡಿಗ ಮತ್ತು ಅವುಗಳ ಹಿತ ಎನ್ನುವುದು ಸರ್ಕಾರದ ಮೂಲಕ ಆಗುವ ಕೆಲಸ ಆಗಲಾರದು. ಇದು ಗೊತ್ತಿದ್ದವರಿಗೆ ರಾಜ್ಯೋತ್ಸವದ ಆಚರಣೆ ಎಷ್ಟು ಔಪಚಾರಿಕ, ಬರಡು ಮತ್ತು ಈ ಸಂದರ್ಭದ ಭರವಸೆಗಳು, ಪ್ರಸ್ತಾವಗಳು ಎಷ್ಟು ಹುಸಿಯಾದವುಗಳು ಎಂಬುದೂ ಗೊತ್ತಿರುತ್ತದೆ.

## ಕನ್ನಡ ವಿಶ್ವವಿದ್ಯಾನಿಲಯದ ಅಧ್ವಾನಗಳೂ

**ಇ**ದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾದ ಇನ್ನೆರಡು ಸಂಗತಿಗಳೆಂದರೆ, ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಒದಗಿರುವ ದುರ್ಗತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗಳ ಪರಿ, ಕನ್ನಡ ನಾಡು ನುಡಿಯ ಹಿತ ರಕ್ಷಣೆ ಮತ್ತು ಉತ್ಕರ್ಷಗಳ ಉದಾತ್ತ ಉದ್ದೇಶಗಳಿಂದ ಸ್ಥಾಪಿತವಾದ ಈ ಸಂಸ್ಥೆಗಳಿಗೆ ಇಂದು ಒದಗಿರುವ ದುರ್ಗತಿ ಇಂದು ಕನ್ನಡ ಭಾಷೆಗೆ ಒದಗಿರುವ ದುರ್ಗತಿಯ ಹಿನ್ನೆಲೆಯಲ್ಲಿ ಸಹಜವೇ ಆಗಿದೆ ಎನ್ನಬಹುದು. ಚಂದ್ರಶೇಖರ ಕಂಬಾರರ ವೈಯಕ್ತಿಕ ನೆಲೆಯ ದೌರ್ಬಲ್ಯಗಳೇನೇ ಇದ್ದರೂ, ಅವರು ಈ ವಿಶ್ವವಿದ್ಯಾನಿಲಯವನ್ನು ರೂಪಿಸಿದ ಬಗೆ ಅವರ ಕಾವ್ಯ ಪ್ರತಿಭೆಯೊಳಗಿನ ಕಲ್ಪನಾಶೀಲತೆಯಂತೆಯೇ ಉತ್ಕೃಷ್ಟವಾದುದಾಗಿತ್ತು. ನಂತರ ಬಂದ ವಿದ್ವಾಂಸ ಎಂ.ಎಂ. ಕಲಬುರ್ಗಿಯವರು ಈ ಉತ್ಕೃಷ್ಟತೆಯನ್ನು ವ್ರತ ಹಿಡಿದಂತೆ ಕಾಪಾಡಿದರು. ಆದರೆ ನಂತರ ಇದರ ಕುಲಪತಿ ಸ್ಥಾನಕ್ಕೆ ಬಡಿದ ಜಾತಿ ಕೋಟಾ ಮತ್ತು ಹಣದ ಥೈಲಿಯ ಶಾಪ ಈ ಸಂಸ್ಥೆಯ ಎಲ್ಲ ವಿಶಿಷ್ಟತೆಗಳನ್ನೂ, ಅನನ್ಯತೆಗಳನ್ನೂ ಕ್ರಮೇಣ ನಾಶ ಮಾಡಿ ವಿದ್ವತ್ತು ಮತ್ತು ಸಂಶೋಧನೆ ಎಂಬುದು ಕೆಲವರು ಆಡಿದ್ದೇ ಆಟ ಎಂಬಂತಾಯಿತು. ಇಂದು ಈ ಸಂಸ್ಥೆಯ ಬಗ್ಗೆ ಕೇಳಿ ಬರುತ್ತಿರುವ ನೇಮಕಾತಿ ಮತ್ತು ಬಡ್ತಿಗಳಲ್ಲಿನ ಭ್ರಷ್ಟಾಚಾರದ ಮಾತು ಅದರ ಈ ಅವನತಿಯ ಹಿಂದಿನ ರೋಗ ಲಕ್ಷಣಗಳಷ್ಟೆ. ಇಂದಿನ ಕನ್ನಡ ಬೌದ್ಧಿಕ ಲೋಕವನ್ನು ಆಳುತ್ತಿರುವ ಶನಿಗಳ ಮುಖಗಳನ್ನೊಮ್ಮೆ ನೋಡಿದರೆ ಈ ರೋಗಕ್ಕೆ ಸದ್ಯಕ್ಕೆ ಮದ್ದಿಲ್ಲ ಎನಿಸುತ್ತದೆ.




ಇನ್ನು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡದ ಹಾಳು ಮಂಟಪವಾಗಿ ಬಹಳ ವರ್ಷಗಳೇ ಆಗಿ ಹೋದವು. ಇದೊಂದು ಸಾಹಿತ್ಯ ಮಠಾರಿಗಳ ಸಾಮ್ರಾಜ್ಯ, ಅದನ್ನು ಆಳಲು ಆಸೆಪಟ್ಟ ಮುಖಗಳನ್ನು ನೋಡಿದರೇ ಇದು ಸ್ಪಷ್ಟವಾಗುವಂತಿತ್ತು. ಈ ಬಾರಿಯ ಚುನಾವಣೆಗಳಲ್ಲಿ ಪಕ್ಷ ರಾಜಕಾರಣವೂ ಸಕ್ರಿಯವಾಗಿದ್ದು ಸಂಘ ಪರಿವಾರದ ಅಭ್ಯರ್ಥಿ ಎಂದು ಬಿಂಬಿತವಾಗಿದ್ದ ಪ್ರಳಯಾಂತಕ ಮಹೇಶ ಜೋಷಿ ಗೆದ್ದು ಈ ಹಾಳು ಮಂಟಪಕ್ಕೆ ನುಗ್ಗಿದ್ದಾರೆ. ಅಲ್ಲೀಗ ಏನಾಗುವುದೋ ಊಹಿಸಲೂ ಸಾಧ್ಯವಿಲ್ಲ!

**-ಡಿಎಸ್ಸೆನ್**

## ಪುಸ್ತಕಾವಲೋಕನ

ಪು: **ಸಂಜೆಮಲ್ಲಿಗೆ**(ಶಾಂತಾದೇವಿ ಕಣವಿ ಸಂಸ್ಮರಣ ಸಂಪುಟ) ಸಂ: ವೀಣಾ **ಶಾಂತೇಶ್ವರ, ಶಾಂತಾ ಇಮ್ರಾಪುರ** ಪ್ರ: **ಸಂವಹನ ಪ್ರಕಾಶನ,** ಮೈಸೂರು (೦೮೨೧-೨೪೭೬೦೯೯) ಪು: **೪೬೨** ಬೆ: **ರೂ. ೪೨೫/-**

### ಒಲುಮೆಯ ಜೀವದ ಆತ್ಮೀಯ ಸಂಪುಟ




**ತೊ**ಂಬತ್ತೇಳು ವರ್ಷಗಳ ತುಂಬು ಬದುಕನ್ನು ಬಾಳಿದ ಶಾಂತಾದೇವಿ ಕಣವಿಯವರ ನೆನಪಿನ ಸಂಪುಟವಾದ 'ಸಂಜೆಮಲ್ಲಿಗೆ', ಅವರ ಸಾಹಿತ್ಯ, ಬದುಕು ಮತ್ತು ಅವರೊಡನಾಟದ ನೆನಪಿನ ಸಂಚಿಕೆಯಾಗಿದೆ. ಹಿರಿಯ ಜೀವದ ಹಿರಿಮೆಯ ಬದುಕಿಗೆ ನೀಡಿದ ಒಲುಮೆಯ ಗೌರವವೂ ಆಗಿದೆ. ಈ ಹಿಂದೆ ಅವರ ಆಯ್ದ ಕತೆಗಳ ಮೇಲೆ ನಾಡಿನ ಬೇರೆ ಬೇರೆ ಲೇಖಕರಿಂದ ಬರೆಸಿದ ವಿಮರ್ಶೆಗಳನ್ನೊಳಗೊಂಡ ಸಂಗ್ರಹ 'ಒಣಗಬಾರದು ಒಡಲ ಚಿಲುಮೆ' ಈ ಹಿಂದೆ ಪ್ರಕಟವಾಗಿದ್ದವು.

ಶಾಂತಾದೇವಿ ಕಣವಿಯವರು ತಣ್ಣನೆಯ ನುಡಿ ಮತ್ತು ನಡೆಯವರು. ನವೋದಯದ ಕಾಲದಿಂದಲೂ ಬರೆದ ಮಹಿಳೆಯರ ಕೊಂಡಿಯಾಗಿ ಇದ್ದವರಲ್ಲಿ ಅವರೇ ಆದ್ಯರು ಅನ್ನಿಸುತ್ತದೆ. ಆಧುನಿಕ ಕನ್ನಡದ ಮಹಿಳಾ ಸಾಹಿತ್ಯ ಪರಂಪರೆಯ ಆರಂಭಿಕ ಘಟ್ಟದಲ್ಲಿ ಕಾಣಿಸುವ ಒಂದು ಸಂಗತಿಯೆಂದರೆ, ಕೊಡಗಿನ ಗೌರಮ್ಮ, ತ್ರಿವೇಣಿ, ದೇವಾಂಗನಾ ಶಾಸ್ತ್ರಿಯವರಂತೆ ಬಹುಬೇಗ ಬರೆದು ಬಹುಬೇಗ ನಿರ್ಗಮಿಸಿದವರಿದ್ದಾರೆ. ಎಂ.ಕೆ. ಇಂದಿರಾ, ಸಾರಾ ಅಬೂಬಕರ್ ಅವರಂತೆ ಬರವಣಿಗೆಯನ್ನು ತಡವಾಗಿ ಆರಂಭಿಸಿದವರಿದ್ದಾರೆ. ಇನ್ನು ಗಿರಿಬಾಲೆ, ರಾಜಲಕ್ಷ್ಮಿ ಎನ್ ರಾವ್, ಎನ್.ವಿ.ಭಾಗ್ಯಲಕ್ಷ್ಮಿಯವರಂತೆ ಬರವಣಿಗೆಯನ್ನು ಇದ್ದಕ್ಕಿದ್ದಂತೆ ನಿಲ್ಲಿಸಿ ಬಿಟ್ಟವರೂ ಇದ್ದಾರೆ. ಕ್ರಮೇಣ ಹಲವು ರೆಂಬೆಕೊಂಬೆಗಳಲ್ಲಿ ವಿಸ್ತರಿಸಿಕೊಂಡಿರುವ ಕನ್ನಡ ಮಹಿಳಾ ಸಾಹಿತ್ಯದ ಈ ಪಯಣದ ಉದ್ದಕ್ಕೂ ಸಾಕ್ಷಿಯಂತೆ, ಹಿರಿಯಕ್ಕನಂತೆ ಇದ್ದವರು ಶಾಂತಾದೇವಿ ಕಣವಿಯವರು. ಸೂಕ್ಷ್ಮವಾಗಿ ಕಾಲಘಟ್ಟದ ಬದಲಾವಣೆಗಳನ್ನು ಗಮನಿಸುತ್ತಾ, ಮೌನವಾಗಿ ಸ್ಪಂದಿಸುತ್ತಾ, ತನ್ನ ಕತೆಗಳ ಜಾಡನ್ನು ಸ್ವತಃ ತಾನೇ ರೂಪಿಸಿಕೊಳ್ಳುತ್ತಾ ಹೋದವರವರು. ಸಾಹಿತ್ಯಾಸಕ್ತಿಯ ದೊಡ್ಡ ಪರಿಸರದ ತವರಿನಿಂದ, ಸಾಹಿತಿಯ ಪತ್ನಿಯಾಗಿ ಧಾರವಾಡದ ಸಾಂಸ್ಕೃತಿಕ ಪರಿಸರಕ್ಕೆ ಬಂದ ಶಾಂತಾ ಅವರು ತಾನೇನು ಬರೆಯಬೇಕು ಎಂಬುದರ ಬಗೆಗೆ ತನಗೆ ತಾನೇ ಖಚಿತ ಪಡಿಸಿಕೊಂಡು ಅದಕ್ಕೆ ಬದ್ಧರಾಗಿದ್ದುದನ್ನು ಅವರ ಬರಹ ಮಾತ್ರವಲ್ಲ, ಅವರ ಸಂದರ್ಶನಗಳಲ್ಲಿನ ಮಾತುಗಳೂ ಸ್ಪಷ್ಟಪಡಿಸುತ್ತವೆ. ತಾನು ಭಾವಜೀವಿಯಲ್ಲದೆ ವಾಸ್ತವವಾದಿಯಾಗಿದ್ದರಿಂದ ತನಗೆ ಕವಿತೆಯನ್ನು ಬರೆಯಲಾಗದು ಎಂದು ಅನ್ನಿಸಿದ್ದನ್ನು ಹೇಳುವ ಅವರು, ಕತೆಯನ್ನೇ ವಿಸ್ತರಿಸಿ ಕಾದಂಬರಿ ಬರೆಯುವಷ್ಟು ತಾಳ್ಮೆ ಇದ್ದಿರಲಿಲ್ಲ ಎಂದು ಸರಳವಾಗಿ ಹೇಳಿಕೊಳ್ಳುತ್ತಾರೆ. ಅವರ ಈ ಪ್ರಾಂಜಲತೆ ಸಾಹಿತಿಯ ಘನತೆಯ ಇನ್ನೊಂದು ಮುಖವೂ ಆಗಿ ನನಗೆ ಕಾಣಿಸುತ್ತದೆ. ಯಾವ ಹಪಹಪಿಯಾಗಲಿ, ಜನಪ್ರಿಯತೆಯ ಹಿಂದಿನ ಓಟವಾಗಲಿ, ಪ್ರಸಿದ್ಧ ಕವಿಯ ಪತ್ನಿಯ ಪಾತ್ರದ ಪ್ರಭಾವವಾಗಲಿ ಬಳಸಿಕೊಳ್ಳದ, ಕತೆಯ ಬರವಣಿಗೆಯನ್ನು ತಾನು ಸದಾ ತೊಡಗಿಸಿಕೊಂಡಿದ್ದ ಇನ್ನೊಂದು ಹವ್ಯಾಸವಾದ ಹೆಣಿಗೆಯಂತೆಯೇ ಇನ್ನೊಬ್ಬರಿಗೆ ಕೊಡುವ ಕೊಡುಗೆಯಂತೆಯೇ ಭಾವಿಸಿದ ಅವರ ವ್ಯಕ್ತಿತ್ವದ ಅಂಶವನ್ನು ನಾವು ಅವರ ಈ ಸ್ಮರಣ ಸಂಚಿಕೆಯ ಮೂಲಕ ಗ್ರಹಿಸುವುದು ಇಂದಿನ ಕಲುಷಿತ ಕಾಲಘಟ್ಟದ ಅವಶ್ಯಕತೆಯೂ ಆಗಿದೆ ಅನ್ನಿಸುತ್ತದೆ.

ನೂರು ಕತೆಗಳನ್ನು ಬರೆದವರು ಶಾಂತಾ ಕಣವಿಯವರು. ಹೆಣ್ಣಿನ ಬದುಕಿನ ಭಿತ್ತಿಯನ್ನೇ ಕೇಂದ್ರವಾಗಿಸಿಕೊಂಡು ಅದರ ವಿವಿಧ ಮಗ್ಗುಲುಗಳನ್ನು ಕತೆಗಳಲ್ಲಿ ಕಾಣಿಸುತ್ತಾರೆ. ಕತೆಯ ನಿರೂಪಣೆಯಲ್ಲಿ ಸಂಕೀರ್ಣತೆಗಿಂತ ಸರಳತೆಯೇ ಮುನ್ನೆಲೆಗೆ ಬರುತ್ತದೆ. ಹೆಣ್ಣಿನ ಸಂಕಟಗಳಿಗೆ ಧ್ವನಿಯಾಗುವಾಗ ಆ ಸಂಕಟಗಳ ಹಿಂದಿರುವ ಅಮಾನವೀಯತೆಯನ್ನು ಪ್ರಕಟಗೊಳಿಸುವುದು ಮತ್ತು ಅದನ್ನು ನಿವಾರಿಸುವುದಕ್ಕೆ ಮಾನವೀಯ ಸ್ಪಂದನೆಯನ್ನು ಕತೆಯ ಮೂಲಕ ಸ್ಫುರಿಸುವುದರೆಡೆಗೆ ಅವರ ಗಮನವಿರುತ್ತದೆ. ತನ್ನ ಬರವಣಿಗೆಯ ಸುಮಾರು ನಲವತ್ತು ವರ್ಷಗಳ ಕಾಲಾವಧಿಯಲ್ಲಿ ಕನ್ನಡ ಸಾಹಿತ್ಯ ರಂಗದಲ್ಲಿ ಕಾಣಿಸಿಕೊಂಡ ಹಲವು ರೀತಿಯ ಬದಲಾವಣೆಗಳು, ಪ್ರಭಾವಗಳ ಕುರಿತು ಅರಿವಿದ್ದರೂ ತನ್ನದೇ ಪಥವನ್ನು ನಿರ್ಮಿಸಿಕೊಂಡ ಶಾಂತಾ ಅವರು ಸ್ತ್ರೀವಾದವನ್ನೂ ಸೇರಿಸಿಕೊಂಡು, ಎಲ್ಲ ರೀತಿಯ ಬದಲಾವಣೆಗಳನ್ನೂ ಇತ್ಯಾತ್ಮಕವಾಗಿ ನೋಡುತ್ತಾರೆ. ಒಂದು ಕಾಲದಲ್ಲಿ ತನ್ನ ಹದಿನೈದು ವರ್ಷದ ಮಗಳಿಗೆ ಕಾಲೇಜಿಗೆ ಸೇರುವುದಾದರೆ ನಿತ್ಯವೂ ಸೀರೆಯನ್ನೇ ಉಟ್ಟು ಹೋಗಬೇಕು ಎಂದು ತಾಕೀತು ಮಾಡುವಷ್ಟು ಸಾಂಪ್ರದಾಯಿಕವಾಗಿದ್ದ ಶಾಂತಾ ಅವರು ಕಾಲಾಂತರದಲ್ಲಿ ಹೆಣ್ಣಿನ ವಿರುದ್ಧದ ತಾರತಮ್ಯವನ್ನು ಬರವಣಿಗೆಯ ಮೂಲಕ ಪ್ರತಿಭಟಿಸಬೇಕು ಎಂಬ ನಿಲುವಿನವರಾಗಿ ಬೆಳವಣಿಗೆ ಸಾಧಿಸಿದ್ದನ್ನು ಈ ಸಂಪುಟ ಹಿಡಿದಿಡುತ್ತದೆ.


ಈ ಸಂಪುಟದ ಆರಂಭದ ನೂರು ಪುಟಗಳಲ್ಲಿ ಶಾಂತಾ ಅವರ ಕೆಲವು ಅಪ್ರಕಟಿತ ಹಾಗೂ ಪ್ರಕಟಿತ ಲೇಖನಗಳನ್ನು ನೀಡಲಾಗಿದೆ. ಅದರಲ್ಲಿ ಅವರ ಬಾಲ್ಯದ ಚೇತೋಹಾರಿ ನೆನಪುಗಳು ಹಾಗೂ ಅವರು ಮೊದಲು ಕಣವಿಯವರನ್ನು ನೋಡಿದ, ಅವರೊಂದಿಗೆ ಮದುವೆಯಾದ ಮಧುರ ನೆನಪುಗಳು ಆತ್ಮೀಯವೆನಿಸುತ್ತದೆ. ಅವರ ತಂದೆಯ ಸಾಹಿತ್ಯಾಸಕ್ತಿ ಮತ್ತು ಪುಸ್ತಕಗಳ ಸಂಗ್ರಹ, ಶಿಸ್ತುಗಳು, ಲೇಖಕರ ಒಡನಾಟ ಮೊದಲಾದ ವಿವರಗಳು ಈ ಸಂಪುಟದಲ್ಲಿ ಮತ್ತೆ ಮತ್ತೆ ಪ್ರಸ್ತಾಪಿತವಾಗುವಷ್ಟು ಹಲವರನ್ನು ಪ್ರಭಾವಿಸಿವೆ. ಒಡನಾಡಿಗಳ ಆತ್ಮೀಯ ನೆನಪುಗಳ ಮೆಲುಕಿನ ಜೊತೆಯಲ್ಲಿ ಅವರ ಸಾಹಿತ್ಯದ ಕುರಿತಾದ ಕೆಲವು ವಿಮರ್ಶಾ ಲೇಖನಗಳು ಇಲ್ಲಿದ್ದು, ಇದು ಸಂಪುಟದಲ್ಲಿ ಪ್ರಮುಖ ಭಾಗವಾಗಿದೆ. ಇದರಲ್ಲಿ ಗಿರಡ್ಡಿ, ಆಮೂರ, ನರಹಳ್ಳಿ ಬಾಲಸುಬ್ರಹ್ಮಣ್ಯ ಮೊದಲಾದವರ ಮುನ್ನುಡಿ ರೂಪದ ಬರಹಗಳಿವೆ. ಕುತೂಹಲದ ಸಂಗತಿಯೆಂದರೆ ಇವರೆಲ್ಲರ ವಿಮರ್ಶೆಯಲ್ಲಿಯೂ ಒಂದು ಸಂಕೋಚ ಇದೆ. ವೈಯಕ್ತಿಕವಾಗಿ ಅಪಾರ ಗೌರವವಿದ್ದೂ ಅವರ ಕತೆಗಳ ಬಗೆಗೆ ಬರೆಯುವಾಗ ಅತ್ತ ನಿಷ್ಠುರವೂ ಅಲ್ಲದ, ಇತ್ತ ಆಳವೂ ಅಲ್ಲದ ಒಂದು ಸರಿದೂಗಿಸುವಿಕೆ ಕಾಣಿಸುತ್ತದೆ. ಮತ್ತು ಇವರೆಲ್ಲರೂ ಹೆಚ್ಚೂ ಕಡಿಮೆ ಶಾಂತಾರನ್ನು ಮಾಸ್ತಿ ಪರಂಪರೆಗೆ ಸೇರಿಸುತ್ತಾರೆ. ಆದರೆ ಇದಕ್ಕೆ ಭಿನ್ನವಾಗಿ ಮಹಿಳೆಯರು ಬರೆದ ವಿಮರ್ಶೆಯಲ್ಲಿ ಶಾಂತಾರದು ಪ್ರಗತಿಶೀಲ ಪರಂಪರೆ ಎಂದು ಗುರುತಿಸಲಾಗಿದೆ. "ಮಹಿಳೆಯರ ಉದ್ಧಾರದ ಬಗ್ಗೆ ಯಾವ ಮಿಥ್ ಹರಡಲಾಗಿತ್ತೋ ಅದನ್ನು ನಿರಾಕರಿಸುವ ಹೆಣ್ಣಿನ ಕುರಿತ ಲೋಕದೃಷ್ಟಿಯನ್ನು ಬದಲಿಸುವ ಜವಾಬ್ದಾರಿ ಎದುರಿತ್ತು. ಅದನ್ನು ಬಹುರೂಪಗಳಲ್ಲಿ ಸಾಮಾಜಿಕ ಜವಾಬ್ದಾರಿಯ ಪ್ರೀತಿಯಲ್ಲಿ ಅಭಿವ್ಯಕ್ತಿಸಿದವರಲ್ಲಿ ಶಾಂತಾ ಒಬ್ಬರು" ಎನ್ನುವ ವಿನಯಾ ಒಕ್ಕುಂದರ ಮಾತುಗಳು ಶಾಂತಾರಂತಹ ಬರಹಗಾರ್ತಿಯರನ್ನು ನಾವು ನಿರ್ವಚಿಸಿಕೊಳ್ಳಬೇಕಾದ ದಾರಿಯನ್ನು ಸೂಚಿಸುತ್ತವೆ.

ಸಹೋದರಿತ್ವದ ನೆಲೆಯಲ್ಲಿ ನಿರಂತರವಾಗಿ ಹೀಗೆ ಹಿರಿಯ ಮಹಿಳಾ ಸಾಹಿತಿಗಳ ಅಭಿನಂದನಾ ಸಂಪುಟಗಳನ್ನು ತರುತ್ತಿರುವ ಶಾಂತಾ ಇಮ್ರಾಪುರರನ್ನೂ ಸೇರಿಸಿಕೊಂಡು ಎಲ್ಲಾ ಓರಗೆಯ ಹೆಂಗೆಳೆಯರಿಗೂ ಅಭಿನಂದನೆಗಳು.

**-ಸಬಿತಾ ಬನ್ನಾಡಿ**

ಪು: **ವೈಷ್ಣವ ಜನತೋ** (ಕಾದಂಬರಿ) ಲೇ: **ಲೋಕೇಶ ಅಗಸನಕಟ್ಟೆ** ಪ್ರ: **ಅಹರ್ನಿಶಿ ಪ್ರಕಾಶನ,** ಶಿವಮೊಗ್ಗ( ೯೪೪೯೧೭೪೬೬೨) ಪು: **೪೪೦** ಬೆ: **ರೂ. ೩೬೫/-**

### ಸಮೃದ್ಧ ಕಾದಂಬರಿಗೆ ಸರಳ ಉಪಾಯಗಳ ಸುಳಿ




**ಲೋ**ಕೇಶ ಅಗಸನಕಟ್ಟೆ ಅವರ ಮಹತ್ವಾಕಾಂಕ್ಷೆಯ ಕಾದಂಬರಿ- 'ವೈಷ್ಣವ ಜನತೋ'. ಇದರ ಭಿತ್ತಿ ಬಹಳ ದೊಡ್ಡದು; ಬಾಹುಗಳೂ ಉದ್ದ. ಏಕ ಕಾಲಕ್ಕೆ ಈ ಬಾಹುಗಳು ಅನೇಕ ವಿನ್ಯಾಸಗಳನ್ನು ಹಿಡಿಯಲು ನೋಡುತ್ತವೆ. ಹಳ್ಳಿ-ಪಟ್ಟಣ, ಕಾರ್ಮಿಕರು-ಬಂಡವಾಳಗಾರರು, ಒಳಿತು-ಕೆಡುಕು, ಮನುಷ್ಯರ ಒಳಗೇ ಇರುವ ಸ್ವಾರ್ಥ-ಉದಾರತೆ, ಹೀಗೆ ಸಂಕೀರ್ಣ ಸಂಗತಿಗಳನ್ನು, ವಿರೋಧಾಭಾಸಗಳನ್ನು ಅರಿಯಲು, ಒಳಗಿನ ಸೂಕ್ಷ್ಮಗಳನ್ನು ಪರೀಕ್ಷೆಗೆ ಒಡ್ಡಲು ಈ ಕಾದಂಬರಿ ನೋಡುತ್ತದೆ. ಕಾದಂಬರಿಯ ಮುಖ್ಯ ಗಮನ ಇರುವುದು ಗ್ರಾಮೀಣ ಭಾರತವನ್ನು ನುಂಗಿರುವ ಜಾತಿ ವ್ಯವಸ್ಥೆಯ ಮೇಲೆ. ಜಾತಿಗೋಡೆಯನ್ನು ಕೆಡವಿ ಮನುಷ್ಯರು ಮನುಷ್ಯರ ಮುಖವನ್ನು ನೋಡುವುದು ಸಾಧ್ಯವೇ ಎಂಬ ಚಿಂತನೆಯೇ ಇಲ್ಲಿನ ಮುಖ್ಯ ಆಶಯ. ಈ ದಿಕ್ಕಿನಲ್ಲಿಯೇ, ಕನಸುಗಳನ್ನು ಕಟ್ಟಿ ಪ್ರಯೋಗಗಳನ್ನು ಮಾಡಿದ ಗಾಂಧಿ-ಅಂಬೇಡ್ಕರ್ ಅವರನ್ನು ಪಕ್ಕಪಕ್ಕ ಇಟ್ಟು ನೋಡುವ, ಇಬ್ಬರ ವಿಚಾರಧಾರೆಗಳನ್ನು ಪರಸ್ಪರ ಪೂರಕವಾಗಿ ಗ್ರಹಿಸುವ-ಬೆಸೆಯುವ ಪ್ರಯತ್ನ ಈ ಕೃತಿಯ ಬೆನ್ನೆಲುಬಾಗಿದೆ.

ಜಾತಿಯ ಬೇರುಗಳು ಈ ದೇಶದಲ್ಲಿ ಬಹಳ ಆಳಕ್ಕೆ ಇಳಿದು ಮನುಷ್ಯರ ಬದುಕನ್ನು ತುಂಡು ತುಂಡು ಮಾಡಿವೆ. ಬಾಬಾ ಸಾಹೇಬ್ ಅಂಬೇಡ್ಕರ್ ರೂಪಿಸಿದ ಸಂವಿಧಾನವಾಗಲೀ, ಮತಧರ್ಮ ನಿರಪೇಕ್ಷ ತತ್ವವಾಗಲಿ, ಪ್ರಜಾಪ್ರಭುತ್ವವಾಗಲಿ ಇಲ್ಲಿ ಜಾತಿಯ ಗೋಡೆಗಳನ್ನು ಒಡೆಯಲಿಲ್ಲ; ಸಮಸಮಾಜದ ಕನಸು ಕೈಗೂಡಲೂ ಇಲ್ಲ. ಈ ವಿಷಾದ ಕೇವಲ ನಮ್ಮ ವರ್ತಮಾನದ್ದಲ್ಲ; ಚರಿತ್ರೆಯಲ್ಲಿಯೂ ಇದೆ. ಬುದ್ಧ-ಬಸವರ ಚರಿತ್ರೆಯ ತುಂಬ ಈ ವಿಷಾದದ ನೆರಳೇ. ಇಂಥ ವಿಷಾದದ ನಡುವೆಯೂ ಮತ್ತೆ ಮತ್ತೆ ಕನಸಿಗೆ ಕೈಚಾಚುವ ಕೃತಿಗಳು ಹುಟ್ಟುತ್ತಲೇ ಇವೆ. ಅಗಸನಕಟ್ಟೆಯವರದ್ದು ಈ ಸಾಲಿನಲ್ಲಿಯೇ ಬಂದಿರುವ ಕೃತಿ.

ಸ್ವಾತಂತ್ರ್ಯೋತ್ತರ ಭಾರತದ ಹಳ್ಳಿಗಳು ಬದಲಾಗುತ್ತಿರುವುದನ್ನು ಆಳವಾಗಿ ಮತ್ತು ಸೂಕ್ಷ್ಮವಾಗಿ ನೋಡುವ ಈ ಕಾದಂಬರಿ, ದಾವಣಗೆರೆಯಂಥ ಪಟ್ಟಣವೂ ಈ ಬದಲಾವಣೆಯಲ್ಲಿ ಪಡೆದುಕೊಳ್ಳುತ್ತಿರುವ ಹೊಸರೂಪವನ್ನು ಕಾಣಿಸಲು ಹವಣಿಸುತ್ತದೆ. ಹಳ್ಳಿ ಬದುಕಿನ ಒಳ ವಿನ್ಯಾಸಗಳಿಗೆ ಮತ್ತು ನಗರ ಬದುಕಿನ ಹೊರ ವಿನ್ಯಾಸಗಳಿಗೆ ಕೈಚಾಚುವ ಇಲ್ಲಿನ ಪ್ರಯತ್ನ ಕುತೂಹಲಕಾರಿಯಾಗಿದೆ. ಮಣ್ಣಿನಲ್ಲಿಯೇ ಬೇರುಬಿಟ್ಟು, ಮಣ್ಣಿನ ಗುಣಸತ್ವಗಳನ್ನು ತಿಳಿದು, ಬದುಕಿನ ಸಂವೇದನೆ, ಸ್ಪಂದನಗಳನ್ನು ಬಲ್ಲವರು ಮಾತ್ರ ಬರೆಯಬಹುದಾದ ಈ ಕಾದಂಬರಿ ದಟ್ಟವಾದ ಚಿತ್ರಗಳಲ್ಲಿ ಸಮೃದ್ಧಿ ಮತ್ತು ಜೀವಂತಿಕೆಗಳನ್ನು ತುಳುಕಿಸುತ್ತದೆ. ದಾವಣಗೆರೆಯ ಭಾಷೆ, ಬನಿ, ಲಯವಿನ್ಯಾಸಗಳು, ನಾದ ನಿನಾದಗಳು ಕಾದಂಬರಿಯ ನಡಿಗೆಗೆ ಸೆಳವು–ರಭಸಗಳನ್ನು ತಂದಿವೆ. ಬದುಕಿನ ಕಠೋರ ಸತ್ಯಗಳಲ್ಲಿ, ಸಂಘರ್ಷಗಳಲ್ಲಿ, ಅನುಭವಗಳಲ್ಲಿ ಗಾಂಧಿ–ಅಂಬೇಡ್ಕರ್ ಅವರ ತಾತ್ವಿಕ ಚಿಂತನೆಯನ್ನಿಟ್ಟು ನೋಡುವ ಈ ಕೃತಿ, ತನ್ನ ಅರ್ಥವಂತಿಕೆ, ಆಯಾಮಗಳನ್ನು ಈ ಮೂಲಕವೇ ಹಿಗ್ಗಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಗ್ರಾಮ–ಪಟ್ಟಣ ಎರಡೂ ಈ ಕಾದಂಬರಿಯ ಭಿತ್ತಿಯಲ್ಲಿ ಮೈಪಡೆಯಲು ನೋಡಿದರೂ, ಇಲ್ಲಿ ನಿಜರೂಪ ತೋರಿರುವುದು ಗ್ರಾಮ ಭಾರತವೇ. ದಾವಣಗೆರೆ ಎನ್ನುವ ಪಟ್ಟಣ ಅಲ್ಲಲ್ಲಿ ಮುಖದೋರಿದರೂ, ಕಾರ್ಮಿಕ ಲೋಕವನ್ನು ಸಂಪೂರ್ಣವಾಗಿ ಅನಾವರಣ ಮಾಡುವುದು ಇಲ್ಲಿ ಸಾಧ್ಯವಾಗಿಲ್ಲ. ಗಾಂಧೀ ಚಿಂತನೆಗೆ ವಿರುದ್ಧವಾಗಿ ತಲೆ ಎತ್ತಿದ ಗಿರಣಿಗಳು ಬದುಕಿಗೆ ನೆಮ್ಮದಿಯನ್ನು ತಂದುಕೊಡುವಲ್ಲಿ ಹೇಗೆ ಸೋತಿವೆ ಎಂಬ ಒಂದು ಎಳೆ ಇಲ್ಲಿದೆಯಾದರೂ, ಈ ದಿಕ್ಕಿನಲ್ಲಿ ಕಾದಂಬರಿ ಹೆಚ್ಚು ಬೆಳಕನ್ನು ಚೆಲ್ಲುವುದಿಲ್ಲ. ಬಸನಕಟ್ಟೆ ಕೇಂದ್ರದಂತೆ ದಾವಣಗೆರೆಯೂ ಕಾದಂಬರಿಯ ಇನ್ನೊಂದು ಕೇಂದ್ರವಾಗಬಹುದಿತ್ತು. ಗಿರಣಿಗಳ ಜಗತ್ತಿನ ಒಳಮುಖವನ್ನು ಹಿಡಿಯಬಹುದಾಗಿತ್ತು. ಆದರೆ ಹಾಗಾಗದೆ ರೇಖೆಗಳಲ್ಲಷ್ಟೆ ಈ ಚಿತ್ರ ಕಾಣಿಸಿಕೊಂಡಿದೆ. ಕಾರ್ಮಿಕಲೋಕದ ಹೊರಮುಖವನ್ನು ನೋಡಲು ಇಲ್ಲಿ ಬಳಸಿರುವ ತಂತ್ರವೇನೋ ಆಕರ್ಷಕವಾಗಿದೆ. ಗುಜರಾತ್‌ನಿಂದ ಬಂದ ಹೋಟೆಲ್ ಮಾಲೀಕ ಶಿಂಧೆಯ ಮೂಲಕ ನೋಡುವ ಈ ತಂತ್ರಗಾರಿಕೆ ಕುತೂಹಲಕರವಾಗಿದೆ.

ಅಂಬೇಡ್ಕರ್ ಮತ್ತು ಗಾಂಧಿಯವರನ್ನು ಕುರಿತ ಸೆಕೆಂಡ್ ಹ್ಯಾಂಡ್ ಪುಸ್ತಕಗಳಲ್ಲಿ ಈಗಾಗಲೇ ಓದಿರುವ ವ್ಯಕ್ತಿಯೊಬ್ಬರು ಮಾಡಿರುವ ಗುರುತುಗಳು, ಅಲ್ಲಲ್ಲಿ ಬರೆದಿರುವ ಅಭಿಪ್ರಾಯಗಳು. ಇವುಗಳನ್ನು ಗಮನಿಸುತ್ತಲೇ ಇಲ್ಲಿನ ಪ್ರಧಾನ ಪಾತ್ರ ವಾಸಣ್ಣ, ಈ ಇಬ್ಬರು ಮಹನೀಯರ ವೈಚಾರಿಕ ಚಿಂತನೆಗಳ ತುಲನೆಗಿಳಿಯುವುದು, ಗಾಂಧಿ–ಅಂಬೇಡ್ಕರ್ ಅವರನ್ನು ಎದುರಾಬದರು ನಿಲ್ಲಿಸುವುದು ಇನ್ನೊಂದು ಬಗೆಯ ತಂತ್ರಕೌಶಲ. ಇದು ಕೂಡಾ ಆರ್ಷಕವಾಗಿದೆ. ಗಾಂಧಿ–ಅಂಬೇಡ್ಕರ್ ತಾತ್ವಿಕ ಚಿಂತನೆಗಳನ್ನು ಗ್ರಹಿಸುತ್ತ, ಒಂದರೊಳಗೊಂದು ಬೆರೆಸುತ್ತ, ಸದ್ಯದ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಸಂವಾದಗಳು, ಚರ್ಚೆಗಳು ಕೃತಿಯ ಉದ್ದಕ್ಕೂ ಬೇರೆಬೇರೆಯ ರೀತಿಯಲ್ಲಿ ಬರುತ್ತವೆ.

ಸಮೃದ್ಧವಾದ ವಿವರಗಳು ಹೇಗೆ ಕೃತಿಯ ಜೀವಂತಿಕೆಯನ್ನು ಪೊರೆಯುತ್ತವೆ ಎನ್ನುವುದಕ್ಕೆ ಎರಡು ಪ್ರಸಂಗಗಳನ್ನು ನೋಡಬಹುದು: ಒಂದು ಪ್ರಸಂಗದಲ್ಲಿ ಬ್ರಾಹ್ಮಣ ಕುಟುಂಬದಲ್ಲಾಗುವ ಹೆರಿಗೆ. ಸೂಲಗಿತ್ತಿ ಶೂದ್ರ ಹೆಣ್ಣುಮಗಳು. ಇನ್ನೊಂದು ಪಶುವೈದ್ಯರೊಬ್ಬರು ಗಬ್ಬದೆಮ್ಮೆಯ ಒಡಲಿಂದ ಕರುವನ್ನು ಹೊರತೆಗೆಯುವ ಪ್ರಸಂಗ. ಮೊದಲನೆಯದು ದೇಸೀ ಅರಿವಿನ, ಅನುಭವದ ಸಹಜ ಕೌಶಲ; ಎರಡನೆಯದು ಆಧುನಿಕ ಜ್ಞಾನ ಕಲಿಸಿಕೊಟ್ಟ ವಿದ್ಯೆ. ಮೊದಲನೆಯದರಲ್ಲಿ ಜೀವ ಸುರಕ್ಷಿತವಾಗಿದ್ದರೆ ಎರಡನೆಯದರಲ್ಲಿ ಅದು ಸಾಧ್ಯವಾಗುವುದಿಲ್ಲ. ದೇಸಿ–ಆಧುನಿಕ ವಿದ್ಯೆಗಳ ಮುಖಾಮುಖಿಗಿಂತ ಇಲ್ಲಿ ಮುಖ್ಯವಾಗಿರುವುದು ಈ ಇಬ್ಬರು ವೈದ್ಯರಲ್ಲಿರುವ ಮಾನವೀಯ ಕರುಳನ್ನು ಮಿಡಿಯುವುದು. ಕೃತಿಯ ಉದ್ದಕ್ಕೂ ಈ ಮಾನವೀಯ ಮಿಡಿತಕ್ಕೆ ಹಂಬಲಿಸುವುದು ಕಾಣಿಸುತ್ತದೆ.

ಇಂಥ ಜೀವಂತ ವಿವರಗಳು ಕೃತಿಯಲ್ಲಿ ಸಮೃದ್ಧವಾಗಿವೆ. ತನ್ನನ್ನು ಪೂರ್ಣವಾಗಿ ತೊಡಗಿಸಿಕೊಂಡ ಲೇಖಕ ಅದರಲ್ಲಿಯೇ ಮುಳುಗಿ ಬರೆಯುವ ಗುಣವೂ ಇಲ್ಲಿದೆ. ಜೊತೆಗೆ ಕೃತಿಕಾರ ತನ್ನ ಬರಹಕ್ಕೆ ತಾನೇ ಮೋಹಿತನಾಗಿ ಬರೆಯುವಾಗಿನ ದೋಷಗಳೂ ಇಲ್ಲಿವೆ. ಇಂಥ ಕಡೆಗಳಲ್ಲಿ ಕೃತಿಯ ಮೊನಚು, ಧ್ವನಿಶಕ್ತಿ ಕಳೆದುಹೋಗಿವೆ.

ಹಿಂಸೆಯನ್ನು ಅಹಿಂಸೆ ಗೆಲ್ಲುತ್ತದೆ, ಕೆಟ್ಟದ್ದನ್ನು ಒಳ್ಳೆಯದು ಬದಲಾಯಿಸುತ್ತದೆ ಎಂಬ ತತ್ವ ಮತ್ತು ಎಲ್ಲರನ್ನೂ ಒಳಗೊಳ್ಳುತ್ತಲೇ ಸಮಾಜವನ್ನು ಕಟ್ಟಬೇಕೆಂಬ ಕನಸಿನಲ್ಲಿ ಅಗಸನಕಟ್ಟೆಯವರು ಇಟ್ಟಿರುವ ಅಖಂಡ ವಿಶ್ವಾಸ ಮೆಚ್ಚಬಹುದಾದರೂ, ಇಂಥ ಕನಸುಗಳು, ಸುಡುವ ಸಮಸ್ಯೆಗಳನ್ನು ದಾಟಲು ಸುಲಭ ಉಪಾಯಗಳಾಗಿ ಒದಗಿಬರುವುದನ್ನೂ ಇಲ್ಲಿ ಕಾಣಬಹುದು. ಕೊನೆಕೊನೆಗೆ ಕಾದಂಬರಿ ಪಡೆದುಕೊಳ್ಳುವ ತಿರುವುಗಳು ಇದನ್ನು ತೋರಿಸುತ್ತವೆ. ಬದಲಾಗದವರು ಊರಿನಿಂದ ದೂರಹೋಗುತ್ತಾರೆ; ಜಾತಿಗೋಡೆಗಳನ್ನು ಒಡೆಯಲು ಅಂತರ್ಜಾತಿಯ ಮತ್ತು ವಿಧವಾ ವಿವಾಹಗಳು ಸುಲಭವಾಗಿ ನಡೆಯುತ್ತವೆ. ಈ ಉಪಾಯಗಳ ಸುಳಿಗೆ ಅಗಸನಕಟ್ಟೆ ಸಿಕ್ಕಬಾರದಿತ್ತು.

**–ಜಿ.ಪಿ. ಬಸವರಾಜು**

**ಡ್ಯುಯಟ್** (ವಿಕೇಂದ್ರೀಕೃತ ನಗರ ಉದ್ಯೋಗ ಹಾಗೂ ತರಬೇತಿ: ಒಂದು ಚರ್ಚೆ) ಕನ್ನಡಕ್ಕೆ: **ವೇಣುಗೋಪಾಲ ಟಿ.ಎಸ್ ಮತ್ತು ಶೈಲಜ** ಪ್ರ: **ಟೆಕ್‌ಫಿಜ಼್ ಇಂಕ್**, ಬೆಂಗಳೂರು (೯೦೦೦೮೨೭೭೩) ಪು: ೧೦೩ ಬೆ: **ರೂ.೧೧೦/–**

## ನಗರ ನಿರುದ್ಯೋಗ ಸಮಸ್ಯೆಗೊಂದು ಪರಿಹಾರ ಪ್ರಸ್ತಾವ




ನಗರಗಳಿಗೆ ವಲಸೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ ಇವತ್ತು ಹೆಚ್ಚು ಚರ್ಚೆಗೊಳಗಾಗುತ್ತಿರುವ ಸಂಗತಿಗಳು. ನಗರ ಕೇಂದ್ರಿತ ಅಭಿವೃದ್ಧಿ ವೇಗ ಪಡೆಯುತ್ತಿರುವ ಸಂದರ್ಭದಲ್ಲಿ ಇವು ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತಿರುವ ಸಂಗತಿಗಳೂ ಹೌದು. ಹೀಗಿರುವಾಗ ನಗರ ಪ್ರದೇಶದ ನಿರುದ್ಯೋಗ ಸಮಸ್ಯೆಗೆ ಪರಿಹಾರ ಹುಡುಕುವ ಪ್ರಯತ್ನವಾಗಿ ನಡೆದ ಚರ್ಚೆ 'ಡ್ಯುಯೆಟ್' ('DUET' Decentralised Urban Employment and training–ವಿಕೇಂದ್ರೀಕೃತ ನಗರ ಉದ್ಯೋಗ ಹಾಗೂ ತರಬೇತಿ') ಹೆಸರಿನ ಪುಸ್ತಕವಾಗಿ ಪ್ರಕಟವಾಗಿದೆ. ೧೬ ಮಂದಿ ಆರ್ಥಿಕ ತಜ್ಞರು, ಚಿಂತಕರು ನಡೆಸಿದ ಚರ್ಚೆಯ ಈ ದಾಸ್ತಾವೇಜು ಹಲವು ಕಾರಣಗಳಿಗಾಗಿ ಇವತ್ತಿನ ಸಂದರ್ಭಕ್ಕೆ ಮುಖ್ಯವೆನಿಸುತ್ತದೆ.

ರಾಂಚಿ ಯೂನಿವರ್ಸಿಟಿಯ ಜಾನ್ ಡ್ರೇಜ್ ರೂಪಿಸಿ ಮಂಡಿಸಿರುವ ಈ 'ಡ್ಯುಯೆಟ್' ಕುರಿತಾದ ಚರ್ಚೆಯಲ್ಲಿ ನಗರದ ನಿರುದ್ಯೋಗ ಸಮಸ್ಯೆಗೆ ಪರ್ಯಾಯವನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಯುಪಿಎ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಗ್ರಾಮೀಣ ನಿರುದ್ಯೋಗ ನಿವಾರಣೆಗೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ (ಮನರೆಗಾ) ಜಾರಿಗೆ ತರುವುದರ ಮೂಲಕ ಗ್ರಾಮಾಂತರದಲ್ಲಿ ವರ್ಷಕ್ಕೆ ನೂರುದಿನಗಳ ಕೆಲಸವನ್ನು ಖಾತ್ರಿಗೊಳಿಸಿತ್ತು. ಇದು ಕ್ಷಾಮ, ಅತಿವೃಷ್ಟಿ ಮಾತ್ರವಲ್ಲದೆ ಕೋವಿಡ್ ಸಂದರ್ಭದಲ್ಲೂ ಕೊಟ್ಯಾಂತರ ಜನರ ಹಸಿವಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ನಿವಾರಿಸಿದೆ. ಇದೇ ರೀತಿಯಲ್ಲಿ ಡ್ಯುಯೆಟ್ ಮೂಲಕ ನಗರ ಪ್ರದೇಶದ ನಿರುದ್ಯೋಗ ಸಮಸ್ಯೆಗೆ ಪರಿಹಾರ ಮತ್ತು ನಗರಗಳ ಮೂಲ ಸೌಕರ್ಯವನ್ನು ಉತ್ತಮಪಡಿಸಬಹುದು ಎನ್ನುವುದು ಈ ಮಂಡನೆಯ ಹಿಂದಿನ ಆಶಯವಾಗಿದೆ. ನಗರ ಪ್ರದೇಶದಲ್ಲಿನ ಉದ್ಯೋಗಾವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಉದ್ಯೋಗದ ಸ್ಟಾಂಪ್ ಬಿಡುಗಡೆ ಮಾಡುತ್ತದೆ. ಅನುಮೋದಿತ ಸಾರ್ವಜನಿಕ ಸಂಸ್ಥೆಗಳು ಶಾಲಾ ಕಾಲೇಜು, ಆರೋಗ್ಯ ಕೇಂದ್ರ, ಬಸ್ ನಿಲ್ದಾಣ, ಜೈಲು, ಹಾಸ್ಟೆಲ್, ಪಾರ್ಕ್ ಇತ್ಯಾದಿ ಮೊದಲೇ ವಿಧ್ಯುಕ್ತವಾಗಿ ಪಟ್ಟಿಯಾದ ಕಾಮಗಾರಿಗಳನ್ನು ಮೊದಲೇ ನೋಂದಿತರಾದ ಕೆಲಸಗಾರರಿಂದ ಮಾಡಿಸಿಕೊಂಡು ಅವರಿಗೆ ಈ ಸ್ಟಾಂಪ್ ವಿತರಿಸಿ ಆ ಮೂಲಕ ಅವರ ಖಾತೆಗೆ ಹಣ ಜಮಾ ಆಗುವ ವ್ಯವಸ್ಥೆ ಇದು. ದೇಶದ ಯಾವುದೇ ಭಾಗದ ಕಾರ್ಮಿಕರಾದರೂ ಈ ವ್ಯವಸ್ಥೆಯ ವ್ಯಾಪ್ತಿಗೆ ಬರಬಹುದಾದ್ದರಿಂದ ವಲಸೆ ಕಾರ್ಮಿಕರಿಗೂ ಇದರಿಂದ ಅನುಕೂಲವಾಗುವುದು ಎನ್ನುತ್ತಾರೆ ಜಾನ್.

ಇದರ ಸಾಧ್ಯಾಸಾಧ್ಯತೆಗಳು, ಸಾಧಕ–ಬಾಧಕಗಳು, ಆಡಳಿತಾತ್ಮಕ ಸಮಸ್ಯೆಗಳು, ಇದರಿಂದ ಹುಟ್ಟಿಕೊಳ್ಳಬಹುದಾದ ಭ್ರಷ್ಟಾಚಾರ ಎಲ್ಲವುಗಳ ಕುರಿತಾಗಿ ಬೇರೆ ಬೇರೆ ಆರ್ಥಿಕ ತಜ್ಞರು ನಡೆಸಿದ ಚರ್ಚೆಯೂ ಇಲ್ಲಿದ್ದು ನಮ್ಮ ಗಮನ ಸೆಳೆಯುತ್ತದೆ. ಮುಖ್ಯವಾಗಿ ಪ್ರಣಬ್ ಬರ್ದನ್, ಅಶ್ವಿನಿ ಕುಲಕರ್ಣಿ, ಮಾರ್ಟಿನ್ ರೇವಲ್ಲಿಯನ್, ಸ್ವಾತಿ ದಿಂಗ್ರಾ ಮೊದಲಾದವರ ಅಧ್ಯಯನಶೀಲ ವಿಶ್ಲೇಷಣೆಗಳು ಮತ್ತು ಒಳನೋಟಗಳು ಈ 'ಡ್ಯುಯೆಟ್' ಪ್ರಸ್ತಾವವನ್ನು ಮೊನಚುಗೊಳಿಸಿವೆ.

ಕೋವಿಡ್ ೧೯ ತಂದೊಡ್ಡಿದ ಮುಖ್ಯ ಸಮಸ್ಯೆಗಳಲ್ಲಿ ನಿರುದ್ಯೋಗವು ಒಂದು. ಅದರಲ್ಲೂ ನಗರ ಪ್ರದೇಶದ ನಿರುದ್ಯೋಗ. ಹೀಗಾಗಿ ಡ್ಯುಯೆಟ್ ಪ್ರಸ್ತಾವವು ಸಾಂದರ್ಭಿಕವಾದ ಮಹತ್ವವನ್ನು ಪಡೆದಿದೆ. ಉದ್ಯೋಗ ಒದಗಿಸದೆ ಹೋದರೆ ನಗರ ಪ್ರದೇಶಗಳಲ್ಲಿ ಒಂದು ಬಗೆಯ ಸಂಕ್ಷೋಭೆಯೇ ಸಂಭವಿಸುವ ವಾತಾವರಣ ಇರುವಾಗ ಡ್ಯುಯೆಟ್‌ನ ಪ್ರಸ್ತಾವ ಸಕಾಲಿಕವೂ ಆಗಿದೆ. ಈ ಚರ್ಚೆಯಲ್ಲಿ ಪ್ರಸ್ತಾಪವಾಗಿರುವಂತೆ ಮನರೆಗಾ ದಂತೆ ಈ ಡ್ಯುಯೆಟ್ ಕೂಡ ಅರ್ಹರನ್ನು ಪೂರ್ಣಪ್ರಮಾಣದಲ್ಲಿ ತಲುಪದೆ ಹೋಗುವ ಸಾಧ್ಯತೆಗಳು ಇವೆ. ಇವಕ್ಕೆಲ್ಲ ಪರಿಹಾರ ಕಂಡುಕೊಂಡು ಈ ಪ್ರಸ್ತಾವವನ್ನು ಯೋಜನೆಯಾಗಿ ರೂಪಿಸುವ ಅಗತ್ಯವಿದೆ.

ಮೈಸೂರಿನ ಸಾಮಾಜಿಕ ಕಳಕಳಿಯ ದಂಪತಿಗಳಾದ ಟಿ.ಎಸ್. ವೇಣುಗೋಪಾಲ್ ಮತ್ತು ಶೈಲಜ ಅವರು ಈ ಲೇಖನಗಳನ್ನು ಸಂಗ್ರಹಿಸಿ ಸೊಗಸಾಗಿ ಕನ್ನಡಕ್ಕೆ ಅನುವಾದಿಸಿರುವುದಲ್ಲದೆ, ಪುಸ್ತಕದ ಪ್ರಕಾಶನ ಮತ್ತು ಆಸಕ್ತರಿಗೆ ಅದನ್ನು ತಲುಪಿಸುವ ಜವಾಬ್ದಾರಿಯನ್ನೂ ಹೊತ್ತು ಈ ವಿಶಿಷ್ಟ ಪ್ರಸ್ತಾವದತ್ತ ಕನ್ನಡ ಓದುಗರ ಗಮನ ಸೆಳೆದು ಸಾರ್ಥಕ ಕೆಲಸ ಮಾಡಿದ್ದಾರೆ. ಅವರಿಗೆ ಅಭಿನಂದನೆಗಳು.

**–ಶೃಂಗೇಶ್**

ಪು: **ಲಂಕೇಶ್ ಜೊತೆಗೆ** ಲೇ: **ಬಿ. ಚಂದ್ರೇಗೌಡ** ಪ್ರ: **ಸಂಧ್ಯಾ ಪ್ರಕಾಶನ**, ಶಿವಮೊಗ್ಗ (೯೯೦೧೩೪೪೮೧೩೮) ಪು: **೧೬೫** ಬೆಲೆ ರೂ, **೧೩೦/-**

## ಲಂಕೇಶರ ಇನ್ನೊಂದು ಅರೆ ವ್ಯಂಗ್ಯಚಿತ್ರ




**'ಬಚ್ಚಿಟ್ಟ** ಸತ್ಯಗಳು' ಎಂಬ ಕುತೂಹಲಕರ ಶೀರ್ಷಿಕೆಯಡಿ ಲಂಕೇಶರನ್ನು ಕುರಿತ ಅಷ್ಟೇನೂ ಗುಪ್ತವಲ್ಲದ ಸಂಗತಿಗಳ ಸುತ್ತ ಪುಸ್ತಕ ಬರೆದಿದ್ದ ಬಿ. ಚಂದ್ರೇಗೌಡರು ಈಗ 'ಲಂಕೇಶ್ ಜೊತೆಗೆ' ಎಂಬ ನೇರ ಶೀರ್ಷಿಕೆಯಡಿ ಅವರೊಡನೆಯ ಒಡನಾಟ ಕುರಿತ ಇನ್ನಷ್ಟು ಸಂಗತಿಗಳನ್ನು ತಮ್ಮ ನೆನಪಿನ ಖಜಾನೆಯಿಂದ ಹೆಕ್ಕಿ ಇಲ್ಲಿ ದಾಖಲಿಸಿದ್ದಾರೆ. ಇಲ್ಲಿನ ಒಡನಾಟದ ನೆನಪುಗಳಲ್ಲಿ ಒಡನಾಡಿದ ಇಬ್ಬರು ಸಮಾನವಾಗಿಯೇನೂ ಕಾಣಿಸಿಕೊಳ್ಳದೆ ಹಲವೆಡೆ ಲಂಕೇಶ್ ಸಂಪೂರ್ಣ ಕಾಣೆಯಾಗಿದ್ದಾರೆ ಅಥವಾ ನೆಪಕ್ಕೆಂಬಂತೆ ಕಾಣಿಸಿಕೊಂಡು ಹೋಗುತ್ತಾರೆ. ಈ ಅರ್ಥದಲ್ಲಿ ಇದು 'ಪವಿತ್ರ ಪ್ರೇಮ' ಎಂಬ ಅರೆ ಗಂಭೀರ–ಅರೆ ತಮಾಷೆಯ ಆತ್ಮನಿ–ವೇದನೆಯನ್ನೂ ಒಳಗೊಂಡ ಚಂದ್ರೇಗೌಡರ ಆತ್ಮಕಥಾನಕದ ಒಂದು ಝಲಕ್‌ನಂತೆಯೂ ಓದಿಸಿಕೊಳ್ಳುತ್ತದೆ.

ಲಂಕೇಶರನ್ನು ನಾನೂ ಓರ್ವ ಹಿರಿಯ ಗೆಳೆಯನನ್ನಾಗಿ ಮತ್ತು ಆನಂತರ ಸ್ವಲ್ಪ ಕಾಲ ಅವರ ಪತ್ರಿಕೆಯ ಉದ್ಯೋಗಿಯಾಗಿಯೂ ಕಂಡಿದ್ದೇನೆ. ಅವರು ನಮ್ಮ ಕಾಲದ ಸಾಹಿತ್ಯಲೋಕದ ಒಂದು ಅನನ್ಯ ಪ್ರತಿಭೆಯೇ ಹೌದು. ಅವರು ತಮ್ಮದೇ ವಿಶಿಷ್ಟ ಸೃಜನಶೀಲತೆಯ ಮಹಾಪರ್ವತವೇ ಇರಬಹುದು. ಆದರೆ ಅವರು ಹಲವು ಸಣ್ಣತನಗಳ ಮತ್ತು ದುಷ್ಟತನಗಳ ಆಗರವೂ ಆಗಿದ್ದರು. ಅವರನ್ನು ದೀರ್ಘಕಾಲದ ಒಡನಾಡಿಯಾಗಿ ಸಹಿಸುವುದು ಒಂದು ಅಸಾಮಾನ್ಯ ಸವಾಲೇ ಆಗಿತ್ತು. ಒಂದು ಕಡೆ ಈ ಪುಸ್ತಕದಲ್ಲಿ ಚಂದ್ರೇಗೌಡರೇ, ಲಂಕೇಶ್ ಒಳ್ಳೆಯವರನ್ನು, ತಮ್ಮ ಪಾಡಿಗೆ ತಮ್ಮ ಕೆಲಸ ಮಾಡಿಕೊಂಡು ಹೋಗುವವರನ್ನು ಸಹಿಸುತ್ತಿರಲಿಲ್ಲ ಎಂದು ಬರೆದಿದ್ದಾರೆ. ಲಂಕೇಶರನ್ನು ಅವರೆಲ್ಲ ಶಕ್ತಿ–ದೌರ್ಬಲ್ಯಗಳೊಂದಿಗೆ ಸದ್ದಿಲ್ಲದೆ ಒಪ್ಪಿಕೊಂಡವರು ಮಾತ್ರ ಅವರೊಡನೆ ದೀರ್ಘ ಕಾಲ ಇರಬಲ್ಲವರಾಗಿದ್ದರು. ಅಂಥವರಲ್ಲಿ ಬಹುಶಃ ಚಂದ್ರೇಗೌಡರೂ ಒಬ್ಬರು. ಅದಕ್ಕೆ ಮುಖ್ಯ ಕಾರಣ ಈ ಪುಸ್ತಕದಲ್ಲಿ ಹಲವೆಡೆ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಸೂಚಿತವಾಗಿರುವಂತೆ ಚಂದ್ರೇಗೌಡರ ಬರಹದ ವಿಶಿಷ್ಟ ಶಕ್ತಿಯನ್ನು ಗುರುತಿಸಿ ಮಾನ್ಯ ಮಾಡಬಲ್ಲವರು ಮತ್ತು ಮಾನ್ಯ ಮಾಡಿದವರು ಲಂಕೇಶ್ ಮಾತ್ರವಾಗಿದ್ದುದು.


ಈ ಎಲ್ಲ ಅಂಶಗಳನ್ನು ಗಮನದಲಿಟ್ಟುಕೊಂಡು ಓದಿದರೆ ಮಾತ್ರ ಈ ಪುಸ್ತಕ ಲಂಕೇಶರನ್ನು ಕನ್ನಡ ಸಾಂಸ್ಕೃಕ ಲೋಕದ ಒಂದು ದಂತಕಥೆಯನ್ನಾಗಿ ಮಾಡಲೆಳಸುವ ಲೇಖಕರ ಪ್ರಯತ್ನವನ್ನು ಸಹಾನುಭೂತಿಯಿಂದ ನೋಡಲು ಸಾಧ್ಯವಾಗುತ್ತದೆ. ಏಕೆಂದರೆ ಲಂಕೇಶರ ಕಣ್ಣಲ್ಲಿ ಕೇಡಿಗಳಾಗಿ ಕಂಡವರೆಲ್ಲ ಇಲ್ಲಿ ಯಾವುದೇ ವಿಮರ್ಶೆ ಇಲ್ಲದೆ ಶುದ್ಧ ಕೇಡಿಗಳಾಗಿಯೇ ಉಳಿದಿದ್ದಾರೆ. ಹಾಗೇ ಲಂಕೇಶರ ಸಣ್ಣತನಗಳೆಲ್ಲ ಅವರ ಸೃಜನಶೀಲತೆಯ ಸಹಜ ತಿಕ್ಕಲುತನಗಳೆಂಬಂತೆ ಇಲ್ಲಿನ ನಿರೂಪಣೆಗಳಲ್ಲಿ ಹಾದುಹೋಗಿವೆ. ಒಂದು ಉದಾಹರಣೆಯಾಗಿ ಹೇಳುವುದಾದರೆ, ಲಂಕೇಶ್ ತಮ್ಮ ಒಡಹುಟ್ಟಿದ ಸೋದರನನ್ನು ಕುರಿತು ತೋರುವ ಬಹಿರಂಗ ತಿರಸ್ಕಾರ–ಅಸಹನೆಗಳು ಅಕ್ಷಮ್ಯ ಎನಿಸುತ್ತದೆ. ಆದರೆ ಇಂಥವನ್ನು ಅವಿದ್ದಂತೆಯೇ ಚಿತ್ರಿಸಿ ಮೌನ ವ್ಯಾಖ್ಯಾನ ಮಾಡುವ ಲೇಖಕರ ಪ್ರತಿಭೆಯೂ ಇಲ್ಲಿ ಗಮನಾರ್ಹವೆನಿಸುತ್ತದೆ.

ಈ ಪುಸ್ತಕದಲ್ಲಿ ಲಂಕೇಶ್ ಒಬ್ಬ ಲೇಖಕನಾಗಿ ಅಥವಾ ಪತ್ರಕರ್ತನಾಗಿಯೇನೂ ಹೆಚ್ಚು ಪ್ರಸ್ತುತಗೊಂಡಿಲ್ಲ ಮತ್ತು ಚರ್ಚಿತವಾಗಿಲ್ಲ. ಬದಲಿಗೆ ಒಬ್ಬ ವ್ಯಕ್ತಿಯಾಗಿ, ನಿರ್ದಿಷ್ಟವಾಗಿ ಒಬ್ಬ ಸಾಮಾಜಿಕ ವ್ಯಕ್ತಿಯಾಗಿ ಚಂದ್ರೇಗೌಡರಿಗೇ ವಿಶಿಷ್ಟವಾದ ಗ್ರಾಮ್ಯ ಭಾಷಾ ಶೈಲಿ ಮತ್ತು ನಿರೂಪಣೆಗಳ ಮೂಲಕ ಮಂಡಿಸಲ್ಪಟ್ಟಿದ್ದಾರೆ. ಇದರಿಂದಾಗಿ ಇಲ್ಲಿ ಮೂಡಿರುವುದು ಲಂಕೇಶರ ಅರೆ ವ್ಯಂಗ್ಯಚಿತ್ರವೆನ್ನಬಹುದಾದ ಆಕರ್ಷಕ 'ಕ್ಯಾರಿಕೇಚರ್'. ಹಾಗಾಗಿ ಇಲ್ಲಿ ಒಂದು ಕಡೆ ಮನುಷ್ಯ ಮೂಲತಃ ಒಳ್ಳೆಯವನು ಎಂದು ನಂಬಿದ್ದ ಗಾಂಧಿಯ ಅಭಿಮಾನಿಯಾಗಿ, ಇನ್ನೊಂದು ಕಡೆ ಮನುಷ್ಯ ಮೂಲತಃ ದುಷ್ಟ ಎಂದು ವೈಯಕ್ತಿಕವಾಗಿ ನಂಬಿ ವರ್ತಿಸುತ್ತಾ, ಬರೆದ ಲಂಕೇಶ್ ತಮ್ಮ ಬದುಕಿನ ಕೊನೆಯ ಘಟ್ಟದಲ್ಲಿ ಏನಾದರೂ ಆಗಿ ಮಾಗಿದ್ದರೆ ಎಂಬ ಘನ ಪ್ರಶ್ನೆಯನ್ನೇನೂ, ಅವರ ಸಾವನ್ನೂ, ಅನಂತರದ ಅವರ ಕುಟುಂಬದ ಪಡಿಪಾಟಲುಗಳನ್ನೂ ವಿವರವಾಗಿ ಚಿತ್ರಿಸುವ ಈ ಪುಸ್ತಕ ಎದುರುಗೊಳ್ಳುವುದಿಲ್ಲ. ಆದರೆ ಲಂಕೇಶ್ ಪತ್ರಿಕೆಯ ಕೊನೆಯ ವರ್ಷವೂ ಆದ ಅದರ ಇಪ್ಪತ್ತನೆಯ ವರ್ಷದ ಆಚರಣೆಯ ಕೊನೆಯಲ್ಲಿ ಲಂಕೇಶ್ ಆಡಿದರೆಂದು ಈ ಪುಸ್ತಕ ಹೇಳುವ ಈ ಮಾತುಗಳು ಈ ಸಂಬಂಧ ಎಲ್ಲವನ್ನೂ ಹೇಳುವಂತಿವೆ: "ಈವರೆಗೆ ಆದದ್ದು ಆಯಿತು, ಮುಂದೆ ಸರಿ ಮಾಡಿಕೊಳ್ಳಬೇಕು." ಆದರೆ ಪುಸ್ತಕದ ತುಂಬೆಲ್ಲ ಆರ್‌ಸಿ ಬಾಟಲು ಉರುಳಾಡುತ್ತಾ ಇಲ್ಲಿರುವುದೆಲ್ಲ ಒಂದು ಮಾದಕ ಲೋಕದ 'ಸತ್ಯ'ಗಳು ಮಾತ್ರವೇನೋ ಎಂಬ ಅನುಮಾನವನ್ನೂ ಹುಟ್ಟಿಸುತ್ತದೆ.

**–ಡಿ.ಎಸ್. ನಾಗಭೂಷಣ**

ಪು: **ಒಲವೆಂಬ ಮಾಯೆ**(ಪ್ರಬಂಧಗಳು) ಲೇ: **ವೆಂಕಟೇಶ ಮಾಚಕನೂರ** ಪ್ರ: **ಸಪ್ನ ಬುಕ್‌ಹೌಸ್**, ಬೆಂಗಳೂರು(೦೮೦–೪೦೧೧೪೪೫೫) ಪು:೧೬೩ ಬೆ: **ರೂ. ೧೩೦/-**

## ಗಮನ ಸೆಳೆಯುವ ವಿಶಿಷ್ಟ ಪ್ರಬಂಧಗಳು




**ಇ**ದು ಹದಿಮೂರು ಪ್ರಬಂಧಗಳನ್ನೂ ಒಂದು ಅನುವಾದಿತ ಲೇಖನವನ್ನೂ ಒಳಗೊಂಡ ಸಂಕಲನ. ಸಮಕಾಲೀನ ಸಂಗತಿಗಳೊಡನೆ ಹೊಸ ಚಿಂತನೆ ಚಿಕಿತ್ಸಕ ನೋಟ ಸಮಾಜವನ್ನು ತಿದ್ದುವ ತುಡಿತ ಇಲ್ಲಿನ ಪ್ರಬಂಧಗಳ ಮೂಲ ಆಶಯವಾಗಿದೆ.

'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಪ್ರಬಂಧದಲ್ಲಿ ವಿಧಾನ ಸೌಧ ಮತ್ತು ಬೆಳಗಾವಿಯ ಸುವರ್ಣ ಸೌಧ ಭವನಗಳ ಮುಂಭಾಗದಲ್ಲಿ ಕ್ರಮವಾಗಿ 'ಸರ್ಕಾರದ ಕೆಲಸ ದೇವರ ಕೆಲಸ' ಮತ್ತು 'ಕಾಯಕವೇ ಕೈಲಾಸ' ಎಂದು ಬರೆಸಲಾಗಿದೆಯಷ್ಟೆ. ಈ ಹೇಳಿಕೆಗಳನ್ನು ಇಟ್ಟುಕೊಂಡು ಲೇಖಕರ ವಿಚಾರ ಲಹರಿ ಹರಿಯುತ್ತದೆ. ಹೀಗೆ ಬರೆಸಿದವರ ಆಶಯ ಏನಾಗಿತ್ತು? ಈಗ ಏನಾಗುತ್ತಿದೆ? ಇದುವರೆಗೂ ಈ ಹೇಳಿಕೆಯನ್ನು ಮುಂದಿಟ್ಟುಕೊಂಡು ಯಾವೊಬ್ಬ ಮಂತ್ರಿಯೂ ಪ್ರಮಾಣವಚನ ಸ್ವೀಕರಿಸಿಲ್ಲ ಮತ್ತು ಭವನದ ಹೊರಗಡೆ ಈ ಹೇಳಿಕೆ ಬರೆಸಲಾಗಿರುವುದರಿಂದ ಒಳಗಡೆ ಇರುವ ರಾಜಕಾರಣಿಗಳು ನೌಕರರು ಈ ಬರಹದ ಆಶಯದಂತೆ ನಡೆದುಕೊಳ್ಳುವರೆ? ಅಷ್ಟಕ್ಕೂ ದೇವರ ಕೆಲಸ ಎಂದರೇನು? ಎಂದು ಇವರು ಜಿಜ್ಞಾಸೆಗೊಳಗಾಗುತ್ತಾರೆ. ಈ ಸಂಗತಿಯನ್ನು ಹಲವು ಮಗ್ಗುಲುಗಳಿಂದ ಚಿಂತಿಸುತ್ತಾ ಓದುಗರ ಆಸಕ್ತಿಯ್ನು ಸೆಳೆಯುತ್ತಾರೆ.

'ನಮ್ಮೂರ ಸೊಳ್ಳೆಗಳು' ಮತ್ತು 'ಮೆಣಸಿನ ಕಾಯಿ' ಎಂಬ ಎರಡು ಪ್ರಬಂಧಗಳಲ್ಲಿ ಕರ್ನಾಟಕದ ಪ್ರಾದೇಶಿಕ ವೈವಿಧ್ಯತೆ ಪರಿಚಯವಾಗುತ್ತದೆ. ಹಾಸ್ಯಮಿಶ್ರಿತ ವ್ಯಂಗ್ಯದೊಂದಿಗೆ ಕೂಡಿದ ಈ ಪ್ರಬಂಧಗಳು ವಸ್ತುವಿನ್ಯಾಸಗಳ ಕಾರಣಕ್ಕಾಗಿಯೂ ವಿಶಿಷ್ಟವೆನಿಸುತ್ತವೆ. ಇನ್ನು ಈ ಸಂಕಲನಕ್ಕೆ ಶೀರ್ಷಿಕೆ ಒದಗಿಸಿರುವ 'ಒಲವೆಂಬ ಮಾಯೆ' ಎಂಬ ಪ್ರಬಂಧ ಲೇಖಕರ ಅಪಾರ ಓದಿನ ಹಿನ್ನೆಲೆ ಹಾಗೂ ಅದು ವಿನ್ಯಾಸಗೊಂಡಿರುವ ರೀತಿಯಿಂದಾಗಿ ಕನ್ನಡದಲ್ಲಿ ಬಂದ ಉತ್ತಮ ಪ್ರಬಂಧಗಳ ಸಾಲಿಗೆ ನಿಲ್ಲಬಲ್ಲದಾಗಿದೆ. ಮನುಷ್ಯ ಸಂಬಂಧಗಳ ಜೀವಸೆಲೆಯಾದ ಪ್ರೀತಿ ಪ್ರೇಮ ಅದರಲ್ಲೂ ಗಂಡು ಹೆಣ್ಣಿನ ಮುಖ್ಯ ಆಕರ್ಷಣೆಯ ಒಲವಿನ ಸುತ್ತ ಈ ಬರಹ ಹರಡಿಕೊಂಡಿದೆ. ಪ್ರೀತಿ ಅದರ ಬಗೆಗಳು, ಅಲ್ಲಿರಬೇಕಾದ ನೀತಿ, ವಿವಾಹಪೂರ್ವ ಮತ್ತು ನಂತರದ ದಾಂಪತ್ಯದ ಮಾಗುವಿಕೆಯಲ್ಲಿ ಒಳಗಾಗುವವ ಪ್ರೀತಿಯ ಬಂಧ ಈ ಕುರಿತು ಅನೇಕ ವಚನಗಳಿಂದ ಕೀರ್ತನೆಗಳಿಂದ, ಕುವೆಂಪು ಬೇಂದ್ರೆ ಕವನಗಳಿಂದ ಅತ್ಯುತ್ತಮ ಸಾಲುಗಳಿಂದ ಸಜ್ಜಾಗಿ ಈ ಪ್ರಬಂಧ ಆದಿಮ ಸ್ಥಿತಿಯಿಂದ ಇಂದಿನ ಲಿವಿಂಗ್ ಟುಗೆದರ್ ಸಂಬಂಧಗಳವರೆಗೂ ಚಿಂತಿಸುತ್ತಾ ಸಮಕಾಲೀನ ಸಮಾಜದ ಚಿತ್ರಗಳನ್ನು ಕಟ್ಟಿಕೊಡುತ್ತಾ ನಮ್ಮ ಕುತೂಹಲ–ಆಸಕ್ತಿಗಳೆರಡನ್ನೂ ಕೆರಳಿಸುವಂತಿದೆ. "ಪ್ರೀತಿ ಎಂದರೆ ಪ್ರೀತಿಸುವ ವ್ಯಕ್ತಿಗಾಗಿ ತನ್ನ ಪ್ರಾಣವನ್ನೂ ನಗುಮೊಗದಿಂದ ನಿವಾಳಿಸಿ ಎಸೆದು ಬಿಡುವ ಉತ್ಕಟ ಮನಸ್ಥಿತಿ" ಎಂದು ವ್ಯಾಖ್ಯಾನಿಸುವ ಈ ಪ್ರಬಂಧವೂ ಅತ್ಯುತ್ತಮವಾಗಿದೆ.

'ದೇವರು ಧರ್ಮ ಆಧ್ಯಾತ್ಮ' ಎಂಬ ಪ್ರಬಂಧದಲ್ಲಿ ಆಸ್ತಿಕರು–ನಾಸ್ತಿಕರು ಯಾರು? ನಂಬಿಕೆಗಳೆಂದರೇನು? ನಿಜವಾದ ದೇವರು ಯಾರು? ಗಾಂಧೀಜಿ ಹೇಳುವ 'ಆಧ್ಯಾತ್ಮದ ಶಿಕ್ಷಣ, ನಮ್ಮ ಕೀರ್ತನಕಾರರು ವಚನಕಾರರು –ಹೀಗೆ ಅನೇಕ ಚಿಂತನೆ–ಚಿಂತಕರ ಅಭಿಪ್ರಾಯ–ಅಭಿವ್ಯಕ್ತಿಗಳನ್ನು ಸಂಗ್ರಹಿಸಿ ಎಲ್ಲವನ್ನೂ ತಮ್ಮದೇ ಶೈಲಿಯಲ್ಲಿ ಮಂಡಿಸಿ ಗಮನ ಸೆಳೆಯುತ್ತಾರೆ. ಆದರೆ ಬಹುಚರ್ಚಿತವಾದ ಎ.ಎನ್. ಮೂರ್ತಿರಾಯರ 'ದೇವರು' ಕೃತಿ ಈ ಲೇಖಕರಿಂದ ಹೇಗೆ ತಪ್ಪಿಸಿಕೊಂಡಿತು ಎಂದು ಅಚ್ಚರಿಯಾಗುತ್ತದೆ. ಬಿಎಂಶ್ರೀಯವರ 'ಕನ್ನಡ ತಲೆ ಎತ್ತುವ ಬಗೆ' ಎಂಬ ಪ್ರಬಂಧದ ಮುಂದುವರಿಕೆಯಂತೆ ಕಾಣುವ ಗೂಗಿವಾ ಥಿಯಾಂಗೊ ನ 'ವಸಾಹತು ಮನದ ಬಿಡುಗಡೆ' ಎಂಬ ಉತ್ತಮವಾದ ಅನುವಾದಿತ ಲೇಖನವು ಭಾಷೆ, ಸಂಸ್ಕೃತಿ, ಕಲಿಕಾ ಮಾಧ್ಯಮ ಕುರಿತಾಗಿದ್ದು ಕನ್ನಡದ ಸಮಕಾಲೀನ ಸಮಸ್ಯೆಗಳ ಹಿನ್ನೆಲೆಯಿಂದಾಗಿ ಪ್ರಸ್ತುತವೆನ್ನಿಸುತ್ತದೆ. ಇನ್ನುಳಿದಂತೆ 'ರಾಜಕೀಯ ನಿಘಂಟು', 'ಪುಸ್ತಕ ಬಿಡುಗಡೆ', 'ಕಾಗುಣಿತಗಳ ಕಷ್ಟ', 'ಬಡ್ಡಿಮಕ್ಕಳು' ಮುಂತಾದ ಪ್ರಬಂಧಗಳು ತಮ್ಮ ಸರಳ ಭಾಷೆ ಮತ್ತು ಆಕರ್ಷಕ ಶೈಲಿಗಳಿಂದ ಮೆಚ್ಚುವಂತಿವೆಯಾದರೂ, ಇವುಗಳಲ್ಲಿ ಕೆಲವು ತಮ್ಮ ಅತಿ ವಾಚಾಳಿತನದಿಂದ, ಎಷ್ಟು ಪರಿಣಾಮಕಾರಿ ಆಗಬಹುದಿತ್ತೋ ಅಷ್ಟಾಗದೇ ಸೊರಗಿವೆ. ಆದರೆ ಒಟ್ಟಾರೆ ಹೇಳುವುದಾದರೆ ಈ ಸಂಕಲನದ ಮೂಲಕ ಕನ್ನಡಕ್ಕೆ ಒಬ್ಬ ಉತ್ತಮ ಪ್ರಬಂಧಕಾರರು ಪರಿಚಯವಾದಂತಾಗಿದೆ.

**–ಮಂಜುಳಾ ಎಂ. ರಾಜು**

'ಹೊಸ ಮನುಷ್ಯ' ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು



**ತುಂಬಾಡಿ ರಾಮಯ್ಯ**

ಮತ್ತು **ಕುಟುಂಬ**

ಬೆಂಗಳೂರು

'ಹೊಸ ಮನುಷ್ಯ' ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು



**ಕಡಿದಾಳ್ ಪ್ರಕಾಶ್**

**ಮತ್ತು ಕುಟುಂಬ**

**ಕಡಿದಾಳು(ತೀರ್ಥಹಳ್ಳಿ)**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



**ಮಲ್ಲಿಕಾರ್ಜುನ ಹುಲಗಬಾಳಿ**
ಮತ್ತು ಕುಟುಂಬ
ಬನಹಟ್ಟಿ(ಬಾಗಲಕೋಟೆ ಜಿ.)

## ತಿಂಗಳ ಕೊನೆಯ ಸಾಲುಗಳು



ಮನುಷ್ಯನೇ ಆಗಲಿ,
ಮೇಣದ ಬತ್ತಿಯೇ ಆಗಲಿ,
ನೆತ್ತಿಯ ಮೇಲಿನ ಕೊಬ್ಬು ಕರಗುವವರೆಗೆ
ಬೆಳಕು ಮೂಡುವುದಿಲ್ಲ

–ಕಬೀರ

ಶುಭಾಶಯಗಳೊಂದಿಗೆ,

**ಗೋ. ತಿಪ್ಪೇಶ್**
ಮತ್ತು ಕುಟುಂಬ
ಹೊಸದುರ್ಗ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)